ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ



ಕರ್ನಾಟಕ ಲೋಕಸೇವಾ ಆಯೋಗದ (ಕೆಪಿಎಸ್‌ಸಿ) ಅಕ್ರಮ ಪ್ರಕರಣದ ಆರೋಪಿಗಳಾದ ಐಎಎಸ್ ಅಧಿಕಾರಿ ಫ್ಯಾನೇಂದ್ರ ಕುಮಾರ್ ಗಂಗ್ವಾರ್ ಹಾಗೂ ಮಧ್ಯವರ್ತಿ ಬಸವರಾಜ್ ಕನ್ನಾಳಿ ಅವರನ್ನು ಬುಧವಾರ ಜೈಲಿಗೆ ಕಳುಹಿಸಲಾಯಿತು.

10 ಸೆಪ್ಟೆಂಬರ್, 2026 ಗುರುವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ -179 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629



ಮತ ವಂಚಿತರೇ ದೇಶ ಬಿಟ್ಟು ತೆರಳಲು ಸಜ್ಜಾಗಿ ! » 2



ರಸ್ತೆ ಬದಿ ವ್ಯಾಪಾರ ತೆರವುಗೊಳಿಸಲು ಕಾಲಾವಕಾಶ 3



ಸಮಾಜದ ಪ್ರತಿಯೊಬ್ಬರಿಗೂ ಕಾನೂನು ನೆರವು ಸಿಗಲಿ » 4

# ಇಡಿ ದಾಳಿ : ಜಾರಕಿಹೊಳಿ ಬೆಂಬಲಕ್ಕೆ ಸರ್ಕಾರ

## ಶಾಸಕರು, ಸಚಿವರು ಎಚ್ಚರ ವಹಿಸುವಂತೆ ಸಿಎಂ ಸಲಹೆ

• ಪ್ರಜೋದಯ ವರದಿ

**ಬೆಂಗಳೂರು** : ಆಫ್ರಿಕಾದ ಗಣಿ ಕಂಪನಿಯೊಂದರಲ್ಲಿ ಅಕ್ರಮವಾಗಿ ವಿದೇಶಿ ಹೂಡಿಕೆ ಮಾಡಿದ ಆರೋಪ ಸಂಬಂಧ ಜಾರಿ ನಿರ್ದೇಶನಾಲಯ (ಇ.ಡಿ) ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಹಾಗು ಆಪ್ತರ ನಿವಾಸಗಳ ಮೇಲೆ ಬುಧವಾರ ಏಕಕಾಲಕ್ಕೆ ದಾಳಿ ಮಾಡಿದೆ.

ಬೆಂಗಳೂರು, ಬೆಳಗಾವಿ, ಗೋಕಾಕ ಮತ್ತು ಮಹಾರಾಷ್ಟ್ರದ ವಿವಿಧೆಡೆ ದಾಳಿ ನಡೆದಿದ್ದು, ಸತೀಶ್ ಜಾರಕಿಹೊಳಿ ಅವರ ಸಂಬಂಧಿಕರು ಮತ್ತು ಆಪ್ತರನ್ನೂ ಗುರಿಯಾಗಿಸಿಕೊಳ್ಳಲಾಗಿದೆ. ಜೂನ್ 24 ರಂದು ಜಾರಕಿಹೊಳಿ ಅವರ ಸಂಬಂಧಿ ಮನೆ, ಕಚೇರಿ ಮೇಲೆ ದಾಳಿ ನಡೆದಿತ್ತು. ಆ ವೇಳೆ 13.03 ಕೋ.ರೂ.ಮೌಲ್ಯದ ಆಸ್ತಿ ವಶಕ್ಕೆ ಪಡೆಯಲಾಗಿತ್ತು. ಮಂಜುನಾಥ್ ಹಾಗು ಸತೀಶ್ ಜಾರಕಿಹೊಳಿ ಅವರ ಪುತ್ರ ರಾಹುಲ್ ಜಾರಕಿಹೊಳಿ ಹಲವು ಉದ್ಯಮಗಳಲ್ಲಿ ಪಾಲುದಾರರಾಗಿದ್ದಾರೆಂಬ ವಿಷಯವು ದಾಖಲೆ ಪರಿಶೀಲನೆ ವೇಳೆ ತಿಳಿದು ಬಂದಿತ್ತು. ಈ ಹಿನ್ನಲೆಯಲ್ಲಿ ಬುಧವಾರ ಮತ್ತೊಮ್ಮೆ ದಾಳಿ ನಡೆದಿದೆ. ದಾಳಿಯಲ್ಲಿ ಬೆಂಗಳೂರು



ಹಾಗು ಗೋವಾದ ಇಡಿ ಅಧಿಕಾರಿಗಳ ತಂಡವಿದೆ. ಅರೆಸೇನಾ ತುಕಡಿಯನ್ನು ಭದ್ರತೆಗೆ ವಹಿಸಲಾಗಿತ್ತು.

ಸತೀಶ್ ಜಾರಕಿಹೊಳಿ ಮೇಲಿನ ಇಡಿ ದಾಳಿ ರಾಜಕೀಯ ಪ್ರೇರಿತ ವೆಂದಿರುವ ಆಡಳಿತಾರೂಢ ಕಾಂಗ್ರೆಸ್, ಕೇಂದ್ರ ಸರ್ಕಾರ ತನ್ನ ರಾಜಕೀಯ ವಿರೋಧಿಗಳನ್ನು ಹಣಿಯಲು ತನಿಖಾ ಸಂಸ್ಥೆಗಳನ್ನು ಬಳಸಿ ಕೊಳ್ಳುತ್ತಿದೆ. ಬಿಜೆಪಿ ತನ್ನ ರಾಜಕೀಯ ವಿರೋಧಿಗಳ ವಿರುದ್ಧ ತನಿಖಾ ಸಂಸ್ಥೆಗಳನ್ನು ಛೂ ಬಿಡುವುದು ಹೊಸದೇನಲ್ಲವೆಂದು ಕಾಂಗ್ರೆಸ್ ಆರೋಪಿಸಿದೆ.

ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಕೂಡ ಸತೀಶ್ ಜಾರಕಿಹೊಳಿ ಅವರ ಮೇಲಿನ ಇಡಿ ದಾಳಿಯನ್ನು ರಾಜಕೀಯ ಪ್ರೇರಿತವೆಂದಿದ್ದು, ತಮ್ಮ ಸಂಪುಟದ ಮತ್ತಷ್ಟು ಸಚಿವರ ಮೇಲೆ ಇಡಿ ದಾಳಿ ನಡೆಯಬಹುದು. ಸತೀಶ್ ಜಾರಕಿ ಹೊಳಿ ಅವರು ದಲಿತ ನಾಯಕರು, ಅವರು ರಾಜಕೀಯವಾಗಿ ಬೆಳೆಯು ವುದನ್ನು ಸಹಿಸದೆ ಬಿಜೆಪಿಯವರು ಹೀಗೆ ಮಾಡುತ್ತಿದ್ದಾರೆ. ಇದು ಮುಂದೆ ಅವರಿಗೇ ತಿರುಗು ಬಾಣ ವಾಗಲಿದೆ ಎಂದು ಎಚ್ಚರಿಸಿದ್ದಾರೆ.

ಕಾಂಗ್ರೆಸ್ ಸರ್ಕಾರ ಮತ್ತು ಪಕ್ಷವನ್ನು ರಾಜಕೀಯವಾಗಿ ಗುರಿ ಯಾಗಿಸಲು ಇಡಿಯನ್ನು ಅಸ್ತ್ರವಾಗಿ ಬಳಸಿಕೊಳ್ಳಲಾಗುತ್ತಿದೆ. ಸುಳ್ಳು ಕಥೆ ಕಟ್ಟಿ ಜನರನ್ನು ತಪ್ಪುದಾರಿಗೆ ಎಳೆಯುವ ದುಷ್ಟ ಪ್ರಯತ್ನ ನಡೆಯು ತ್ತಿದೆ. ಡಿ.ಕೆ.ಶಿವಕುಮಾರ್ ಸರ್ಕಾರಕ್ಕೆ 100 ದಿನಗಳು ತುಂಬುತ್ತಿರುವುದನ್ನು ಬಿಜೆಪಿಗೆ ಸಹಿಸಿಕೊಳ್ಳಲು ಆಗುತ್ತಿಲ್ಲವೆಂದು ಡಿ.ಕೆ.ಶಿವಕುಮಾರ್ ಅವರು ಗುಡುಗಿದ್ದಾರೆ.

ಈ ಕುರಿತು ಪ್ರತಿಕ್ರಿಯಿಸಿರುವ ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅವರು, ಇದು ವಿರೋಧ ಪಕ್ಷಗಳನ್ನು ಗುರಿಯಾಗಿಸಿ ಕೊಂಡು ನಡೆಸಿದ ದಾಳಿ. ಇಂತಹ ದಾಳಿಗಳನ್ನು ಮಾಡಿಸಿ ಕೇಂದ್ರ ಸರ್ಕಾರ ನಮ್ಮನ್ನು ಬೆದರಿಸಲು ಸಾಧ್ಯವಿಲ್ಲ. ಕರ್ನಾಟಕದಲ್ಲಿ ಬಿಜೆಪಿ ಸ್ಥಿತಿ ಡೋಲಾಯಮಾನವಾಗಿದೆ. ಮುಂದಿನ ವಿಧಾನಸಭೆ ಚುನಾವಣೆಯನ್ನು ಕೇಂದ್ರ ಸರ್ಕಾರ ಸಿಬಿಐ, ಇಡಿ, ಐಟಿಯೊಂದಿಗೆ ಮಾಡಲು ಯೋಜಿಸುತ್ತಿದೆಯೇ ಹೊರತು ಬಿಜೆಪಿ ನಾಯಕರೊಂದಿಗೆ ಅಲ್ಲವೆಂದು ಟೀಕಿಸಿದರು.

ಇಡಿ ದಾಳಿಯನ್ನು ವಿರೋಧಿಸಿರುವ ಕೆಪಿಸಿಸಿ ಅಧ್ಯಕ್ಷ ಬಿ.ಕೆ.ಹರಿಪ್ರಸಾದ್ ಅವರು, ಬಿಜೆಪಿ ಎಸ್.ಟಿ ನಾಯಕರನ್ನು ಟಾರ್ಗೆಟ್ ಮಾಡುತ್ತಿದೆ. ಕರ್ನಾಟಕ ಕಾಂಗ್ರೆಸ್ ಘಟಕ ಮತ್ತು ಸರ್ಕಾರ ಸಂಪೂರ್ಣವಾಗಿ ಸತೀಶ್ ಜಾರಕಿಹೊಳಿ ಬೆಂಬಲಕ್ಕೆ ನಿಲ್ಲಲಿದೆ ಎಂದು ತಿಳಿಸಿದ್ದಾರೆ.

### ಇನ್ನಷ್ಟು ದಾಳಿಗಳು ನಡೆಯಲಿವೆ : ಡಿ.ಕೆ.ಶಿ.

ಮುಂದಿನ ದಿನಗಳಲ್ಲಿ ಇನ್ನೂ ಹಲವು ಕಾಂಗ್ರೆಸ್ ನಾಯಕರು, ಸಚಿವರು ಮತ್ತು ಶಾಸಕರ ಮೇಲೆ ತನಿಖಾ ಸಂಸ್ಥೆಗಳು ದಾಳಿ ನಡೆಸುವ ಸಾಧ್ಯತೆ ಇದೆ. ಹೀಗಾಗಿ ಪಕ್ಷದ ಎಲ್ಲಾ ಶಾಸಕರು ಮತ್ತು ಸಚಿವರಿಗೆ ಎಚ್ಚರಿಕೆಯಿಂದ ಇರುವಂತೆ ಈಗಾಗಲೇ ಸೂಚನೆ ನೀಡಿದ್ದೇನೆ. ಬಿಜೆಪಿ ನಾಯಕರ ವಿರುದ್ಧ ಮಾತ್ರ ಯಾವುದೇ ದಾಳಿ ನಡೆಯುವುದಿಲ್ಲ. ಭೋವಿ ಹಗರಣದ ಬಗ್ಗೆ ಇಡಿ ಅವರು ಏಕೆ ಪ್ರವೇಶ ಮಾಡಲಿಲ್ಲ. ಬಿಡದಿ, ನೈಸ್ ಯೋಜನೆಗೆ ಸಹಿ ಹಾಕಿ ಆರಂಭಿಸಿದವರು ಬಿಜೆಪಿಯವರು. ಆದರೆ, ಆರೋಪ ಮಾಡುವುದು ನಮ್ಮ ವಿರುದ್ಧ. ಸತ್ಯ ಆಚೆ ಬರಲಿದೆ. ಸರ್ಕಾರ ಸತೀಶ್ ಜಾರಕಿಹೊಳಿ ಅವರ ನೂರಕ್ಕೆ ನೂರು ಬೆಂಬಲ ನೀಡುತ್ತೇವೆಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು

# ಕೆರೆ ಕೋಡಿ ಒಡೆದು ಆಹಾರ ಗೋದಾಮು ಜಲಾವೃತ





• ಪ್ರಜೋದಯ ವರದಿ

**ಅರಕಲಗೂಡು** : ಪಟ್ಟಣದ ಭಂಗಿ ತಿಮ್ಮನ ಕೊಪ್ಪಲು ಗ್ರಾಮದ ಕೆರೆ ಕೋಡಿ ಒಡೆದು ಅಪಾರ ಪ್ರಮಾಣದ ನೀರು ಪಕ್ಕದಲ್ಲಿನ ಕರ್ನಾಟಕ ರಾಜ್ಯ ಆಹಾರ ಉಗ್ರಾಣ ನಿಗಮ ಗೋದಾಮು ಆವರಣಕ್ಕೆ ನುಗ್ಗಿ ಜಲಾವೃತಗೊಳಿಸಿ ಆತಂಕ ಸೃಷ್ಟಿಸಿತು.

ಬುಧವಾರ ಮುಂಜಾನೆ ಕೆರೆಯಲ್ಲಿ ಅಪಾರ ಪ್ರಮಾಣದ ನೀರು ಸಂಗ್ರಹವಾಗಿದ್ದು,ನೀರಿನ ಒತ್ತಡ ತಡೆಯಲಾಗದೇ ಕೋಡಿ ಒಡೆದಿದೆ. ಈ ಪರಿಣಾಮ ತಗ್ಗು ಪ್ರದೇಶದಲ್ಲಿ ನಿರ್ಮಾಣಗೊಂಡಿರುವ ಆಹಾರ ನಿಗಮ ಗೋದಾಮು ಆವರಣ ಸಂಪೂರ್ಣವಾಗಿ ಜಲಾವೃತಗೊಂಡಿತು. ಕಟ್ಟಡ ಸುತ್ತ ಚರಂಡಿ ಹಾಗೂ ಕಟ್ಟಡ ಎತ್ತರದಲ್ಲಿದ್ದ ಹಿನ್ನೆಲೆ ಗೋದಾಮು ಒಳಗೆ ನೀರು ಹೋಗಿಲ್ಲ. ಇಲ್ಲವಾಗಿದ್ದರೇ ಲಕ್ಷಾಂತರ ಚೀಲ ರಾಗಿ, ಅಕ್ಕಿ, ಗೋಧಿ ಸೇರಿ ಇತರೆ ಆಹಾರ ಪದಾರ್ಥಗಳು ನೀರಿನಲ್ಲಿ ನಾಶ ಹೊಂದುವ ಸಾಧ್ಯತೆ ಇತ್ತು.

ಕಳೆದ ಎರಡು ವಾರಗಳಿಂದಲೂ ಅಡಿಕೆ ಬೊಮ್ಮನಹಳ್ಳಿ ಏತನೀರಾವರಿ ನಾಲೆಗಳಿಗೆ ನೀರು ಹರಿಸಲಾಗುತ್ತಿದ್ದು, ಕಳೆದ ಎರಡು ದಿನಗಳ ಹಿಂದೆಯೇ ಭಂಗಿತಿಮ್ಮನ ಕೊಪ್ಪಲು ಕೆರೆ ಭರ್ತಿಯಾಗಿತ್ತು. ಹೆಚ್ಚಿನ ನೀರು ಕೋಡಿ ಮೂಲಕ ಹರಿಯಬೇಕಿದ್ದು, ಕೋಡಿ ದುರಸ್ತಿಗೆ ಒಳಗಾದ ಪರಿಣಾಮ ಇಡೀ ಕೋಡಿಯನ್ನು ಒಡೆದುಕೊಂಡು ನೀರು ಹಳ್ಳಕ್ಕೆ ಹರಿದಿದೆ.ಇದರಿಂದ ಇಡೀ ಕೆರೆ ನೀರು ಖಾಲಿಯಾಗಿದೆ.

ಭಂಗಿ ತಿಮ್ಮನ ಕೊಪ್ಪಲು ಗ್ರಾಮದ ಸುತ್ತಾಮುತ್ತಾ ಇದ್ದ ಕೃಷಿ ಪ್ರದೇಶ ಜನವಸತಿಯಾಗಿ ಮಾರ್ಪಟ್ಟಿದೆ. ಕೆರೆ ನೀರು ಬಳಕೆ ಮಾಡಿಕೊಂಡು ಕೃಷಿ ಚಟುವಟಿಕೆಗಳು ನಡೆಯುತ್ತಿಲ್ಲ. ಜನವಸತಿ, ಆಹಾರ ನಿಗಮ ಗೋದಾಮು ನಿರ್ಮಾಣ ಮಾಡುವ ವೇಳೆ ಕೆರೆ ನೀರು ಮುಂದೆ ಹೋಗಲು ಸೂಕ್ತವಾದ ಕೋಡಿಯನ್ನು ನಿರ್ಮಿಸಿಲ್ಲ.ಈ ಸಲುವಾಗಿಯೇ ಕೆರೆ ನೀರು ಒತ್ತಡಕ್ಕೆ ಒಳಗಾಗಿ ಕೋಡಿಯನ್ನು ಒಡೆದುಕೊಂಡು ಪೋಲಾಗಿದೆ ಎಂದು ಸ್ಥಳೀಯರು ದೂರಿದ್ದಾರೆ.

# ಕತ್ತರಿಯಿಂದ ಚುಚ್ಚಿ ವ್ಯಕ್ತಿ ಕೊಲೆ

• ಪ್ರಜೋದಯ ವರದಿ

**ಹಾಸನ** : ಸಾಲ ಪಡೆದಿದ್ದ ಹಣ ನೀಡುವಂತೆ ಕೇಳಿದ್ದಕ್ಕೆ ಗಲಾಟೆ ಮಾಡಿದ ವ್ಯಕ್ತಿಯೊಬ್ಬ ತನ್ನ ಭಾವನನ್ನು ಕತ್ತರಿಯಿಂದ ಚುಚ್ಚಿ ಕೊಲೆ ಮಾಡಿರುವ ಘಟನೆ ಬೇಲೂರು ತಾಲ್ಲೂಕಿನ ಅರೇಹಳ್ಳಿಯಲ್ಲಿ ನಡೆದಿದೆ.

ಅರೇಹಳ್ಳಿಯ ಅಹಮದ್ ಸಿದಿಕ್ ಮೃತಪಟ್ಟಿದ್ದಾರೆ. ಕೊಲೆ ಆರೋಪಿ ಸುಜಿತ್ ತಲೆ ಮರೆಸಿಕೊಂಡಿದ್ದಾನೆ. ಅಹಮದ್ ಸಿದಿಕ್ ಪತ್ನಿ ನಿಶಾ ಭಾನು ಅವರು ತಂಗಿ ದಿವ್ಯಾಗೆ 55 ಸಾವಿರ ರೂ.ಗಳನ್ನು ಸಾಲವಾಗಿ ಬೇರೆಯವರಿಂದ ಪಡೆದು ಕೊಟ್ಟಿದ್ದರು. ಸಮಯಕ್ಕೆ ಸರಿಯಾಗಿ ಸಹೋದರಿ ಸಾಲ ಮರು ಪಾವತಿಸದ ಹಿನ್ನಲೆಯಲ್ಲಿ ನಿಶಾ ಅವರೇ ಕಂತಿನ ರೂಪದಲ್ಲಿ ಸಾಲ ತೀರಿಸುತ್ತಿದ್ದರು. ಈ ವಿಚಾರವಾಗಿ ಅಹಮದ್ ಸಿದಿಕ್ ಹೆಂಡತಿ ಜೊತೆ ಜಗಳವಾಡಿ ಕಂತು ಕಟ್ಟದಂತೆ ಸೂಚಿಸಿದ್ದ. ಇದೇ ವಿಚಾರವಾಗಿ ಮಂಗಳವಾರ ಸಿದಿಕ್ ಹಾಗು ಸುಜಿತ್ ಮಧ್ಯೆ ಫೋನ್ ಕರೆಯಲ್ಲಿ ಜೋರು ವಾಗ್ವಾದ ನಡೆದಿದೆ. ಹಣ ಕಟ್ಟುವುದಿಲ್ಲವೆಂದು ಸುಜಿತ್ ಹೇಳಿದ್ದಕ್ಕೆ ಸಿದಿಕ್ ಅವಾಚ್ಯ ಪದಗಳಿಂದ ನಿಂದಿಸಿದ್ದ ಎನ್ನಲಾಗಿದೆ. ಸಂಜೆ ಸಿದಿಕ್ ರೋಟರಿ ಕ್ಲಬ್ ಹತ್ತಿರ ಕಾಲ್ನಡಿಗೆಯಲ್ಲಿ ಹೋಗುತ್ತಿದ್ದಾಗ ಎದುರಾದ ಸುಜಿತ್, ಏಕಾ ಏಕಿ ವಾಗ್ವಾದ ಪ್ರಾರಂಭಿಸಿ ಜೊತೆಗೆ ತಂದಿದ್ದ ಕತ್ತರಿಯಿಂದ ಮುಖ, ತಲೆ, ಬೆನ್ನಿಗೆ ಚುಚ್ಚಿದ್ದಾನೆ. ಗಾಯಗೊಂಡಿದ್ದ ಸಿದಿಕ್ ಅವರನ್ನು ಸ್ಥಳೀಯ ಆಸ್ಪತೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಲಾಯಿತು. ವೈದ್ಯರ ಸೂಚನೆ ಮೇರೆಗೆ ಬೆಂಗ ಳೂರಿನ ಆಸ್ಪ ತ್ರೆಗೆ ದಾಖಲಿಸಲಾಗಿ ತ್ತಾದರೂ ಚಿಕಿತ್ಸೆಗೆ ಸ್ಪಂದಿಸದೆ ಬುಧವಾರ ಮೃತಪಟ್ಟಿದ್ದಾರೆ. ಅರೇಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಅಪರಿಚಿತ ವಾಹನ ಡಿಕ್ಕಿ : ಬೈಕ್ ಸವಾರ ಸಾವು

• ಪ್ರಜೋದಯ ವರದಿ

ಚನ್ನರಾಯಪಟ್ಟಣ: ಅಪರಿಚಿತ ವಾಹನ ಡಿಕ್ಕಿಯಾಗಿ ಬೈಕ್ ಸವಾರ ಮೃತಪಟ್ಟಿರುವ ಘಟನೆ ನಾಗಮಂಗಲ-ಶ್ರವಣಬೆಳಗೊಳ ರಸ್ತೆಯ ಮಂಜುನಾಥಪುರ ಗ್ರಾಮದಲ್ಲಿ ನಡೆದಿದೆ.

ಸಾಣೇಹಳ್ಳಿಕೊಪ್ಪಲು ಗ್ರಾಮದ ಎಸ್.ನಾಗರಾಜು ಮೃತರು. ಮಂಗಳವಾರ ಕೆಲಸ ಮುಗಿಸಿ ಮನೆಗೆ ಹೋಗುತ್ತಿದ್ದಾಗ ಅಪರಿಚಿತ ವಾಹನ ಡಿಕ್ಕಿಯಾಗಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಶ್ರವಣಬೆಳಗೂಳ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಜಾನುವಾರುಗಳ ಕುಡಿಯುವ ನೀರು-ಮೇವಿಗೂ ಬರದ ಛಾಯೆ

-ಮಲ್ಲಿಕಾರ್ಜುನ ಕೊಚ್ಚರಗಿ

• ಪ್ರಜೋದಯ ವರದಿ

**ಹಾಸನ:** ಮುಂಗಾರು ಮಳೆ ಕೈ ಕೊಟ್ಟಿರುವ ಹಿನ್ನಲೆಯಲ್ಲಿ ಜಿಲ್ಲಾದ್ಯಂತ ತೀವ್ರ ಬರದ ಛಾಯೆ ಆವರಿಸಿದ್ದು, ಜಾನವಾರುಗಳ ಮೇವಿಗೆ ಕೊರತೆಯ ಆತಂಕ ಕಾಡುತ್ತಿದೆ.

ಹೈನುಗಾರಿಕೆಯಿಂದಲೇ ಆರ್ಥಿಕ ಸ್ವಾವಲಂಬನೆ ಸಾಧಿಸಿರುವ ರೈತರಿಗೆ ಬರ ಸಿಡಿಲಾಘಾತ ನೀಡಿದೆ. ದನಕರುಗಳ ಮೇವು, ಕುಡಿಯುವ ನೀರಿಗೆ ಸಮಸ್ಯೆಯಾಗಂತೆ ಸರ್ಕಾರ ಮುನ್ನೆಚ್ಚರಿಕೆ ಕ್ರಮ ವಹಿಸಿದ್ದು, ಒಟ್ಟು 25,420 ಮೇವಿನ ಕಿಟ್‌ಗಳನ್ನು ವಿತರಿಸಲು ಯೋಜನೆ ರೂಪಿಸಿದೆ. ಮುಂದಿನ ವಾರದಲ್ಲಿ ಮೇವಿನ ಕಿಟ್ ಜಿಲ್ಲೆಗೆ ಬರಲಿದ್ದು, ಪಶು ಚಿಕಿತ್ಸಾಲಯಗಳ ಮೂಲಕ ಅರ್ಹ ರೈತರಿಗೆ ವಿತರಿಸಲು ತಯಾರಿ ಮಾಡಿಕೊಳ್ಳಲಾಗಿದೆ. ಸದ್ಯದ ಪರಿಸ್ಥಿತಿ ಪ್ರಕಾರ ಮುಂದಿನ 27 ವಾರಗಳಿಗೆ ಆಗುವಷ್ಟು ಮಾತ್ರ ಮೇವು ದಾಸ್ತಾನಿದೆ. ಚನ್ನರಾಯಪಟ್ಟಣ ಮತ್ತು ಅರಸೀಕೆರೆ ತಾಲ್ಲೂಕಿನಲ್ಲಿ ಪರಿಸ್ಥಿತಿ ಬಿಗಡಾಯಿಸಿದ್ದು, ರೈತರು ಚಿಂತಾಕ್ರಾಂತರಾಗಿದ್ದಾರೆ.

- 27 ವಾರಕ್ಕೆ ಆಗುವಷ್ಟು ಮೇವು ದಾಸ್ತಾನು
- ಕಿಟ್ ವಿತರಣೆಗೆ ಸಿದ್ಧತೆ

### ಸರ್ಕಾರಕ್ಕೆ ಮೇವು ಒದಗಿಸಲು ಒಡಂಬಡಿಕೆ

ರಾಜ್ಯದಲ್ಲಿ ಮಳೆಯ ಕೊರತೆಯಿಂದ ಜಾನುವಾರುಗಳಿಗೆ ಮೇವಿನ ಕೊರತೆ ಉಂಟಾಗದಂತೆ ಮುಂಜಾಗ್ರತಾ ಕ್ರಮವಾಗಿ ಅರ್ಹ ರೈತರಿಗೆ ಮೇವಿನ ಕಿಟ್ ವಿತರಿಸಲು ಎಸ್‌ಡಿಆರ್‌ಎಫ್ ನಿಧಿಯಿಂದ 25 ಕೋ.ರೂ. ಬಿಡುಗಡೆಯಾಗಿದೆ. ಮೇವು ಕಿಟ್ ವಿತರಣೆಯ ಸಂಪೂರ್ಣ ಜವಾಬ್ದಾರಿಯನ್ನು ಜಿಲ್ಲಾ ಪಂಚಾಯಿತಿ ಮುಖ್ಯಕಾರ್ಯ ನಿರ್ವಹಣಾಧಿಕಾರಿಗೆ ವಹಿಸಿದ್ದು, ರೈತರೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲು ಸೂಚಿಸಲಾಗಿದೆ. ರೈತರು ಬೆಳೆದ ಮೇವನ್ನು ಸರ್ಕಾರಕ್ಕೆ ಒದಗಿಸುವ ವ್ಯವಸ್ಥೆ ರೂಪಿಸಬೇಕು. ಆ ಮೂಲಕ ತಮ್ಮದೇ



**ಜಿಲ್ಲೆಗೆ ನಿಗದಿಯಾದ ಮೇವು ಕಿಟ್ ವಿವರ**

| ತಾಲ್ಲೂಕು | 5 ಕೆ.ಜಿ. ತೂಕದ ಕಿಟ್ |
|---|---|
| ಆಲೂರು | 1318 |
| ಅರಕಲಗೂಡು | 3560 |
| ಅರಸೀಕೆರೆ | 4534 |
| ಬೇಲೂರು | 2568 |
| ಚನ್ನರಾಯಪಟ್ಟಣ | 5028 |
| ಹಾಸನ | 4252 |
| ಹೊಳೆನರಸೀಪುರ | 3123 |
| ಸಕಲೇಶಪುರ | 1036 |

ಯಾದ ಮೇವು ಉತ್ಪಾದನಾ ಸೌಲಭ್ಯವನ್ನು ಹೊಂದಿರದ ಹಾಗು ಮೇವಿಗಾಗಿ ತೊಂದರೆ ಅನುಭವಿಸು ತ್ತಿರುವ ಅಗತ್ಯವಿರುವ ಜಾನುವಾರು ಮಾಲೀಕರಿಗೆ ಸರ್ಕಾರದ ವತಿಯಿಂದ ಮೇವು ವಿತರಿಸಲು ಕ್ರಮ ವಹಿಸಲಾಗಿದೆ.

**196 ಹಳ್ಳಿಗಳಲ್ಲಿ ಗಂಭೀರ ಸಮಸ್ಯೆ**

ಜಿಲ್ಲಾದ್ಯಂತ 5.21 ಲಕ್ಷ ಜಾನುವಾರುಗಳಿದ್ದು, ಹೈನುಗಾರಿಕೆಯೇ ಜಿಲ್ಲೆಯ ಜನರಿಗೆ ಆರ್ಥಿಕ ಆಧಾರವಾಗಿದೆ. ನಿತ್ಯ 16 ಲಕ್ಷ ಲೀ. ಹಾಲು ಸಂಗ್ರಹ ಮೂಲಕ ಹಾಸನ ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದಿದೆ. ಈ ಬಾರಿ ಬರದಿಂದ ಆದಾಯಕ್ಕೆ ಕತ್ತರಿ ಬಿದ್ದಿದೆ. ಜಿಲ್ಲೆಯ 196 ಹಳ್ಳಿಗಳಲ್ಲಿ ಮುಂದಿನ ದಿನಗಳಲ್ಲಿ ಮೇವಿಗೆ ಕೊರತೆಯಾಗುವ ಸಾಧ್ಯತೆ ಇದೆ. ಆಲೂರಿನ 24, ಅರಕಲಗೂಡು 5, ಅರಸೀಕೆರೆ 71, ಬೇಲೂರು 0, ಚನ್ನರಾಯಪಟ್ಟಣ 46, ಹಾಸನ 43, ಹೊಳೆನರಸೀಪುರ 7 ಹಾಗು ಸಕಲೇಶಪುರದ 0 ಗ್ರಾಮಗಳಲ್ಲಿ ಮೇವಿಗೆ ಕೊರತೆಯಾಗಲಿದೆ ಎಂದು ಅಂದಾಜಿಸಲಾಗಿದೆ. ಪ್ರತಿದಿನ ಒಂದು ಹಸುವಿಗೆ 6 ಕೆ.ಜಿ. ಹುಲ್ಲಿನಂತೆ ಪಶುಪಾಲನಾ ಇಲಾಖೆ ಲೆಕ್ಕ ಹಾಕಿದ್ದು, ಮುಂಬರುವ ದಿನಗಳಲ್ಲಿ ಸಮಸ್ಯೆಯಾಗದಂತೆ ನಿಗಾ ವಹಿಸಲಾಗಿದೆ.

ತಾಲ್ಲೂಕುವಾರು ಮೇವಿನ ಲಭ್ಯತೆ

ಬೇಲೂರು ತಾಲ್ಲೂಕಿನಲ್ಲಿ ಮೇವಿನ ಸಮೀಕ್ಷೆ ನಡೆಸಲಾಗಿದ್ದು, ರೈತರು ತಮ್ಮ ಸ್ವಂತ ಜಮೀನುಗಳಲ್ಲಿ ಜೋಳ, ಹೈಬ್ರಿಡ್ ನೆಪೀಯರ್ ಮುಂತಾದ ಉತ್ತಮ ತಳಿಯ ಮೇವಿನ ಬೆಳೆಗಳ 4,807 ಟನ್ ಮೇವನ್ನು ಹಾಗು ರಸಮೇವಾಗಿ ಪರಿವರ್ತಿಸಿರುವ ಮೆಕ್ಕೆ ಜೋಳದ 61,378 ಟನ್ ಮೇವು ಹಾಗು ಬಣವೆ ಹಾಗು ವಿವಿಧ ರೂಪದಲ್ಲಿ ಸಂಗ್ರಹಿಸಲಾದ 9,735 ಟನ್ ಒಣ ಮೇವು ಸಂಗ್ರಹಿಸಲಾಗಿದೆ. ಹೊಳೆನರಸೀಪುರ ತಾಲ್ಲೂಕಿನಲ್ಲಿ 6,914 ಟನ್ ಹಸಿರು ಮೇವು, 72,424 ಟನ್ ಒಣ ಮೇವು ಲಭ್ಯವಿದೆ. ಹಾಸನ ತಾಲ್ಲೂಕಿನಲ್ಲಿ 59,562 ಟನ್ ಹಸಿರು ಮೇವು ಹಾಗು 14,515 ಟನ್ ಒಣಮೇವು ಇರುವುದಾಗಿ ಮಾಹಿತಿ ಲಭ್ಯವಾಗಿದೆ.

> ಜಿಲ್ಲೆಯಲ್ಲಿ ಮುಂದಿನ 27 ವಾರಕ್ಕೆ ಆಗುವಷ್ಟು ಮೇವು ಲಭ್ಯವಿದೆ. ಸರ್ಕಾರದಿಂದ ಶೀಘ್ರ ಮೇವು ಕಿಟ್ ಲಭ್ಯವಾಗಲಿದ್ದು, ಹಂತ-ಹಂತವಾಗಿ ವಿತರಣೆ ಮಾಡಲಾಗುವುದು. ಜಾನುವಾರುಗಳಿಗೆ ಸಮಸ್ಯೆಯಾಗದಂತೆ ಮುನ್ನೆಚ್ಚರಿಕೆ ವಹಿಸಲಾಗಿದೆ.
> -ಡಾ. ಬಿ.ಕೆ.ರಮೇಶ್, ಪಶುಪಾಲನಾ ಇಲಾಖೆ ಉಪನಿರ್ದೇಶಕ

**ಕುಡಿಯುವ ನೀರಿಗೂ ಹಾಹಾಕಾರ**

ಗ್ರಾಮೀಣ ಭಾಗದಲ್ಲಿ ಜಾನುವಾರುಗಳ ಮೇವಿಗೆ ಮಾತ್ರವಲ್ಲದೆ ಕುಡಿಯುವ ನೀರಿಗೂ ಸಮಸ್ಯೆ ಎದುರಾಗಿದೆ. ಗ್ರಾಮ ಪಂಚಾಯಿತಿ ವತಿಯಿಂದ ತೊಟ್ಟಿಗಳಲ್ಲಿ ನೀರು ತುಂಬಿಸುವಂತೆ ಸರ್ಕಾರ ಸೂಚಿಸಿದೆ. ಆದರೆ ಬಹುತೇಕ ಕಡೆ ನೀರಿಲ್ಲದೆ ಸಮಸ್ಯೆಯಾಗುತ್ತಿದೆ. ಕೆರೆಕಟ್ಟೆಗಳಲ್ಲೂ ನೀರಿನ ಲಭ್ಯತೆ ಕಡಿಮೆ ಇರುವುದು ಸಾರ್ವಜನಿಕರನ್ನು ತೊಂದರೆಗೆ ಸಿಲುಕಿಸಿದೆ.

# ಕೆರೆ-ಕಟ್ಟೆಗೆ ನೀರು ಹರಿಸುವಂತೆ ರೈತರ ಪ್ರತಿಭಟನೆ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಹಿರೀಸಾವೆ-ಜುಟ್ಟನಹಳ್ಳಿ ಏತ ನೀರಾವರಿ ಯೋಜನೆಯಡಿ ಹಿರೀಸಾವೆ, ಮತಿಘಟ್ಟ ಹಾಗು ಜುಟ್ಟನಹಳ್ಳಿ ವ್ಯಾಪ್ತಿಯ ಕೆರೆಗಳಿಗೆ ನೀರು ಹರಿಸಬೇಕೆಂದು ಆಗ್ರಹಿಸಿ ಬುಧವಾರ ಹಿರೀಸಾವೆಯ ಶ್ರೀಕಂಠಯ್ಯ ವೃತ್ತದಲ್ಲಿ ಖಾಲಿ ಕೊಡ ಪ್ರದರ್ಶಿಸಿ ರೈತ ಮುಖಂಡರು ಪ್ರತಿಭಟನೆ ನಡೆಸಿದರು.

ಏತ ನೀರಾವರಿ ಮೂಲಕ ಕೆಲವೇ



ಕೆರೆಗಳಿಗೆ ನೀರು ಬಿಡಲಾಗುತ್ತಿದೆ. ಇದುವರೆಗೆ ಎಷ್ಟು ಕ್ಯೂಸೆಕ್ ನೀರನ್ನು ಯಾವ ಕೆರೆಗೆ ಮತ್ತು ಎರಡು ಕಡೆಯ ಕಾಲುವೆಗಳಿಗೆ ಎಷ್ಟು ನೀರು ಹರಿದಿದೆ ಎಂಬ ಮಾಹಿತಿ ಇಲ್ಲ. ಕಾಲುವೆ ಒಡೆದು ನೀರು ಬಿಟ್ಟುಕೊಂಡಿರುವವರ ವಿರುದ್ಧ ಕ್ರಮ ಜರುಗಿಸಿಲ್ಲವೆಂದು ಆಕ್ರೋಶ ವ್ಯಕ್ತಪಡಿಸಿದರು.

ಮಳೆ ಇಲ್ಲದೆ ಬರ ಪರಿಸ್ಥಿತಿ ತಾಂಡವಾಡುತ್ತಿದೆ. ಈಗಾಗಲೇ

» ನಾಲ್ಕನೇ ಪುಟದಲ್ಲಿ

## ಇಂದು ಶಿಕ್ಷಕರ ದಿನಾಚರಣೆ

**ಹಾಸನ:** ರಾಜ್ಯ ಸರ್ಕಾರಿ ನಿವೃತ್ತ ನೌಕರರ ಸಂಘ ಜಿಲ್ಲಾ ಘಟಕದಿಂದ ಸೆ.10ರ ಗುರುವಾರ ಬೆಳಿಗ್ಗೆ 10.30ಕ್ಕೆ ಜಿಲ್ಲಾ ನಿವೃತ್ತ ನೌಕರರ ಸಮುದಾಯ ಭವನದಲ್ಲಿ ಶಿಕ್ಷಕರ ದಿನಾಚರಣೆ ಮತ್ತು ಪ್ರತಿಭಾ ಪುರಸ್ಕಾರ ಹಮ್ಮಿಕೊಳ್ಳಲಾಗಿದೆ.

ಶಾಸಕ ಹೆಚ್.ಪಿ.ಸ್ವರೂಪ್ ಕಾರ್ಯಕ್ರಮ ಉದ್ಘಾಟಿಸಲಿದ್ದು, ಸಂಘದ ಅಧ್ಯಕ್ಷ ಎಸ್. ಬೋರೇಗೌಡ ಅಧ್ಯಕ್ಷತೆ ವಹಿಸುವರು. ಲೇಖಕ ಡಾ.ಹಂಪನಹಳ್ಳಿ ತಿಮ್ಮೇಗೌಡ ಉಪನ್ಯಾಸ ನೀಡುವರು. ಪದವಿ ಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಕೆ.ಪಿ.ಗಂಗಾಧರ್, ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕ ಕೆ.ಎನ್. ಬಲರಾಮ್, ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಬಿ.ಪಿ.ಕೃಷ್ಣೇಗೌಡ ಪಾಲ್ಗೊಳ್ಳಲಿದ್ದಾರೆ.

## ಗ್ರಾಹಕರ ಸೋಗಿನಲ್ಲಿ ಬಂದು ಮೊಬೈಲ್ ಕಳವು

• ಪ್ರಜೋದಯ ವರದಿ

**ಸಕಲೇಶಪುರ:** ಗ್ರಾಹಕರ ಸೋಗಿನಲ್ಲಿ ಮೊಬೈಲ್ ಅಂಗಡಿಗೆ ಬಂದ ಇಬ್ಬರು ಸಿಬ್ಬಂದಿ ಗಮನಕ್ಕೆ ಬಾರದಂತೆ ಮೊಬೈಲ್ ಕಳವು ಮಾಡಿರುವ ಘಟನೆ ಬಾಳ್ಳುಪೇಟೆಯಲ್ಲಿ ನಡೆದಿದೆ.

ಒರಿಸ್ಸಾ ಮೂಲದ ವಿಕ್ರಂ ಹಾಗು ಚೇತನ್ ಬಂಧಿತರು. ಕಾಫಿ ತೋಟಗಳಲ್ಲಿ ಕೆಲಸ ಮಾಡಿಕೊಂಡಿರುವ ಇವರು ಮೊಬೈಲ್ ಕಳವಿಗೆ ಮಾಡಿದ ಯೋಜನೆ ಸಿಸಿಟಿವಿ ಕ್ಯಾಮರಾದಲ್ಲಿ ಸೆರೆಯಾಗಿದೆ. ಆರೋಪಿಗಳನ್ನು ತಡರಾತ್ರಿಯೇ ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಬಾಳ್ಳುಪೇಟೆಯ ಎ.ಕೆ.ಕಮ್ಯುನಿಕೇಶನ್‌ನಲ್ಲಿ ಮೊಬೈಲ್ ಖರೀದಿ ನೆಪದಲ್ಲಿ ಇಬ್ಬರೂ ಬಂದಿದ್ದರು. ಮೊಬೈಲ್ ಶಾಪ್ ಮಾಲೀಕ ಹೊರಗಡೆ ಹೋಗಿದ್ದನ್ನು ಖಚಿತಪಡಿಸಿಕೊಂಡು ಒಳಗೆ ಬಂದ ಅವರು ಸಿಬ್ಬಂದಿಯೊಂದಿಗೆ ಮೊಬೈಲ್ ಖರೀದಿ ಕುರಿತು ಮಾತುಕತೆ ನಡೆಸಿದ್ದಾರೆ. ಆರೋಪಿ ಚೇತನ್ ಮೊಬೈಲ್‌ಗಳನ್ನು ಪರಿಶೀಲಿಸುವಂತೆ ನಾಟಕ ಮಾಡುತ್ತಿದ್ದಾಗ ವಿಕ್ರಂ ಹೊಸ ಮೊಬೈಲ್‌ನ್ನು ಶರ್ಟ್ ಒಳಗೆ ಹಾಕಿಕೊಂಡು ಸಾವಧಾನವಾಗಿ ಹೊರಗೆ ಬಂದಿದ್ದಾನೆ. ಕೆಲ ಹೊತ್ತಿನ ಬಳಿಕ ಚೇತನ್ ಸಹ ಅಂಗಡಿಯಿಂದ ಕಾಲ್ಕಿತ್ತಿದ್ದಾನೆ.

ಮಾಲೀಕ ಅಮೀರ್ ಖಾನ್ ಶಾಪ್‌ಗೆ ಬಂದು ಸಿಸಿಟಿವಿ ಪರಿಶೀಲಿಸಿದಾಗ ಕಳ್ಳತನದ ಕರಾಮತ್ತು ಬಯಲಾಗಿದೆ. ಗ್ರಾಮಾಂತರ ಠಾಣೆ ಪೊಲೀಸರು ಭೇಟಿ ನೀಡಿ ಪರಿಶೀಲಿಸಿದರು. ಹೊಸೂರು ಎಸ್ಟೇಟ್‌ನ ಮನೆಯಲ್ಲಿ ಇದ್ದ ಚೇತನ್ ಹಾಗು ಬಂದಿಹಳ್ಳಿಯಲ್ಲಿದ್ದ ವಿಕ್ರಂನನ್ನು ಪೊಲೀಸರು ತಡರಾತ್ರಿ ಬಂಧಿಸಿದ್ದಾರೆ.

# ಅಕ್ರಮ ಸಂಬಂಧಕ್ಕೆ ಅಡ್ಡಿ : ಪತಿ ಹತ್ಯೆಗೆ ಸುಫಾರಿ

## ಪತ್ನಿ-ಪ್ರಿಯಕರ ಸೇರಿ ನಾಲ್ವರ ಬಂಧನ



• ಪ್ರಜೋದಯ ವರದಿ

**ಅರಸೀಕೆರೆ** : ಶುಂಠಿ ಬೆಳೆಗೆ ನೀರು ಹಾಯಿಸಲು ತೆರಳಿದ್ದ ವ್ಯಕ್ತಿಯ ಬರ್ಬರ ಹತ್ಯೆ ಪ್ರಕರಣಕ್ಕೆ ಹೊಸ ತಿರುವು ಸಿಕ್ಕಿದ್ದು, ಪತ್ನಿ ಅಕ್ರಮ ಸಂಬಂಧಕ್ಕೆ ಅಡ್ಡಿಯಾಗಿದ್ದ ಪತಿಯನ್ನು ಪ್ರಿಯಕರನ ಜೊತೆ ಸೇರಿ ಸುಪಾರಿ ಕೊಟ್ಟು ಕೊಲೆ ಮಾಡಿಸಿರುವುದು ತನಿಖೆ ವೇಳೆ ಬಯಲಾಗಿದೆ.

ತಾಲ್ಲೂಕಿನ ಬಸವನಹಟ್ಟಿ ಗ್ರಾಮದಲ್ಲಿ ಶುಕ್ರವಾರ ರಾತ್ರಿ ಮೋಹನ್ (34) ಎಂಬ ವ್ಯಕ್ತಿಯನ್ನು ಬರ್ಬರವಾಗಿ ಕೊಲೆ ಮಾಡಲಾಗಿತ್ತು. ಕೊಲೆಯಾದ ನಂತರ ಏನು ಗೊತ್ತಿಲ್ಲದಂತೆ ಪತ್ನಿ ಜಯಲಕ್ಷ್ಮಿ ನಾಟಕವಾಡಿದ್ದಳು. ಪೊಲೀಸರು ಕೊಲೆ ಆರೋಪಿಗಳನ್ನು ಬಂಧಿಸಿದ್ದು, ವಿಚಾರಣೆ ವೇಳೆ ಕೊಲೆ ರಹಸ್ಯವನ್ನು ಬಿಚ್ಚಿಟ್ಟಿದ್ದಾರೆ.

ಎಂಟು ವರ್ಷಗಳ ಹಿಂದೆ ಜಯಲಕ್ಷ್ಮಿ ಜೊತೆ ವಿವಾಹವಾಗಿದ್ದ ಮೋಹನ್, ದಂಪತಿಗೆ ಇಬ್ಬರು ಮಕ್ಕಳಿದ್ದರು. ಮೊದಲ ಪುತ್ರಿ ಟ್ರ್ಯಾಕ್ಟರ್‌ಗೆ ಸಿಲುಕಿ ಸಾವನ್ನಪ್ಪಿದ್ದಳು. ಮೋಹನ್ ಜಮೀನು ಬೋಗ್ಯಕ್ಕೆ ಪಡೆದು ಶುಂಠಿ ಬೆಳೆಯುತ್ತಿದ್ದು, ಮೋಹನ್, ಧನಂಜಯಮೂರ್ತಿ ಆಪ್ತ ಸ್ನೇಹಿತರಾಗಿದ್ದರು. ಪತ್ನಿ ಜೊತೆ ಹೊಂದಾಣಿಕೆ ಕೊರತೆಯಿಂದ ವಿಚ್ಛೇದನಕ್ಕೆ ಧನಂಜಯಮೂರ್ತಿ ಅರ್ಜಿ ಸಲ್ಲಿಸಿದ್ದ.

ಧನಂಜಯಮೂರ್ತಿ ಜೊತೆ ಮೋಹನ್ ಪತ್ನಿ ಜಯಲಕ್ಷ್ಮಿ ಅಕ್ರಮ ಸಂಬಂಧ ಹೊಂದಿದ್ದು, ಈ ವಿಷಯ

» ನಾಲ್ಕನೇ ಪುಟದಲ್ಲಿ

### ಆಯೋಗದ ಅಧ್ಯಕ್ಷ ಡಾ.ಎಲ್.ಮೂರ್ತಿ ಎಚ್ಚರಿಕೆ | ಜಿಲ್ಲೆಯಲ್ಲಿ 182 ದೂರು ಸ್ವೀಕಾರ

# ಎಸ್ಸಿ-ಎಸ್ಟಿ ಮೇಲೆ ದೌರ್ಜನ್ಯ : ಪರಿಹಾರ ವಿಳಂಬವಾದರೆ ಕ್ರಮ

• ಪ್ರಜೋದಯ ವರದಿ

**ಹಾಸನ** : ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನರ ಮೇಲಿನ ದೌರ್ಜನ್ಯ ಪ್ರಕರಣಗಳು, ಕುಂದು ಕೊರತೆಗಳನ್ನು ಕಾನೂನು ವ್ಯಾಪ್ತಿಯಲ್ಲಿ ಪರಿಹರಿಸಲು ವಿಳಂಬ ಮಾಡಿದರೆ ಅಧಿಕಾರಿಗಳಿಗೆ ಚಾಟಿ ಬೀಸುವ ಜೊತೆಗೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುವುದೆಂದು ಎಸ್‌ಸಿ-ಎಸ್‌ಟಿ ಆಯೋಗದ ಅಧ್ಯಕ್ಷ ಡಾ.ಎಲ್. ಮೂರ್ತಿ ಅವರು ತಿಳಿಸಿದರು.

ನಗರದಲ್ಲಿ ಬುಧವಾರ ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ ಪರಿಶೀಲನಾ ಸಭೆ, ಅಹವಾಲು ಸ್ವೀಕಾರದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಜಿಲ್ಲೆಯಲ್ಲಿ ಆಯೋಗಕ್ಕೆ 182 ದೂರುಗಳು ಬಂದಿದ್ದು, ಸಂಘ-ಸಂಸ್ಥೆಗಳು ಹಾಗು ವೈಯಕ್ತಿಕವಾಗಿ ಸಲ್ಲಿಸಿರುವ ದೂರುಗಳೂ ಸೇರಿವೆ. ಜಿಲ್ಲೆಯಿಂದಲೇ ನೇರವಾಗಿ ಎಸ್‌ಸಿ-ಎಸ್‌ಟಿ ಆಯೋಗದಲ್ಲಿ 82



ಪ್ರಕರಣಗಳು ದಾಖಲಾಗಿವೆ. ಈ ಪ್ರಕರಣಗಳನ್ನು ಶೀಘ್ರ ಇತ್ಯರ್ಥ ಪಡಿಸುವಂತೆ ಜಿಲ್ಲಾಡಳಿತಕ್ಕೆ ಸೂಚನೆ ನೀಡಲಾದೆ ಎಂದು ತಿಳಿಸಿದರು.

ನಾನು ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡ ಕಳೆದ 11 ತಿಂಗಳಿನಿಂದ ರಾಜ್ಯದ 21 ಜಿಲ್ಲೆಗಳಲ್ಲಿ ದಲಿತ ಮುಖಂಡರ ಸಭೆ ನಡೆಸಿ, ಅವರ ಸಮಸ್ಯೆಗಳನ್ನು ಆಲಿಸಲಾಗಿದೆ. ರಾಜ್ಯಾದ್ಯಂತ ಆಯೋಗಕ್ಕೆ ಒಟ್ಟು 4,896 ಪ್ರಕರಣಗಳು ಬಂದಿದ್ದು, ಈ ಪೈಕಿ 1,482 ಪ್ರಕರಣಗಳು ನ್ಯಾಯಾಲಯದಲ್ಲಿ ವಿಚಾರಣೆ ಹಂತದಲ್ಲಿವೆ. ರಾಜ್ಯದಲ್ಲಿ ಒಟ್ಟು 7,986 ಪ್ರಕರಣಗಳು ಬಾಕಿ ಇದ್ದು, ದಿನದಿಂದ ದಿನಕ್ಕೆ ಆಯೋಗಕ್ಕೆ ಸಲ್ಲಿಕೆಯಾಗುವ ದೂರುಗಳ ಸಂಖ್ಯೆಯೂ ಹೆಚ್ಚುತ್ತಿದೆ. ಅದರಲ್ಲೂ ಜಮೀನು ಸಂಬಂಧಿತ ದೂರುಗಳೇ ಹೆಚ್ಚಿನ ಸಂಖ್ಯೆಯಲ್ಲಿವೆ. ಸುಮಾರು 1,850 ಪ್ರಕರಣಗಳು ನೇರವಾಗಿ ಜಮೀನು ವಿವಾದಗಳಿಗೆ ಸಂಬಂಧಿಸಿದ್ದರೆ, ಉಳಿದ ಪ್ರಕರಣಗಳಲ್ಲಿ ಜಮೀನು ವಿಚಾರಕ್ಕೆ ಸಂಬಂಧಿಸಿದ ದೌರ್ಜನ್ಯ ಪ್ರಕರಣಗಳು ಸೇರಿವೆ ಎಂದು ಹೇಳಿದರು.

ಪಿಟಿಸಿಎಲ್ ಕಾಯ್ದೆ ಸೇರಿ ಜಮೀನಿಗೆ ಸಂಬಂಧಿಸಿದ 4 ಸಾವಿರಕ್ಕೂ ಹೆಚ್ಚು ಹಾಗು ಜಮೀನು ವ್ಯಾಜ್ಯಕ್ಕೆ ಸಂಬಂಧಿಸಿದ ಸಾಕಷ್ಟು ಪ್ರಕರಣಗಳಿದ್ದು, ಅವುಗಳನ್ನು ಪ್ರತ್ಯೇಕವಾಗಿ ಪರಿಶೀಲಿಸಿ, ಸಾಧ್ಯವಾದಷ್ಟು ಶೀಘ್ರ ವಿಲೇವಾರಿ ಮಾಡುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ. ಬಾಕಿ ಪ್ರಕರಣಗಳ ವಿಚಾರದಲ್ಲಿಯೂ ಜಿಲ್ಲಾಡಳಿತಗಳೊಂದಿಗೆ ಸಮನ್ವಯ ಸಾಧಿಸಿ ಕ್ರಮ ಕೈಗೊಳ್ಳಲಾಗುವುದು. ದೌರ್ಜನ್ಯ ಪ್ರಕರಣಗಳ ಜೊತೆಗೆ ನಕಲಿ ಜಾತಿ ಪ್ರಮಾಣಪತ್ರ ಪಡೆಯುತ್ತಿರುವ ಪ್ರಕರಣಗಳೂ ಹೆಚ್ಚಾಗುತ್ತಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ. ಅಕ್ರಮ-ಸಕ್ರಮ ಸೇರಿ ವಿವಿಧ ಸರ್ಕಾರಿ ಯೋಜನೆಗಳು ಹಾಗೂ ಭೂಮಿಗೆ ಸಂಬಂಧಿಸಿದ ಪ್ರಕ್ರಿಯೆಗಳಲ್ಲಿ ಅರ್ಜಿದಾರರ ಜಾತಿ, ದಾಖಲೆಗಳು ಮತ್ತು ಅರ್ಹತೆಯ ಕುರಿತು ಸಂಪೂರ್ಣ ಮಾಹಿತಿಯನ್ನು ಪರಿಶೀಲಿಸಿ, ನಿಯಮಾನುಸಾರ ಕ್ರಮ

» ನಾಲ್ಕನೇ ಪುಟದಲ್ಲಿ

### ಜಿಲ್ಲೆಯಲ್ಲಿ 105 ಪೋಕ್ಸೋ ಪ್ರಕರಣ

ಜಿಲ್ಲೆಯಲ್ಲಿ 105 ಪೋಕ್ಸೋ ಪ್ರಕರಣ, ಒಂದು ತಿಂಗಳಲ್ಲಿ ನಾಲ್ಕು ದಲಿತರ ವ್ಯಕ್ತಿಗಳ ಕೊಲೆ ನಡೆದಿದೆ. ಇಂತಹ ಪ್ರಕರಣಗಳ ಗಂಭೀರತೆ ಅರಿತು ಅಧಿಕಾರಿಗಳಿಗೆ ಚಾಟಿ ಬೀಸಬೇಕಾದ ಕೆಲಸ ಅಗತ್ಯವಾಗಿದೆ. ಜಿಲ್ಲೆಯ ಮಲೆನಾಡು ಮತ್ತು ಬಯಲುಸೀಮೆಯ ಪ್ರಕರಣಗಳು ವಿಭಿನ್ನವಾಗಿರುತ್ತವೆ. ದೌರ್ಜನ್ಯಗಳನ್ನು ಅಧಿಕಾರಿಗಳು ಸೂಕ್ಷ್ಮವಾಗಿ ಗಮನಿಸಿ ಸಂತ್ರಸ್ತರಿಗೆ ನ್ಯಾಯ ದೊರಕಿಸಿಕೊಡಬೇಕಿದೆ ಎಂದರು.

## ಸೆ. 11 ರಂದು ಜಿಲ್ಲಾ ಮಟ್ಟದ ಯುವಜನೋತ್ಸವ ಮ್ಯಾರಥಾನ್

• ಪ್ರಜೋದಯ ವರದಿ

**ಹಾಸನ** : ಹೆಚ್‌ಐವಿ ಕುರಿತು ಜಿಲ್ಲಾ ಮಟ್ಟದಲ್ಲಿ ಯುವಜನೋತ್ಸವ ಕಾರ್ಯಕ್ರಮದ ಪ್ರಯುಕ್ತ ಕಾಲೇಜಿನ ವಿದ್ಯಾರ್ಥಿಗಳಿಗೆ ಮ್ಯಾರಥಾನ್ ಸ್ಪರ್ಧೆ ಮತ್ತು ಬೈಕ್ ರ್‍ಯಾಲಿಯನ್ನು ಸೆ. 11 ರಂದು ಬೆಳಿಗ್ಗೆ 8 ಗಂಟೆಯಿಂದ ನಗರದ ಸರ್ಕಾರಿ ಇಂಜಿನೀಯರ್ ಕಾಲೇಜಿನಿಂದ ಹಮ್ಮಿಕೊಳ್ಳಲಾಗಿದೆ.

ಬೈಕ್ ರ್‍ಯಾಲಿ ಮಾರ್ಗ : ಎಂಸಿಇ ಕಾಲೇಜು ಆವರಣದಿಂದ-ಸಾಲಗಾಮೆ ರಸ್ತೆ- ಎನ್‌ಸಿಸಿ ಆಫೀಸ್ - ಆರ್‌ಸಿ ರೋಡ್- ಡಿಸಿ ಆಫೀಸ್ ಎದುರಿನಿಂದ- ಸಬ್ ರಿಜಿಸ್ಟರ್ ಆಫೀಸ್ ರಸ್ತೆ ಮಾರ್ಗವಾಗಿ ಎಂಸಿಇ ಕಾಲೇಜಿನಲ್ಲಿ ಅಂತ್ಯ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ಏಡ್ಸ್ ನಿಯಂತ್ರಣ ಮತ್ತು ಪ್ರತಿಬಂಧಕ ಘಟಕ ಜಿಲ್ಲಾ ಏಡ್ಸ್ ಕ್ಷಯ ನಿಯಂತ್ರಣಾಧಿಕಾರಿಗಳು ತಿಳಿಸಿದ್ದಾರೆ.

ಎಸ್‌ಐಆರ್ ಪ್ರಕ್ರಿಯೆ ಪೂರ್ಣಗೊಳ್ಳಲು ಇನ್ನು ಒಂದು ಹೆಜ್ಜೆಯಷ್ಟೇ ಬಾಕಿ ಇದೆ. ಈ ಹಂತದಲ್ಲಾದರೂ ನೈಜ ಪ್ರಜೆಗಳಲ್ಲಿ ಯಾರೊಬ್ಬರೂ ಮತಹಕ್ಕಿನಿಂದ ವಂಚಿತರಾಗದಂತೆ ನೋಡಿಕೊಳ್ಳಬೇಕಾಗಿದೆ. ಆದರೆ ಮೊದಲ ಹಂತದಲ್ಲಿ ಸರಿಯಾಗಿ ಕೆಲಸ ನಿರ್ವಹಿಸದ ಸೋಮಾರಿ ಬಿಎಲ್‌ಒಗಳು ಒಮ್ಮೆಲೇ ಚುರುಕಾಗುತ್ತಾರೆ ಎನ್ನಲಾಗದು. ಮತದಾರರ ಮನೆಗೆ ಭೇಟಿ ಕೊಡದೆ ಮತಗಟ್ಟೆಯಲ್ಲಿ ಕುಳಿತೇ ಫಾರ್ಮ್ ವಿತರಿಸಿದ ಮತ್ತು ಮನ ಬಂದಂತೆ ವಿವರಗಳನ್ನು ದಾಖಲಿಸಿದ ಅಧಿಕಾರಿಗಳಿದ್ದಾರೆ. ಇಂತಹ ಮತಗಟ್ಟೆಗಳಲ್ಲಿಯೇ ಅತಿ ಹೆಚ್ಚು ಮತದಾರರಿಗೆ ನೋಟಿಸ್ ಜಾರಿಯಾಗಿದೆ. ಆದರೆ ಈ ನೋಟಿಸ್‌ಗಳೂ ಸಂಬಂಧಿತರಿಗೆ ತಲುಪುತ್ತಿಲ್ಲ.

# ಮತ ವಂಚಿತರೇ ದೇಶ ಬಿಟ್ಟು ತೆರಳಲು ಸಜ್ಜಾಗಿ!

ಕೆಲ ತಿಂಗಳ ಹಿಂದಷ್ಟೇ ಬಿಜೆಪಿ ಸೇರಿದ ಆಪ್ ಯುವ ನಾಯಕ ರಾಘವ್ ಚಡ್ಡಾ, ಮತಪಟ್ಟಿಯ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಬಳಿಕ ತಮ್ಮ ಹೆಸರು ಮತದಾರರ ಪಟ್ಟಿಯಿಂದ ನಾಪತ್ತೆಯಾಗಿದೆ ಎಂದು ದೂರಿಕೊಂಡಿದ್ದಾರೆ. ಇದು ಜನರಿಂದ ಚುನಾಯಿತ ಸಂಸದರೊಬ್ಬರ ಕಥೆ. ದೇಶಾದ್ಯಂತ ಇಂತಹ ಕೋಟ್ಯಂತರ ಜನರು ಈಗ ಮತಪಟ್ಟಿಯಿಂದ ಹೊರಗುಳಿದಿದ್ದಾರೆ.

ಅನೇಕರಿಗೆ ತಮ್ಮ ಹೆಸರು ಪಟ್ಟಿಯಿಂದ ಹೊರಗುಳಿದಿದೆ ಎಂಬ ವಿಚಾರ ತಿಳಿದೇ ಇಲ್ಲ. ಈ ಮಧ್ಯೆ ಮತಪಟ್ಟಿಯಿಂದ ಹೊರಗುಳಿದವರಿಗೆ ಸರಕಾರದ ಯಾವ ಸೌಲಭ್ಯವನ್ನೂ ಕೊಡುವುದಿಲ್ಲ. ಇಂತವರನ್ನು ದೇಶದಿಂದ ಹೊರ ಹಾಕಲಾಗುತ್ತದೆ ಎಂಬ ಬೆದರಿಕೆಯ ತೂಗುಗತ್ತಿಗಳನ್ನು ಹರಿಬಿಡಲಾಗುತ್ತಿದೆ. ಇದು ನಿಜವಾದರೆ ನಮ್ಮ ಬಂಧುಮಿತ್ರರಲ್ಲೇ ಅನೇಕರು ದೇಶ ಬಿಟ್ಟು ತೆರಳಲು ಸಿದ್ಧರಾಗಬೇಕಿದೆ!



ದೇಶದ ಹಿತದೃಷ್ಟಿಯಿಂದ ಹಮ್ಮಿಕೊಂಡಿರುವ ಒಂದು ಒಳ್ಳೆಯ ಯೋಜನೆ, ಉದ್ದೇಶ, ಅತ್ಯಂತ ಕಳಪೆ ಅನುಷ್ಠಾನದ ಕಾರಣಕ್ಕೆ ಹೇಗೆ ಜನವಿರೋಧಿ ಎನಿಸಿಕೊಳ್ಳಬಹುದು ಎನ್ನುವುದಕ್ಕೆ ಈ ಯೋಜನೆ ಅತ್ಯುತ್ತಮ ಉದಾಹರಣೆ. ಈಗ ಯಾರ ಹೆಸರು ಬಿಟ್ಟು ಹೋಗಿದೆಯೋ ಅವರೆಲ್ಲರಿಗೂ ಸಾಕಷ್ಟು ಕಾಲಾವಕಾಶ ನೀಡಲಾಗಿದೆ.

ಫಾರ್ಮ್ ಭರ್ತಿ ಮಾಡಿ ಸಲ್ಲಿಸದೇ ಹೋದರೆ, ತಪ್ಪು ಅವರದ್ದೇ ಎನ್ನುವುದು ಚುನಾವಣೆ ಆಯೋಗದ ವಾದ. ಆದರೆ ಸುತ್ತು ಬಳಸಿ ಮತದಾರರ ಸಾಚಾತನವನ್ನು ಅರಿಯಲು ಹೊರಟ ಆಯೋಗದ ತಪ್ಪು ನಡೆ, ಬಿಎಲ್‌ಒಗಳು ಮತ್ತು ಅವರ ಮೇಲಿನ ಅಧಿಕಾರಿಗಳ ಬೇಜವಾಬ್ದಾರಿ, ಸೋಮಾರಿತನದಿಂದ ಹೆಸರು ಲಿಂಕ್ ಮಾಡಲಾಗದಿದ್ದರೆ ಏನು ಪರಿಹಾರ?

ಆಯೋಗವು ಈ ತನಕ ವಿತರಿಸಿದ ಮತದಾರರ ಗುರುತಿನ ಚೀಟಿಯಲ್ಲಿ ಎಷ್ಟು ಮತದಾರರ ವಿವರಗಳು ಸರಿಯಾಗಿವೆ ಎಂದು ಪರಿಶೀಲಿಸಲು ಹೊರಟರೆ, ಮುಕ್ಕಾಲು ಪಾಲು ಗುರುತಿನ ಚೀಟಿಗಳು ಅನರ್ಹಗೊಳ್ಳುತ್ತವೆ. ಎಷ್ಟೇ ದಾಖಲೆಗಳನ್ನು ಕೊಟ್ಟರೂ ಮತದಾರರ ಹೆಸರನ್ನು ಇಂಗ್ಲಿಷ್ ಮತ್ತು ಕನ್ನಡದಲ್ಲಿ ಸರಿಯಾಗಿ ನಮೂದಿಸಲು, ಅವರ ಪೋಷಕರು, ಸಂಗಾತಿಗಳ ಹೆಸರನ್ನು, ಅವರ ನಡುವಿನ ಸಂಬಂಧ ಮತ್ತು ವಯಸ್ಸನ್ನು ತಪ್ಪಿಲ್ಲದೆ ದಾಖಲಿಸಲು ನಮ್ಮ ಅಧಿಕಾರಿಗಳಿಗೆ ಸಾಧ್ಯವಾಗಿಲ್ಲ. ಇಂತಹ ನೂರೆಂಟು ಲೋಪಗಳನ್ನು ಇಟ್ಟುಕೊಂಡೇ ಆಯೋಗ ಸಮಗ್ರ ಪರಿಷ್ಕರಣೆಯ ಕಸರತ್ತು ನಡೆಸುತ್ತಿದೆ. ಸಹಜವಾಗಿಯೇ ಇಲ್ಲಿ ತಪ್ಪುಗಳಾಗಿವೆ. ಆದರೆ ಈ ಎಲ್ಲ ತಪ್ಪುಗಳಿಗೂ ಈಗ ಮತದಾರರನ್ನು ಹೊಣೆ ಮಾಡಲಾಗುತ್ತಿದೆ.

ಚುನಾವಣಾ ಆಯೋಗದ ಪ್ರಕಾರ, ಇದು ಅಂತಿಮ ಪಟ್ಟಿಯಲ್ಲ. ಸೆಪ್ಟೆಂಬರ್ 23ರವರೆಗೆ ಸಾರ್ವಜನಿಕರಿಗೆ ಅವರ ಹಕ್ಕು-ಆಕ್ಷೇಪಣೆ ಸಲ್ಲಿಸಲು ಅವಕಾಶ ನೀಡಲಾಗಿದ್ದು, ಫಾರ್ಮ್-6 ಸಲ್ಲಿಸುವ ಮೂಲಕ, ನಾನಾ ಕಾರಣಗಳಿಂದ ಹೊರಗುಳಿದ ಅರ್ಹ ಮತದಾರರು ಮತ್ತೆ ಹೆಸರು ಸೇರಿಸಿಕೊಳ್ಳಬಹುದು. ಆದರೆ ಅಧಿಕಾರಿಗಳ ಎಡವಟ್ಟಿನಿಂದ ಈಗಾಗಲೇ ಹೆಸರು ತಪ್ಪಿಸಿಕೊಂಡವರು, ಸರಿಯಾಗಿ ಫಾರ್ಮ್ ಭರ್ತಿ ಮಾಡಿ ಸಲ್ಲಿಸಿದ್ದರೂ ನೋಟಿಸ್ ಪಡೆದವರು ಯಾರನ್ನು ದೂರಬೇಕು? 60 ವರ್ಷ ಮೇಲ್ಪಟ್ಟ ಲಕ್ಷಾಂತರ ಹಿರಿಯ ನಾಗರಿಕರೂ ಈಗ ಯಾವುದೋ ಅಧಿಕಾರಿ ಮುಂದೆ ನಿಂತು ತಮ್ಮ ಗುರುತನ್ನು ಸಾಬೀತು ಮಾಡಿಕೊಳ್ಳಬೇಕಾದ ಪರಿಸ್ಥಿತಿಗೆ ಯಾರು ಹೊಣೆ?

ದೆಹಲಿ ಹೈಕೋರ್ಟ್ ಇತ್ತೀಚೆಗೆ ನೀಡಿರುವ ತೀರ್ಪಿನ, ಮತದಾರರ ಪಟ್ಟಿಯಿಂದ ಹೊರಗುಳಿದವರು ಬಿಎಲ್‌ಒಗಳನ್ನು ಹೊಣೆ ಮಾಡುವಂತಿಲ್ಲ. ಅಂದರೆ ಅಪ್ಪಿ ತಪ್ಪಿ ನಿಮ್ಮ ಹೆಸರು ಮತದಾರರ ಪಟ್ಟಿಯಲ್ಲಿ ಇಲ್ಲದಿದ್ದರೆ ನಿಮ್ಮ ಹಣೆಬರಹವನ್ನು ದೂರಬೇಕೇ ಹೊರತು ಇನ್ನಾರನ್ನೂ ದೂರುವಂತಿಲ್ಲ. ಆದರೆ ಬಿಎಲ್‌ಒಗಳು ಎಲ್ಲಿ ಸರಿಯಾಗಿ ಕರ್ತವ್ಯ ನಿರ್ವಹಿಸಿದ್ದಾರೋ ಅಂತಹ ಮತಗಟ್ಟೆಗಳಲ್ಲಿ ಯಾರೂ ನೋಟಿಸ್ ಪಡೆದಿಲ್ಲ. ನಿರ್ದಿಷ್ಟ ಮತಗಟ್ಟೆಯಲ್ಲಿ ಸರಾಸರಿ ಸಂಖ್ಯೆಗಿಂತ ಹೆಚ್ಚು ಮತದಾರರು ಪಟ್ಟಿಯಿಂದ ಹೊರಗುಳಿದಿದ್ದಾರೆ ಅಥವಾ ನೋಟಿಸ್ ಪಡೆಯುತ್ತಿದ್ದಾರೆ ಎಂದರೆ ಅಲ್ಲಿನ ಬಿಎಲ್‌ಒ ಸರಿಯಾಗಿ ಕೆಲಸ ನಿರ್ವಹಿಸಿಲ್ಲ ಎನ್ನುವುದು ಸ್ಪಷ್ಟ.

ಮೈಸೂರಿನ ಚಾಮುಂಡೇಶ್ವರಿ ಕ್ಷೇತ್ರದ ಮತಗಟ್ಟೆಯೊಂದರಲ್ಲಿ ನನಗೆ ಪರಿಚಿತ ಶಿಕ್ಷಕಿಯೊಬ್ಬರು ಬಿಎಲ್‌ಒ ಆಗಿ ಕಾರ್ಯನಿರ್ವಹಿಸಿದ್ದರು. ಮಾಜಿ ಸಿಎಂ ಸಿದ್ದರಾಮಯ್ಯ ಅವರ ಮನೆಗೆ ಸಮೀಪವಿರುವ ಈ ಮತಗಟ್ಟೆಯ ಕೆಲಸವನ್ನು ಅವರು ಅತ್ಯಂತ ಮುತುವರ್ಜಿಯಿಂದ ನಿರ್ವಹಿಸಿದ್ದರು. ಅವರಿಂದ ಫಾರ್ಮ್ ಪಡೆದವರಲ್ಲಿ ಒಬ್ಬ ಮತದಾರರೂ ನೋಟಿಸ್ ಪಡೆದಿಲ್ಲ. ಮೃತಪಟ್ಟವರು, ವರ್ಗಾವಣೆಯಾದವರು ಬಿಟ್ಟರೆ ಇನ್ನಾರೂ ಯಾದಿಯಿಂದ ಹೊರಗುಳಿದಿಲ್ಲ. ಇದೇ ಮತಗಟ್ಟೆಯಲ್ಲಿ ಕಾರ್ಯ ನಿರ್ವಹಿಸಿದ ಇನ್ನೊಬ್ಬ ಬಿಎಲ್‌ಒ ಅವರ ವ್ಯಾಪ್ತಿಯಲ್ಲಿ ನೂರಾರು ಮಂದಿ ನೋಟಿಸ್ ಪಡೆದಿದ್ದಾರೆ. ಹಾಗಿದ್ದರೆ ತಪ್ಪು ಯಾರದ್ದು?

ಆಯೋಗವು ನಾಗರಿಕರಿಗೆ ನೀಡಿದ ನೋಟಿಸ್‌ಗಳಲ್ಲಿ ನಮೂದಿಸಿದ ಕಾರಣಗಳು ಹಾಸ್ಯಾಸ್ಪದವಾಗಿವೆ. 67 ವರ್ಷದ ನಿವೃತ್ತ ಶಿಕ್ಷಕಿಯೊಬ್ಬರಿಗೆ ಬಂದ ನೋಟಿಸ್‌ನಲ್ಲಿ, ನಿಮ್ಮ ಮಗ/ಮಗಳು ಎಂದು ಒಬ್ಬರೊಂದಿಗೆ ಜೋಡಿಸಲಾಗಿದೆ. ಅವರನ್ನು ಆರು ಜನರು ತಮ್ಮ ತಂದೆ ಎಂದು ಹೇಳಿ ಕೊಂಡಿದ್ದಾರೆ. ಇದು ತಪ್ಪಾದ ಜೋಡಣೆಯಾಗಿರುವಂತೆ ತೋರುತ್ತದೆ ಎಂದು ಮೊದಲ ಕಾರಣ ನೀಡಲಾಗಿದೆ. ಈ ವಾಕ್ಯವನ್ನು ಹೇಗೆ ಅರ್ಥ ಮಾಡಿಕೊಳ್ಳಬೇಕೋ ಆಯೋಗದ ಭಾಷಾ ತಜ್ಞರೇ ತಿಳಿಸಬೇಕು.

ಇದೇ ನೋಟಿಸ್‌ನಲ್ಲಿ ವ್ಯಕ್ತಪಡಿಸಿದ ಮತ್ತೊಂದು ಸಂಶಯ ಹೀಗಿದೆ- ಹಿಂದಿನ ಎಸ್‌ಐಆರ್ ಸಮಯದಲ್ಲಿ ಮತದಾರರ ಪಟ್ಟಿಯೊಂದಿಗೆ ನಿಮ್ಮನ್ನು ಜೋಡಿಸಲು ಬಳಸಲಾದ ನಿಮ್ಮ ಪೋಷಕರ ವಿವರಗಳು ಮತ್ತು ನಿಮ್ಮ ನಡುವಿನ ವಯಸ್ಸಿನ ವ್ಯತ್ಯಾಸವು 15 ವರ್ಷಗಳಿಗಿಂತ ಕಡಿಮೆ ಇದೆ. ಇದು ತಪ್ಪಾದ ಜೋಡಣೆಯಂತೆ ತೋರುತ್ತಿದೆ. ಈ ಹಿರಿಯ ನಾಗರಿಕರ ಪೋಷಕರು ಹೆತ್ತವರು ಮೃತಪಟ್ಟು ಮೂರು ದಶಕಗಳೇ ಕಳೆದಿವೆ. ಮತದಾರರ ಪಟ್ಟಿಗೆ ಸೇರಲು ತಮ್ಮ ಪತಿಯ ಹೆಸರು ಮತ್ತು ವಿಳಾಸ ಕೊಟ್ಟಿದ್ದರೂ ಈ ರೀತಿಯ ಸಬೂಬುಗಳನ್ನು ನೀಡಲಾಗಿದೆ. ಎಸ್‌ಐಆರ್ ಪ್ರಕ್ರಿಯೆ ಮುಗಿಸಿಕೊಂಡು ಮುಂಬಯಿನಲ್ಲಿರುವ ತಮ್ಮ ಪುತ್ರಿ ಮನೆಗೆ ತೆರಳಿರುವ ಈ ಹಿರಿಯ ಮಹಿಳೆ ಈಗ ದಾಖಲೆಗಳನ್ನು ಹಿಡಿದುಕೊಂಡು ಮತ್ತೆ ಮೈಸೂರಿಗೆ ಬರಬೇಕಾಗಿದೆ. ಅವರ ಸಮಯಕ್ಕೆ, ತಗುಲುವ ಖರ್ಚಿಗೆ, ಮಾನಸಿಕ ಸಂಕಷ್ಟಕ್ಕೆ ಆಯೋಗ ಪರಿಹಾರ ನೀಡಲು ಸಾಧ್ಯವಿದೆಯೇ?

ಇದು ಒಂದು ಉದಾಹರಣೆಯಷ್ಟೇ. ಎಸ್‌ಐಆರ್ ಪ್ರಕ್ರಿಯೆಯಲ್ಲಿ 2002ರ ಹಿಂದಿನ ಮತದಾರರ ಪಟ್ಟಿಯೊಂದಿಗೆ ತಮ್ಮ ವಿವರಗಳನ್ನು ಮ್ಯಾಪ್ ಮಾಡಲು ಸಾಧ್ಯವಾಗದ ಲಕ್ಷಾಂತರ ಮತದಾರರಿಗೆ ನೋಟಿಸ್ ನೀಡಲಾಗುತ್ತಿದೆ. ಇವರೆಲ್ಲರೂ ಈಗ ತಮ್ಮ ಕೆಲಸ ಕಾಗಳೆಲ್ಲವನ್ನೂ ಬದಿಗೊತ್ತಿ, ಸೂಚಿಸಿದ ದಿನಾಂಕದಂದು ಚುನಾವಣಾ ಅಧಿಕಾರಿ ಮುಂದೆ ಖುದ್ದು ಹಾಜರಾಗಿ ದಾಖಲೆಗಳನ್ನು ಸಲ್ಲಿಸಬೇಕಾಗಿದೆ.




ಕರ್ನಾಟಕದಲ್ಲಿ ಪರಿಷ್ಕರಣೆಗೂ ಮುನ್ನ ಇದ್ದ 5.54 ಕೋಟಿ ಮತದಾರರಲ್ಲಿ ಸುಮಾರು 1.09 ಕೋಟಿಯಿಂದ 1.10 ಕೋಟಿ ಮತದಾರರನ್ನು (ಸುಮಾರು 19.4% ರಿಂದ 19.6%) ಗೈರು, ಸ್ಥಳಾಂತರ, ನಿಧನ, ನಕಲಿ ಮತ್ತು ಇತರ (ಎಎಸ್‌ಡಿಡಿಒ) ಕಾರಣಗಳನ್ನಿತ್ತು ಕರಡು ಪಟ್ಟಿಯಿಂದ ಹೊರಗಿಡಲಾಗಿದೆ. ಅರ್ಜಿ ನಮೂನೆಗಳಲ್ಲಿ ಲೋಪದೋಷಗಳಿದ್ದ ಅಥವಾ ವಿವರ ಹೊಂದಾಣಿಕೆಯಾಗದ ಕಾರಣಗಳ ಮೇಲೆ ಸುಮಾರು 43.80 ಮತದಾರರಿಗೆ ಆಯೋಗದಿಂದ ನೋಟಿಸ್‌ಗಳನ್ನು ನೀಡಲಾಗಿದೆ.

ಮತಪಟ್ಟಿಯಿಂದ ಹೊರಗುಳಿದ 1.10 ಕೋಟಿ ಮತದಾರರಲ್ಲಿ ಒಂದು ಲಕ್ಷ ನೈಜ ಮತದಾರರು ಇದ್ದಾರೆ ಎಂದುಕೊಂಡರೂ ಅದು ಇದೇ ದೇಶದ ನಾಗರಿಕರ ಮೂಲಭೂತ ಹಕ್ಕನ್ನು ಕಸಿದು ಕೊಂಡತ್ತಲ್ಲವೇ? ಒಂದು ವೇಳೆ ನಮ್ಮ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಈಗಾಗಲೇ ಎಚ್ಚರಿಸಿದಂತೆ, ವೋಟರ್ಸ್ ಲಿಸ್ಟಿನಲ್ಲಿ ಹೆಸರಿಲ್ಲದ ಕಾರಣಕ್ಕೆ ಅವರಿಗೆ ಸರಕಾರಿ ಸೌಲಭ್ಯಗಳನ್ನು ನಿರಾಕರಿಸಿದರೆ, ಅದನ್ನು ಸರಿಪಡಿಸುವವರಾರು? ಒಂದು ವೇಳೆ ಇವರು ಭಾರತದ ನಾಗರಿಕರೇ ಅಲ್ಲ ಎಂದು ಆಡಳಿತಾರೂಢ ಸರಕಾರ ಈ ದೇಶದಿಂದ ಹೊರದಬ್ಬಲು ಮುಂದಾದರೆ ಇವರು ಎಲ್ಲಿಗೆ ಹೋಗಬೇಕು? ಪದ್ಮಶ್ರೀ ಪುರಸ್ಕೃತ ಹಾಜಬ್ಬ ಅವರಂತಹ ಚಿರಪರಿಚಿತರಿಗೂ ಅಧಿಕಾರಿಗಳು ನೋಟಿಸ್ ನೀಡುತ್ತಾರೆ ಎಂದ ಮೇಲೆ ಉಳಿದವರ ಪಾಡೇನು?

ಎಸ್‌ಐಆರ್ ಪ್ರಕ್ರಿಯೆಯ ಮೂರನೇ ಹಂತದ ಕರಡು ಪಟ್ಟಿ ಸಿದ್ಧವಾಗಿರುವ ಈ ಹೊತ್ತಿನಲ್ಲಿ ದೇಶಾದ್ಯಂತ ಸುಮಾರು 6.15 ಕೋಟಿಗಿಂತಲೂ ಹೆಚ್ಚು ಮತದಾರರ ಹೆಸರುಗಳನ್ನು ಮತಪಟ್ಟಿಯಿಂದ ಹೊರಗಿಡಲಾಗಿದೆ. ಮಹಾರಾಷ್ಟ್ರದಲ್ಲಿ ಅತಿ ಹೆಚ್ಚು ಅಂದರೆ ಸುಮಾರು 1.58 ಕೋಟಿ (17.08%) ಮತದಾರರ ಹೆಸರುಗಳನ್ನು ಕರಡು ಪಟ್ಟಿಯಿಂದ ತೆರವುಗೊಳಿಸಲಾಗಿದೆ. ಶೇಕಡಾವಾರು ಆಧಾರದಲ್ಲಿ ನೋಡಿದರೆ ಕೇಂದ್ರಾಡಳಿತ ಪ್ರದೇಶ ದೆಹಲಿ (35.89%) ಹಾಗೂ ಚಂಡೀಗಢದಲ್ಲಿ (31.84%) ಅತಿ ಹೆಚ್ಚಿನ ಶೇಕಡಾವಾರು ಪ್ರಮಾಣದ ಮತದಾರರ ಹೆಸರುಗಳು ಕಡಿಮೆಯಾಗಿವೆ.

**ನೋಟಿಸೂ ತಲುಪುತ್ತಿಲ್ಲ**

ಎಸ್‌ಐಆರ್ ಪ್ರಕ್ರಿಯೆ ಪೂರ್ಣಗೊಳ್ಳಲು ಇನ್ನು ಒಂದು ಹೆಜ್ಜೆಯಷ್ಟೇ ಬಾಕಿ ಇದೆ. ಈ ಹಂತದಲ್ಲಾದರೂ ನೈಜ ಪ್ರಜೆಗಳಲ್ಲಿ ಯಾರೊಬ್ಬರೂ ಮತಹಕ್ಕಿನಿಂದ ವಂಚಿತರಾಗದಂತೆ ನೋಡಿಕೊಳ್ಳ ಬೇಕಾಗಿದೆ. ಆದರೆ ಮೊದಲ ಹಂತದಲ್ಲಿ ಸರಿಯಾಗಿ ಕೆಲಸ ನಿರ್ವಹಿಸದ ಸೋಮಾರಿ ಬಿಎಲ್‌ಒಗಳು ಒಮ್ಮೆಲೇ ಚುರುಕಾಗುತ್ತಾರೆ ಎನ್ನಲಾಗದು. ಮತದಾರರ ಮನೆಗೆ ಭೇಟಿ ಕೊಡದೆ ಮತಗಟ್ಟೆಯಲ್ಲಿ ಕುಳಿತೇ ಫಾರ್ಮ್ ವಿತರಿಸಿದ ಮತ್ತು ಮನ ಬಂದಂತೆ ವಿವರಗಳನ್ನು ದಾಖಲಿಸಿದ ಅಧಿಕಾರಿಗಳಿದ್ದಾರೆ. ಇಂತಹ ಮತಗಟ್ಟೆಗಳಲ್ಲಿಯೇ ಅತಿ ಹೆಚ್ಚು ಮತದಾರರಿಗೆ ನೋಟಿಸ್ ಜಾರಿಯಾಗಿದೆ. ಆದರೆ ಈ ನೋಟಿಸ್‌ಗಳೂ ಸಂಬಂಧಿತರಿಗೆ ತಲುಪುತ್ತಿಲ್ಲ.

ಆಯೋಗವು ನೀಡಿರುವ ಮಾಹಿತಿ ಪ್ರಕಾರ, ಸೆಪ್ಟೆಂಬರ್ ಮೊದಲ ವಾರದ ತನಕ ಶೇ.83ರಷ್ಟು ಮತದಾರರಿಗೆ ನೋಟಿಸ್ ತಲುಪಿಲ್ಲ. ರಾಜ್ಯದಲ್ಲಿ ಇದುವರೆಗೆ 43.8 ಲಕ್ಷ ನೋಟಿಸ್‌ಗಳನ್ನು ಸಿದ್ಧಪಡಿಸಲಾಗಿದ್ದು, ಈ ಪೈಕಿ ಕೇವಲ 7.3 ಲಕ್ಷ ನೋಟಿಸ್‌ಗಳು ಮಾತ್ರ ಸಂಬಂಧಿತ ಮತದಾರರಿಗೆ ತಲುಪಿವೆ. ಸುಮಾರು 36.4 ಲಕ್ಷ ನೋಟಿಸ್‌ಗಳು ಇನ್ನೂ ವಿತರಣೆಗೆ ಬಾಕಿಯಿವೆ.



ಬಹುತೇಕ ಕಡೆಗಳಲ್ಲಿ ತಮ್ಮ ಹೆಸರು ಮತದಾರರ ಪಟ್ಟಿಯಲ್ಲಿ ಇಲ್ಲದಿರುವುದನ್ನು ಕಂಡು ಮತದಾರರೇ ಬಿಎಲ್‌ಒಗಳ ಬಳಿ ಸಾಗುತ್ತಿದ್ದಾರೆ. ಇಂತವರಿಗಷ್ಟೇ ಇವರು ನೋಟಿಸ್ ಕೈಗಿಡುತ್ತಿದ್ದಾರೆ.

ಮತದಾರರ ಅಸಲಿತನ ತಿಳಿಯುವಲ್ಲೂ ಬೂತ್ ಮಟ್ಟದ ಅಧಿಕಾರಿಗಳ (ಬಿಎಲ್‌ಒ) ನಡುವೆ ಏಕರೂಪತೆಯಿಲ್ಲ. ಆಯೋಗವು ನೀಡಿರುವ ಮಾಹಿತಿ ಪ್ರಕಾರ ಆಧಾರ್, ಜನನ ಪ್ರಮಾಣ ಪತ್ರ ಸೇರಿದಂತೆ ಕನಿಷ್ಠ ಎರಡು ದಾಖಲೆಗಳನ್ನು ನೀಡಿ ಮತದಾರರು ತಮ್ಮ ಹೆಸರನ್ನು ಉಳಿಸಿಕೊಳ್ಳ ಬಹುದು. ಆದರೆ ಕೆಲವೊಂದು ಮತಗಟ್ಟೆಗಳಲ್ಲಿ ಜಾತಿ ಸಿಂಧುತ್ವ ಪ್ರಮಾಣ ಪತ್ರ, ಪ್ಯಾನ್ ಕಾರ್ಡ್, ಪಾಸ್‌ಪೋರ್ಟ್, ಎಲ್‌ಐಸಿ ಬಾಂಡ್, ಬ್ಯಾಂಕ್ ಪಾಸ್ ಬುಕ್, ಪಿಂಚಣಿ ಪ್ರಮಾಣ ಪತ್ರ ಸೇರಿ ನಾಲ್ಕೈದು ದಾಖಲೆಗಳನ್ನು ಕೇಳುತ್ತಿದ್ದಾರೆ.

ಯಥಾ ಪ್ರಕಾರ ಇಲ್ಲೂ ಅಧಿಕಾರಿಗಳು ತಮ್ಮ ಮರ್ಜಿ ಪ್ರದರ್ಶಿಸುತ್ತಿದ್ದಾರೆ. ತಮ್ಮ ಹಕ್ಕನ್ನು ಕೇಳಲು ಬಂದ ನಾಗರಿಕರನ್ನು ಅಪರಾಧಿಗಳಂತೆ ಕಾಣುತ್ತಿದ್ದಾರೆ. ಆ ದಾಖಲೆ, ಈ ದಾಖಲೆ ಎಂದು ಹೇಳಿ, ನಾಳೆ ಬರಲು ತಿಳಿಸುತ್ತಿದ್ದಾರೆ. ದೂರದ ಊರಲ್ಲಿ ಇರುವವರಿಗೆ ವಿಡಿಯೋ ಮೂಲಕ ಹಕ್ಕು ಮಂಡನೆ ಸಾಧ್ಯವಿದ್ದರೂ ಈ ಅವಕಾಶದ ಬಗ್ಗೆ ಮಾಹಿತಿ ನೀಡುತ್ತಿಲ್ಲ.

ನೋಟಿಸ್ ನೀಡಬೇಕಾದ ಮತದಾರರ ಪಟ್ಟಿಯನ್ನು ಅಧಿಕಾರಿಗಳು ಆನ್‌ಲೈನ್‌ನಲ್ಲಿ ಪ್ರಕಟಿಸಿದ್ದರೂ, ಹಲವೆಡೆ ವಿಚಾರಣೆಯ ನಿಖರ ದಿನಾಂಕವನ್ನು ನಮೂದಿಸಿಲ್ಲ. ವಾರದ ಕೆಲಸದ ದಿನಗಳಲ್ಲೇ ವಿಚಾರಣೆಗಳನ್ನು ನಿಗದಿಪಡಿಸಿರುವುದರಿಂದ ಸರಕಾರಿ ಹಾಗೂ ಖಾಸಗಿ ವಲಯದ ನೌಕರರು, ವೃತ್ತಿಪರರು ತೊಂದರೆ ಅನುಭವಿಸುವಂತಾಗಿದೆ. ವಿಚಾರಣೆಗೆ ಹಾಜರಾಗಲು ರಜೆ ಪಡೆಯಬೇಕಾದ ಅನಿವಾರ್ಯತೆ ಎದುರಾಗಿದೆ.

ದೇಶದಲ್ಲಿ ಕನಿಷ್ಠ ಒಂದು ಕೋಟಿ ಜನರು ಅಧಿಕಾರಿಗಳ ಎಡವಟ್ಟಿನಿಂದ ಮತದಾನದ ಹಕ್ಕಿನಿಂದ ಹೊರಗುಳಿದಿದ್ದಾರೆ ಎಂದು ಭಾವಿಸಿದರೂ ಅಷ್ಟು ಜನರ ಮೂಲಭೂತ ಹಕ್ಕನ್ನು ನಾವು ನಿರಾಕರಿಸಿದಂತೆ. ಪ್ರಜಾಪ್ರಭುತ್ವದಲ್ಲಿ ಈ ಅನ್ಯಾಯ ಎಂದಿಗೂ ಆಗಕೂಡದು. ನೈಜ ಮತದಾರರನ್ನು ಗುರುತಿಸಿ, ಅವರ ಹಕ್ಕನ್ನು ಮರಳಿ ದೊರಕಿಸುವುದು ಚುನಾವಣೆ ಆಯೋಗ ಮತ್ತು ಸರಕಾರದ ಆದ್ಯ ಕರ್ತವ್ಯ.

– **ಲೋಕೇಶ್** ಕಾಯರ್ಗ

# ಅಮೇರಿಕಾದ ಜಲಾಂತರ್ಗಾಮಿ ನೌಕ ಇರಾನ್ ವಶಕ್ಕೆ

## ಹಾರ್ಮುಜ್‌ನಲ್ಲಿ ಹೆಚ್ಚಿದ ಬಿಕ್ಕಟ್ಟು | 5 ಟ್ಯಾಂಕರ್ ಮೇಲೆ ಪ್ರತಿ ದಾಳಿ

• ಪ್ರಜೋದಯ ವರದಿ

**ಟೆಹ್ರಾನ್:** ಹಾರ್ಮುಜ್ ಜಲಸಂಧಿಯ ಪ್ರವೇಶ ದ್ವಾರದಲ್ಲಿ ಅಮೇರಿಕಾದ ಸೇನೆಯ ಅತ್ಯಾಧುನಿಕ ಹಾಗೂ ಸ್ಮಾರ್ಟ್ ಮಾನವ ರಹಿತ ಜಲಾಂತರ್ಗಾಮಿ ನೌಕೆಯೊಂದನ್ನು ವಶ ಪಡಿಸಿಕೊಂಡಿರುವುದಾಗಿ ಇರಾನ್ ನೌಕಾಪಡೆ ತಿಳಿಸಿದೆ.

ಸಂಕೀರ್ಣವಾದ ಗುಪ್ತಚರ ಕಾರ್ಯಾಚರಣೆಯ ಮೂಲಕ ಡೈವ್-ಎಲ್‌ಡಿ ಎಂದು ಗುರುತಿಸಲಾದ ಈ ಮಾನವ ರಹಿತ ಜಲಗಾಮಿ ವಾಹನವನ್ನು ವಶಪಡಿಸಿಕೊಳ್ಳಲಾಗಿದೆ. ವಾಹನವು ಜಗತ್ತಿನ ಅತ್ಯಾಧುನಿಕ ಜಲಾಂತರ್ಗಾಮಿ ತಂತ್ರಜ್ಞಾನ ಹೊಂದಿದೆ ಎಂದು ತಿಳಿಸಿರುವ ಐಆರ್‌ಜಿಸಿ, ವಶಪಡಿಸಿಕೊಂಡ ಸಬ್‌ಮರೀನ್ ವಿಡಿಯೊ ಬಿಡುಗಡೆ ಮಾಡಿದೆ. ಹಾರ್ಮುಜ್ ಜಲ ಸಂಧಿಯ ಮೇಲೆ ತಮ್ಮ ವಾಯು ರಕ್ಷಣಾ ವ್ಯವಸ್ಥೆಗಳು-9 ರೀಪರ್ ಡ್ರೋನ್ ಹೊಡೆದುರುಳಿಸಿವೆ ಎಂದು ಐಆರ್‌ಜಿಸಿ ಪ್ರತಿಪಾದಿಸಿದೆ. ಇರಾನ್‌ನ 5 ತೈಲ ಟ್ಯಾಂಕರ್‌ಗಳನ್ನು ಅಮೇರಿಕಾ ನಾಶ ಮಾಡಿದೆ.

**ಅಮೇರಿಕಾ ಪ್ರತಿಕ್ರಿಯೆ**

ಐಆರ್‌ಜಿಸಿ ಘೋಷಣೆಯ ನಂತರ ಯುಎಸ್ ಮಿಲಿಟರಿ ಒಂದು ಹೇಳಿಕೆಯನ್ನು ಬಿಡುಗಡೆ ಮಾಡಿದ್ದು, ನಮ್ಮ ನೀರೊಳಗಿನ ಡ್ರೋನ್ ಒಂದು ದಿನದ ಹಿಂದೆ ಪ್ರಾದೇಶಿಕ ನೀರಿನ ಸಮೀಕ್ಷೆಯ ಸಮಯದಲ್ಲಿ ವಿಫಲವಾಗಿದೆ ಎಂದು ಸ್ಪಷ್ಟಪಡಿಸಿದೆ. ಆದರೆ ಅದನ್ನು ಇರಾನ್ ವಶಪಡಿಸಿಕೊಂಡಿದೆಯೇ ಎಂಬುದನ್ನು ಅಮೇರಿಕಾ ಸ್ಪಷ್ಟಪಡಿಸಿಲ್ಲ.



ಇದು ನಡೆಯುತ್ತಿರುವ ಕಾರ್ಯಾಚರಣೆಗಳಿಗೆ ಬೆಂಬಲವಾಗಿ ಪ್ರಾದೇಶಿಕ ನೀರಿನ ಸಮೀಕ್ಷೆ ನಡೆಸುತ್ತಿತ್ತು. ದೋಷಯುಕ್ತ ಡ್ರೋನ್ ಹಳೆಯ ಮಾದರಿಯಾಗಿದ್ದು ಅದು ಸೂಕ್ಷ್ಮ ಡೇಟಾ ವನ್ನು ಸಂಗ್ರಹಿಸಲಿಲ್ಲ ಅಥವಾ ವರ್ಗೀಕೃತ ಸೋನಾರ್ ಅಥವಾ ರಾಡಾರ್ ಉಪಕರಣಗಳನ್ನು ಸಾಗಿಸಲಿಲ್ಲ ಎಂದು ಪೆಂಟಗನ್ ವಕ್ತಾರರು ಹೇಳಿದ್ದಾರೆ. ಅಂದರೆ ಅಮೇರಿಕಾ ಅದನ್ನು ನಷ್ಟ ಎಂದು ಪರಿಗಣಿಸುತ್ತಿಲ್ಲ ಎಂಬುದು ಸ್ಪಷ್ಟ.

ಸಾಗರದ ವಿಶಾಲ ಪ್ರದೇಶಗಳನ್ನು ಮೇಲ್ವಿಚಾರಣೆ ಮಾಡಲು, ಗುಪ್ತಚರ ಮಾಹಿತಿಯನ್ನು ಸಂಗ್ರಹಿಸಲು ಮತ್ತು ಶತ್ರು ಹಡಗುಗಳು ಮತ್ತು ಜಲಾಂತರ್ಗಾಮಿ ನೌಕೆಗಳನ್ನು ಅಪಾಯಕ್ಕೆ ಸಿಲುಕಿಸದೆ ಟ್ರ್ಯಾಕ್ ಮಾಡಲು ಅಗ್ಗದ ಮಾರ್ಗಗಳನ್ನು ಹುಡುಕುತ್ತಿರುವುದರಿಂದ, ಯುಎಸ್ ಮಿಲಿಟರಿ ನೀರೊಳಗಿನ ಮತ್ತು ಮೇಲ್ಮೈ ಹಡಗುಗಳು ಸೇರಿ ಮಾನವ ರಹಿತ ನೌಕಾ ವ್ಯವಸ್ಥೆಗಳಲ್ಲಿ ಭಾರೀ ಹೂಡಿಕೆ ಮಾಡುತ್ತಿದೆ.

ಆಂಡುರಿಲ್ ಅವರ ವೆಬ್‌ಸೈಟ್ ಪ್ರಕಾರ, ಡೈವ್-ಎಲ್‌ಡಿ ನೆಲೆಗೆ ಹಿಂತಿರುಗದೆ 10 ದಿನಗಳವರೆಗೆ ಕಾರ್ಯನಿರ್ವಹಿಸಬಹುದು. 6,000 ಮೀಟರ್ (19,700 ಅಡಿ) ಆಳಕ್ಕೆ ಧುಮುಕುವಂತೆ ವಿನ್ಯಾಸಗೊಳಿಸಲಾಗಿದೆ. ಡೈವ್-ಎಲ್‌ಡಿ ಘಟಕಗಳ ತಯಾರಿಕೆಗೆ ತಲಾ 2.5 ಮಿಲಿಯನ್ ಡಾಲರ್ ವೆಚ್ಚವಾಗುತ್ತವೆ ಎಂದು ಅಮೇರಿಕಾದ ಮಿಲಿಟರಿ ಸುದ್ದಿ ಸೈಟ್ ಡಿಫೆನ್ಸ್ ಸ್ಕೂಪ್ 2024ರಲ್ಲಿ ವರದಿ ಮಾಡಿದೆ.

ತನ್ನ ಯುದ್ಧ ನೌಕೆಯ ಮೇಲೆ ದಾಳಿ ನಡೆದ ನಂತರ ಇರಾನ್‌ನ ಮೂರು ತೈಲ ಟ್ಯಾಂಕರ್ ಮೇಲೆ ಅಮೇರಿಕಾ ದಾಳಿ ಮಾಡಿತ್ತು. ಅದಕ್ಕೆ ಪ್ರತಿಯಾಗಿ ಇರಾನ್ ಈಗ ಅಮೇರಿಕಾದ ಅತ್ಯಾಧುನಿಕ ಸಬ್‌ಮರೀನ್‌ವೊಂದನ್ನು ವಶಪಡಿಸಿಕೊಂಡಿರುವುದಾಗಿ ಹೇಳಿಕೊಂಡಿದೆ. ಒಟ್ಟಿನಲ್ಲಿ ಮಧ್ಯಪ್ರಾಚ್ಯದಲ್ಲಿ ಅಮೇರಿಕಾ ಮತ್ತು ಇರಾನ್ ನಡುವಿನ ಸಂಘರ್ಷ ತೀವ್ರವಾಗಿದ್ದು, ಉಭಯ ರಾಷ್ಟ್ರಗಳ ನಡುವಿನ ದ್ವೇಷ ದಿನದಿಂದ ದಿನಕ್ಕೆ ಹೆಚ್ಚುತ್ತಲೇ ಇದೆ.

# ನಿಯಮಿತ ಆರೋಗ್ಯ ತಪಾಸಣೆಗೆ




• ಪ್ರಜೋದಯ ವರದಿ

**ಹಾಸನ:** ಗಂಭೀರ ಕಾಯಿಲೆಗಳು ಆರಂಭಿಕ ಹಂತದಲ್ಲಿ ಲಕ್ಷಣ ತೋರಿಸುವುದಿಲ್ಲ, ಆರೋಗ್ಯ ಸಮಸ್ಯೆ ಇಲ್ಲವೆಂದು ನಿರ್ಲಕ್ಷ್ಯ ವಹಿಸದೆ ನಿಯಮಿತವಾಗಿ ತಪಾಸಣೆಗೆ ಒಳಪಡಸಬೇಕೆಂದು ಸ್ತ್ರೀ ರೋಗ ತಜ್ಞೆ ಡಾ|| ಎ.ಸಾವಿತ್ರಿ ಅವರು ಸಲಹೆ ನೀಡಿದರು.

ನಗರದ ಕುರುಹಿನ ಶೆಟ್ಟಿ ಸಮುದಾಯ ಭವನದಲ್ಲಿ ಲಯನ್ಸ್ ಮತ್ತು ಹಾಸನಾಂಬ ಲಿಯೋ ಕ್ಲಬ್ ನಿಂದ ಆಯೋಜಿಸಿದ್ದ ಸರ್ವ ಸದಸ್ಯರ ಸಾಮಾನ್ಯ ಸಭೆ, ಗೌರಿ-ಗಣೇಶ ಹಬ್ಬದ ಪ್ರಯುಕ್ತ ಬಾಗಿನ ವಿತರಣೆ ಹಾಗು ಮಹಿಳಾ ಆರೋಗ್ಯ-ಕ್ಯಾನ್ಸರ್ ಜಾಗೃತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಮಹಿಳೆಯರು ತಮ್ಮ ಆರೋಗ್ಯವನ್ನು ಕುಟುಂಬದ ಇತರ ಸದಸ್ಯರಷ್ಟೇ ಆದ್ಯತೆಯಿಂದ ನೋಡಿಕೊಳ್ಳಬೇಕು. ಗರ್ಭ ಕಂಠದ ಕ್ಯಾನ್ಸರ್ ಸೇರಿ ಮಹಿಳೆಯರಲ್ಲಿ ಕಾಣಿಸಿ ಕೊಳ್ಳುವ ಹಲವು ಕ್ಯಾನ್ಸರ್ ಕಾಯಿಲೆಯನ್ನು ಆರಂಭಿಕ ಹಂತದಲ್ಲೇ ಗುರುತಿಸಿದರೆ ಚಿಕಿತ್ಸೆ ಪರಿಣಾಮಕಾರಿಯಾಗಿರುತ್ತದೆ ಎಂದರು.

ಪ್ಯಾಪ್ ಸ್ಮಿಯರ್, ಹೆಚ್‌ಪಿವಿ ಪರೀಕ್ಷೆ ಸೇರಿ ವೈದ್ಯರು ಸೂಚಿಸುವ ಸ್ಕ್ಯಾನಿಂಗ್‌ಗಳನ್ನು ಸೂಕ್ತ ಸಮಯದಲ್ಲಿ ಮಾಡಿಸಿಕೊಳ್ಳಬೇಕು. ಮುಟ್ಟಿನ ನಡುವೆ ಅಥವಾ ಋತುಬಂಧದ ನಂತರ ರಕ್ತಸ್ರಾವ, ಅತಿಯಾದ ಅಥವಾ ಅಸಹಜ ರಕ್ತಸ್ರಾವ, ಲೈಂಗಿಕ ಸಂಪರ್ಕದ ನಂತರ ರಕ್ತಸ್ರಾವ, ಅಸಹಜ ಯೋನಿ ಸ್ರಾವ ಹಾಗು ನಿರಂತರ ಆರೋಗ್ಯ ಸಮಸ್ಯೆಗಳು ಕಂಡುಬಂದರೆ ತಕ್ಷಣ ವೈದ್ಯರನ್ನು ಸಂಪರ್ಕಿಸಬೇಕು. ಇಂತಹ ಲಕ್ಷಣಗಳನ್ನು ಸಾಮಾನ್ಯವೆಂದು ಭಾವಿಸಿ ಮುಂದೂಡುವುದು ಅಪಾಯಕಾರಿ ಎಂದು ಎಚ್ಚರಿಸಿದರು.

ಗರ್ಭಕೋಶದಲ್ಲಿ ಗಡ್ಡೆ ಇದೆ ಎಂಬ ಕಾರಣಕ್ಕೆ ಎಲ್ಲಾ ಮಹಿಳೆಯರೂ ಗರ್ಭಕೋಶ ತೆಗೆಸಿ ಕೊಳ್ಳುವ ಅಗತ್ಯವಿಲ್ಲ. ರೋಗದ ಸ್ವರೂಪ, ರಕ್ತಸ್ರಾವದ ಪ್ರಮಾಣ, ಚಿಕಿತ್ಸೆಗೆ ಸ್ಪಂದನೆ, ಕ್ಯಾನ್ಸರ್‌ನ ಅನುಮಾನ ಸೇರಿ ಹಲವು ಅಂಶಗಳನ್ನು ಪರಿಶೀಲಿಸಿದ ಬಳಿಕವೇ ಶಸ್ತ್ರ ಚಿಕಿತ್ಸೆಯ ಅಗತ್ಯವನ್ನು ತಜ್ಞ ವೈದ್ಯರು ನಿರ್ಧರಿಸುತ್ತಾರೆಂದರು.

ಹದಿಹರೆಯ, ಗರ್ಭಧಾರಣೆ, ಹೆರಿಗೆ, ಮಧ್ಯ ವಯಸ್ಸು ಹಾಗು ಋತುಬಂಧದ ಅವಧಿ ಯಲ್ಲಿ ಮಹಿಳೆಯರ ದೇಹದಲ್ಲಿ ಹಲವು ದೈಹಿಕ ಮತ್ತು ಹಾರ್ಮೋನ್ ಬದಲಾವಣೆಗಳು ಸಂಭವಿಸುತ್ತವೆ. ಈ ಹಂತಗಳಲ್ಲಿ ಸೂಕ್ತ ಆಹಾರ, ಜೀವನ ಶೈಲಿ ಹಾಗು ವೈದ್ಯಕೀಯ ಸಲಹೆಗೆ ಆದ್ಯತೆ ನೀಡಬೇಕು. ರಕ್ತಹೀನತೆಯನ್ನೂ ನಿರ್ಲಕ್ಷಿಸಬಾರದೆಂದರು.

ಲಯನ್ಸ್ ಕ್ಲಬ್ ಹಾಸನಾಂಬ ಅಧ್ಯಕ್ಷ ಕೆ.ಕೆ.ಮೋಹನ್ ಕುಮಾರ್ ಅಧ್ಯಕ್ಷತೆ ವಹಿಸಿದ್ದರು. ಬಿ.ಟಿ.ಚೈತ್ರಾ, ರವಿಶಂಕರ್, ಸವಿತಾ ಚಿದಾನಂದ, ಸುಮನ ಉದಯಕುಮಾರ್ ಇತರರು ಇದ್ದರು.

# ಸಿ.ಎಂ. ಮಾರುಕಟ್ಟೆ ಭೇಟಿಗೆ ಹೈಕೋರ್ಟ್ ಶ್ಲಾಘನೆ

• ಪ್ರಜೋದಯ ವರದಿ



**ಬೆಂಗಳೂರು:** ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಮಂಗಳವಾರ ಯಶವಂತಪುರದ ಎಪಿಎಂಸಿ ಮಾರುಕಟ್ಟೆಗೆದಿಢೀರ್ ಭೇಟಿ ನೀಡಿ ಕಾರ್ಮಿಕರ ಬವಣೆ ಆಲಿಸಿರುವುದನ್ನು ಹೈಕೋರ್ಟ್ ಮುಕ್ತ ಕಂಠದಿಂದ ಶ್ಲಾಘಿಸಿದೆ.

ಕಾರ್ಮಿಕರಿಗೆ ಸಂಬಂಧಿಸಿದ ಪ್ರಕರಣವೊಂದನ್ನು ಬುಧವಾರ ವಿಚಾರಣೆ ನಡೆಸಿದ ನ್ಯಾಯ ಮೂರ್ತಿ ವಿ.ಶ್ರೀಶಾನಂದ ಅವರಿದ್ದ ಏಕಸದಸ್ಯ ನ್ಯಾಯಪೀಠ, ಈ ಭೇಟಿಯನ್ನು ಯಾರಾದರೂ ಗಿಮಿಕ್ ಎನ್ನಬಹುದು. ಆದರೆ, ನಿಶ್ಚಿತವಾಗಿ ಇದೊಂದು ಗ್ರೇಟ್ ಜಾಬ್ ಎಂದು ಕೊಂಡಾಡಿದೆ.

ತಮ್ಮ ಈ ಭೇಟಿಯಲ್ಲಿ ಶಿವಕುಮಾರ್ ಮಾರುಕಟ್ಟೆಯಲ್ಲಿರುವ ಈರುಳ್ಳಿ, ಬೆಳ್ಳುಳ್ಳಿ, ಶುಂಠಿಗಳ ಗುಣಮಟ್ಟ ಮತ್ತು ದರ ಪರಿಶೀಲಿಸಿದ್ದಾರೆ. ಕಾರ್ಮಿಕ ಹೆಣ್ಣು ಮಕ್ಕಳ ಜೊತೆ ಕೂತು ಅವರ ಕಷ್ಟಸುಖ ಆಲಿಸಿದ್ದಾರೆ. ಇದೆಲ್ಲಾ ಸಂತಸದ ವಿಚಾರ ಎಂದು ನ್ಯಾಯಪೀಠ ನುಡಿದಿದೆ.

ಇವತ್ತು ಎಪಿಎಂಸಿ ಮಳಿಗೆಗಳು ಯಾರದೊ ಹೆಸರು ಮತ್ತಾರೋ ಬಾಡಿಗೆದಾರನ ವಾಸ ಎನ್ನುವಂತಾಗಿದೆ ಎಂದು ಬೇಸರ ವ್ಯಕ್ತಪಡಿಸಿದ ನ್ಯಾಯಪೀಠ, ಊರಲ್ಲಿರುವ ಎಪಿಎಂಸಿಗಳು ಸತ್ತು ಹೋಗಿವೆ ಎಂದು ಕುಟುಕಿದೆ. ಕಾರ್ಮಿಕರನ್ನು ಬಂಡವಾಳಶಾಹಿಗಳ ಕಪಿಮುಷ್ಟಿಯಿಂದ ಮುಕ್ತಗೊಳಿಸಬೇಕೆಂದ ನ್ಯಾಯಪೀಠ, ಕಾರ್ಮಿಕರ ಹಿತರಕ್ಷಣೆಗಾಗಿಯೇ ಇರುವ ಕಾನೂನು ಗಳನ್ನು ಚಾಚೂ ತಪ್ಪದೆ ಪಾಲಿಸಬೇಕು. ವಿಷ ಕುಡಿದು ಸಾಯಬಾರದು ಅಂದರೆ ಹೇಗೆ. ಕಾರ್ಮಿಕನಿಗೆ ಕನಿಷ್ಠ ವೇತನ ಕೊಡಬೇಕೆಂದು ಅರ್ಜಿದಾರರಪರ ವಕೀಲರಿಗೆ ಬಿಸಿ ಮುಟ್ಟಿಸಿತು.

ಕನಿಷ್ಟ ವೇತನ ಜಾರಿಯಲ್ಲಿ ಯಾವೊಂದೂ ತಾಂತ್ರಿಕ ಅಡಚಣೆ ಕಾಣಬಾರದು. ಕಾನೂನನ್ನು ನೀವು ಗೌರವಿಸಿದರೆ ಅದು ನಿಮ್ಮನ್ನು ರಕ್ಷಿಸುತ್ತದೆಂದು ಕಿವಿಮಾತು ಹೇಳಿತು.

# ಗಣಿಗಾರಿಕೆ ಮಾಡುವವರಿಂದ ಕಿರುಕುಳ

• ಪ್ರಜೋದಯ ವರದಿ

**ಹಾಸನ:** ಬಗರ್‌ಹುಕುಂ ಅಡಿಯಲ್ಲಿ ಸಾಗುವಳಿ ಮಾಡುತ್ತಿರುವ ಜಮೀನಿಗೆ ಗಣಿಗಾರಿಕೆ ಮಾಡುತ್ತಿರುವವರು ಕಲ್ಲು, ಮಣ್ಣು ಸುರಿದು ಕಿರುಕುಳ ನೀಡುತ್ತಿದ್ದಾರೆಂದು ಸಕಲೇಶಪುರ ತಾಲ್ಲೂಕಿನ ರೈತ ಹೆಚ್.ಎಸ್.ಶಿವಪ್ಪಶೆಟ್ಟಿ ಅವರು ಆರೋಪಿಸಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬೆಳಗೋಡು ಹೋಬಳಿ ಹೊಸ ಗದ್ದೆಯ ಸ.ನಂ 82ರಲ್ಲಿ ಬಗರ್‌ಹುಕುಂ ಅಡಿ 40 ವರ್ಷಗಳಿಂದ ಸಾಗುವಳಿ ಮಾಡುತ್ತಿರುವ 3 ಎಕರೆ ಜಮೀನಿಗೆ ನೆರೆ ಹೊರೆಯವರು ತೊಂದರೆ ಕೊಡುತ್ತಿದ್ದಾರೆ. ಜಮೀನಿಗೆ ಅಕ್ರಮವಾಗಿ ಮಣ್ಣು, ಕಲ್ಲು ಸುರಿದು ಕೃಷಿ ಚಟುವಟಿಕೆಗೆ ತೊಂದರೆ ನೀಡುತ್ತಿದ್ದಾರೆಂದು ಆರೋಪಿಸಿದರು.

3 ಎಕರೆಯಲ್ಲಿ ಕಾಫಿ ಬೆಳೆಯಲಾಗಿದೆ. ಪಕ್ಕದ ಸರ್ವೆ ನಂ.129ರ ಜಮೀನಿನ ಮಾಲೀಕರ ಪರವಾಗಿ ಬಾಳುಪೇಟೆಯ ಅರವಿಂದ ಹಾಗು ಹಾನುಬಾಳ್‌ನ ಉಮೇಶ್ ಎಂಬುವವರು ಜೆಸಿಬಿ ಹಾಗು ಲಾರಿಗಳ ಮೂಲಕ ಮಣ್ಣು, ಕಲ್ಲು ತಂದು ಜಮೀನಿನ ಮೇಲೆ ಸುರಿದಿದ್ದಾರೆ. ಜಮೀನಿನ ಸುತ್ತ ನಿರ್ಮಿಸಿದ್ದ ಬೇಲಿಯನ್ನೂ ಕಿತ್ತುಹಾಕಿ, ಅತಿಕ್ರಮ ಪ್ರವೇಶ ಮಾಡಿ ಕೃಷಿ ಮಾಡಲು ತೊಂದರೆ ಕೊಡುತ್ತಿದ್ದಾರೆ. ಕೇಳಿದರೆ ಅವಾಚ್ಯ ಶಬ್ದಗಳಿಂದ ನಿಂದಿಸುತ್ತಾರೆ. ತಮ್ಮ ಜಮೀನಿನ ಪಕ್ಕದಲ್ಲಿರುವ ಅರಣ್ಯ ಜಮೀನಿಗೂ ಅತಿಕ್ರಮ ಪ್ರವೇಶ ಮಾಡಿದ್ದಾರೆಂದು ದೂರಿದರು.

ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಬೇಕು. ತಾಲ್ಲೂಕು ಸರ್ವೆಯರ್ ಮೂಲಕ ಹದ್ದುಬಸ್ತ್ ಸರ್ವೆ ನಡೆಸಿ ಜಮೀನಿನ ಮೇಲೆ ಸುರಿದಿರುವ ಮಣ್ಣು ಹಾಗು ಕಲ್ಲುಗಳನ್ನು ತೆರವುಗೊಳಿಸಿ, ಕೃಷಿ ಮಾಡಲು ಅನುಕೂಲ ಮಾಡಿಕೊಡಬೇಕು. ಈ ಸಂಬಂಧ ಹಿಂದೆಯೇ ತಹಶೀಲ್ದಾರ್ ಅವರಿಗೆ ಮನವಿ ಸಲ್ಲಿಸಲಾಗಿದ್ದು, ಪಹಣಿ ಹಾಗೂ ಮನವಿ ಪ್ರತಿಯನ್ನೂ ನೀಡಲಾಗಿದೆ. ಈ ಬಗ್ಗೆ ಪರಿಶೀಲಿಸಿ ನ್ಯಾಯ ಕೊಡಿಸಬೇಕೆಂದು ಮನವಿ ಮಾಡಿದರು.

# ಅರಕಲಗೂಡು ದ್ವಿತಳಿ ಬಿತ್ತನೆ ವಲಯ ಘೋಷಣೆಗೆ ಮನವಿ

• ಪ್ರಜೋದಯ ವರದಿ



**ಹಾಸನ:** ಜಿಲ್ಲೆಯ ಇತರೆ ತಾಲ್ಲೂಕುಗಳಲ್ಲಿ ರೇಷ್ಮೆ ಬೆಳೆಯುತ್ತಿದ್ದರೂ, ಅರಕಲಗೂಡು ತಾಲ್ಲೂಕನ್ನು ಇದುವರೆಗೆ ದ್ವಿತಳಿ ಬಿತ್ತನೆ ವಲಯ ಎಂದು ಘೋಷಿಸಲಾಗಿಲ್ಲ. ಅದರಿಂದ ಇಲ್ಲಿನ ರೇಷ್ಮೆ ಬೆಳೆಗಾರರಿಗೆ ಗುಣಮಟ್ಟದ ರೇಷ್ಮೆ ಮೊಟ್ಟೆಗಳನ್ನು ಪಡೆಯಲು ತೊಂದರೆ ಯಾಗುತ್ತಿದೆ.

ಈ ಹಿನ್ನಲೆ ಸಂಸದ ಶ್ರೇಯಸ್ ಪಟೇಲ್ ಅವರು ಕೇಂದ್ರ ಸಿಲ್ಕ್ ಬೋರ್ಡ್ ಸದಸ್ಯ ಕಾರ್ಯದರ್ಶಿ ಪಿ. ಶಿವಕುಮಾರ್ ಅವರೊಂದಿಗೆ ದೂರವಾಣಿ ಕರೆ ಮಾಡಿ, ಅರಕಲಗೂಡು ತಾಲ್ಲೂಕನ್ನು ದ್ವಿತಳಿ ಬಿತ್ತನೆ ವಲಯವಾಗಿ ಘೋಷಿಸಲು ಮನವಿ ಮಾಡಿದ ಅವರು, ಅರ್ಹ ರೈತರಿಗೆ ರೇಷ್ಮೆ ಮೊಟ್ಟೆ ವಿತರಿಸಲು ಕ್ರಮ ಕೈಗೊಳ್ಳಬೇಕೆಂದು ಸೂಚಿಸಿದರು.

ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲೂ ರೇಷ್ಮೆ ಬೆಳೆಯುತ್ತಿದ್ದರೂ, ಅರಕಲಗೂಡು ತಾಲ್ಲೂಕನ್ನು ಮಾತ್ರ ದ್ವಿತಳಿ ಬಿತ್ತನೆ ವಲಯ ಎಂದು ಘೋಷಿಸಲಾಗಿಲ್ಲ. ಇದರಿಂದ ತಾಲ್ಲೂಕಿನ ರೇಷ್ಮೆ ಬೆಳೆ ಗಾರರಿಗೆ ಗುಣಮಟ್ಟದ ರೇಷ್ಮೆಮೊಟ್ಟೆಗಳ ಲಭ್ಯತೆಯಲ್ಲಿ ತೊಂದರೆಯಾಗು ತ್ತಿದೆ. ಈ ಹಿನ್ನಲೆ ಸಮಸ್ಯೆಯನ್ನು ಸಂಬಂಧ ಪಟ್ಟ ಅಧಿಕಾರಿಗಳ ಗಮನಕ್ಕೆ ತರಲಾಗಿದೆ ಎಂದು ತಿಳಿಸಿದ್ದಾರೆ.

ನಮ್ಮ ಮನವಿಗೆ ಸಕಾರಾತ್ಮಕ ಸ್ಪಂದನೆ ಸಿಕ್ಕಿದ್ದು, ಅರಕಲಗೂಡು ತಾಲ್ಲೂಕಿನ ರೇಷ್ಮೆ ಬೆಳೆಗಾ ರರಿಗೆ ರೇಷ್ಮೆ ಮೊಟ್ಟೆ ವಿತರಿಸಲು ಅಗತ್ಯ ಕ್ರಮ ಕೈಗೊಳ್ಳುವುದಾಗಿ ತಿಳಿಸಿದ್ದಾರೆ. ಬೆಳೆಗಾರರಿಗೆ ಅನುಕೂಲವಾಗುವಂತೆ ದ್ವಿತಳಿ ಬಿತ್ತನೆ ವಲಯದ ಮಾನ್ಯತೆ ದೊರಕಿಸುವ ನಿಟ್ಟಿನಲ್ಲಿ ಮುಂದಿನ ಹಂತದಲ್ಲಿಯೂ ಸಂಬಂಧಪಟ್ಟ ಇಲಾಖೆಗ ಳೊಂದಿಗೆ ನಿರಂತರವಾಗಿ ಸಮನ್ವಯ ಸಾಧಿಸಿ ಕ್ರಮ ಕೈಗೊಳ್ಳಲಾಗುವುದು. ರೇಷ್ಮೆ ಬೆಳೆಗಾರರ ಹಿತಾಸಕ್ತಿಯೇ ಮುಖ್ಯವಾಗಿದ್ದು, ಅವರ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಕಲ್ಪಿಸಲು ಪ್ರಾಮಾಣಿಕ ಪ್ರಯತ್ನ ಮುಂದುವರಿಯಲಿದೆ ಎಂದು ಸಂಸದರು ತಿಳಿಸಿದ್ದಾರೆ.

# ವಡ್ಡರಹಳ್ಳಿ ಕೃತಿಪತ್ತಿನ ಸಂಘಕ್ಕೆ 4.18 ಲ.ರೂ. ನಿವ್ವಳ ಲಾಭ

• ಪ್ರಜೋದಯ ವರದಿ

**ಅರಕಲಗೂಡು:** ತಾಲ್ಲೂಕಿನ ವಡ್ಡರಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘವು ಪ್ರಸಕ್ತ ಸಾಲಿನಲ್ಲಿ 4.18 ಲಕ್ಷ ರೂ. ನಿವ್ವಳ ಲಾಭ ಗಳಿಸುವ ಮೂಲಕ ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿದೆಂದು ಸಂಘದ ಅಧ್ಯಕ್ಷ ವಿ.ಎ. ನಂಜುಂಡಸ್ವಾಮಿ ಅವರು ತಿಳಿಸಿದರು.

ಗ್ರಾಮದ ಸೂರ್ಯಪುತ್ರ ಸಮುದಾಯ ಭವನದಲ್ಲಿ ಬುಧವಾರ ನಡೆದ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಸಂಘವು 1,229 ಸದಸ್ಯ ಬಲ ಹೊಂದಿದ್ದು, 69.42 ಲಕ್ಷ ರೂ. ಷೇರು ಬಂಡವಾಳ ಹೊಂದಿದೆ. 851 ಜನರಿಗೆ 5.54 ಕೋಟಿ ರೂ. ಕೆಸಿಸಿ ಸಾಲ, ಸ್ವ-ಸಹಾಯ ಸಂಘಗಳಿಗೆ 45.17 ಲಕ್ಷ ರೂ., 87.93 ಲಕ್ಷ ರೂ. ಎಂಟಿಎಲ್ ಸಾಲ, 13.20 ಲಕ್ಷ ರೂ. ವ್ಯಾಪಾರ ಮತ್ತು ಜಾಮೀನು ಸಾಲ ನೀಡಲಾಗಿದೆ. 2.61 ಲಕ್ಷ ರೂ. ಖಾಯಂ ಠೇವಣಿ ಹೊಂದಿದ್ದು, 4.94 ಲಕ್ಷ ರೂ. ಕ್ಷೇಮ ನಿಧಿ ಹೊಂದಿದ್ದು ಮರಣ ಹೊಂದಿದ 83 ಸದಸ್ಯರಿಗೆ 3.58 ಲಕ್ಷ ರೂ. ನೀಡಲಾಗಿದೆ. ಸಂಘದ ಅಭಿವೃದ್ಧಿಗೆ ಸದಸ್ಯರು ಸಹಕಾರ ನೀಡುವಂತೆ ಮನವಿ ಮಾಡಿದರು.

ಜಿಲ್ಲಾ ಸಹಕಾರ ಬ್ಯಾಂಕ ನಿರ್ದೇಶಕ ಕೆ.ಸತೀಶ್ ಮಾತನಾಡಿದರು. ಮುಖ್ಯ ಕಾರ್ಯ ನಿರ್ವ ಹಣಾಧಿಕಾರಿ ಎಚ್.ಎನ್.ಸುನೀತ ವರದಿ ಮಂಡಿಸಿದರು. ಉಪಾಧ್ಯಕ್ಷೆ ಗೌರಮ್ಮ, ನಿರ್ದೇಶಕರಾದ ತಿಮ್ಮೇಗೌಡ, ಎಲ್.ಉಮಾಪತಿ, ವಿ.ಎ.ಸುರೇಶ, ಶಿವಣ್ಣ, ಕೆ.ಕೃಷ್ಣೇಗೌಡ, ಕುಸುಮ, ವಿ.ಪಿ.ಗೋಪಮ್ಮ, ರಾಜು, ಜಿಲ್ಲಾ ಸಹಕಾರ ಬ್ಯಾಂಕ್ ಮೇಲ್ವಿಚಾರಕ ಬಸವರಾಜ್, ಸಿಬ್ಬಂದಿ ಉಪಸ್ಥಿತರಿದ್ದರು.

# ಆರ್.ಆರ್.ಆರ್. ಕೇಂದ್ರ ಸ್ಥಾಪನೆ




• ಪ್ರಜೋದಯ ವರದಿ

**ಆಲೂರು:** ಮರುಬಳಕೆ ಮಾಡ ಬಹುದಾದ ಮತ್ತು ಇತರೆ ಗೃಹೋಪಯೋಗಿ ವಸ್ತುಗಳನ್ನು ಸಾಮಾನ್ಯ ತ್ಯಾಜ್ಯದೊಂದಿಗೆ ಬೆರೆಸುವ ಬದಲು, ಖಾಸಗಿ ಸಹ ಭಾಗಿತ್ವದಲ್ಲಿ ಟ್ರಿಪಲ್ ಆರ್ ಕೇಂದ್ರಕ್ಕೆ ತಂದು ಹಸ್ತಾಂತರಿಸಲು ಅವಕಾಶ ನೀಡಲಾಗಿದೆ ಎಂದು ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ಮಂಜುನಾಥ್ ಅವರು ಮನವಿ ಮಾಡಿದ್ದಾರೆ.

ಪಟ್ಟಣದ 4ನೇ ವಾರ್ಡ್ ಸರ್ವರ್ ಪಾಷ ಅವರ ಮನೆ ಹತ್ತಿರ ನಗರಾಭಿವೃದ್ಧಿ ಇಲಾಖೆ ಪೌರಾಡಳಿತ ನಿರ್ದೇಶನಾಲಯ ಕೇಂದ್ರ ಆರ್.ಆರ್.ಆರ್. ಕೇಂದ್ರವನ್ನು ಇಂದಿನಿಂದ ತೆರೆಯಲಾಗಿದೆ. ಸ್ವಚ್ಛ, ಹಸಿರು ಮತ್ತು ತ್ಯಾಜ್ಯ ಮುಕ್ತ ಆಲೂರು ಪಟ್ಟಣ ಪಂಚಾಯಿತಿ ಮಾಡುವುದಕ್ಕಾಗಿ ನಾವೆಲ್ಲರೂ ಒಟ್ಟಾಗಿ ಕೆಲಸ ಮಾಡೋಣವೆಂದರು.

ಯಾವ ವ್ಯಕ್ತಿಯಾದರೂ ಎಲ್ಲೆಂದರಲ್ಲಿ ವಸ್ತುಗಳನ್ನು ಬಿಸಾಡದೆ, ಮರುಬಳಕೆ ಮಾಡ ಬಹುದಾದ ವಸ್ತುಗಳನ್ನು ಕೇಂದ್ರಕ್ಕೆ ತಲುಪಿಸಲು ಅವಕಾಶವಿದೆ. ಮನೆಯಿಂದ ಅನುಪಯುಕ್ತ ವಾಗಿ ಇರುವಂತಹ ಬಟ್ಟೆ, ಪೇಪರ್, ರಟ್ಟಿನ ಭಾಗಗಳು, ತಗಡು ಕಬ್ಬಿಣದ ತುಂಡುಗಳು ಸೇರಿ ವಿವಿಧ ವಸ್ತುಗಳನ್ನು ನೇರವಾಗಿ ಈ ಕೇಂದ್ರಕ್ಕೆ ತಲುಪಿಸಬಹುದು.

ವಸ್ತುಗಳನ್ನು ಸರಿಯಾದ ಮರುಬಳಕೆ ಮತ್ತು ಸುರಕ್ಷಿತ ವಿಲೇವಾರಿಗಾಗಿ ನೋಂದಾಯಿತ ಮರುಬಳಕೆದಾರರಿಗೆ ಹಸ್ತಾಂತರಿಸಲಾಗುತ್ತದೆ. ಎಲ್ಲಾ ನಾಗರಿಕರು ಈ ಸೌಲಭ್ಯವನ್ನು ಬಳಸಿಕೊಳ್ಳುವಂತೆ ಮತ್ತು ತ್ಯಾಜ್ಯ ಕಡಿತ, ಮರುಬಳಕೆ ಮತ್ತು ಮರುಬಳಕೆಯನ್ನು ಸಕ್ರಿಯವಾಗಿ ಬೆಂಬಲಿಸುವಂತೆ ಮನವಿ ಮಾಡಿದ್ದಾರೆ. ಹೆಚ್ಚಿನ ವಿವರಗಳಿಗೆ ಮೊ. ಸಂಖ್ಯೆ 6363285921, 9611335461 ಸಂಪರ್ಕಿಸಲು ಕೋರಲಾಗಿದೆ.

# ರಸ್ತೆ ಬದಿ ವ್ಯಾಪಾರ ತೆರವುಗೊಳಿಸಲು ಕಾಲಾವಕಾಶ

## ತಾಲ್ಲೂಕು ಆಡಳಿತ- ಪಟ್ಟಣ ಪಂಚಾಯಿತಿ ವತಿಯಿಂದ ತೆರವು ಕಾರ್ಯಾಚರಣೆ: ತಹಶೀಲ್ದಾರ್ ಸೌಮ್ಯ ಎಚ್ಚರಿಕೆ

• ಪ್ರಜೋದಯ ವರದಿ

**ಅರಕಲಗೂಡು:** ಪಟ್ಟಣದಲ್ಲಿ ಸುಗಮ ಸಂಚಾರಕ್ಕೆ ಅಡ್ಡಿಯಾಗಿರುವ ಬೀದಿ ಬದಿ ವ್ಯಾಪಾರಿಗಳು ರಸ್ತೆ ಬದಿಯಲ್ಲಿನ ತಮ್ಮ ವ್ಯಾಪಾರ ಸ್ಥಳಗಳನ್ನು ಸ್ವಯಂಪ್ರೇರಿತರಾಗಿ ತೆರವುಗೊಳಿಸಲು ಪಟ್ಟಣ ಪಂಚಾಯಿತಿ ಆಡಳಿತ ಹಾಗೂ ತಾಲೂಕು ಆಡಳಿತ ಎರಡು ದಿನಗಳ ಕಾಲಾವಕಾಶ ನೀಡಿದೆ.



ತಾಲ್ಲೂಕು ಕಚೇರಿ ಸಭಾಂಗಣದಲ್ಲಿ ಬುಧವಾರ ನಡೆದ ಬೀದಿ ಬದಿ ವ್ಯಾಪಾರಿಗಳೊಂದಿಗೆ ಸಭೆಯಲ್ಲಿ ತಹಶೀಲ್ದಾರ್ ಸೌಮ್ಯ ಅವರು ಮಾತನಾಡಿ, ಸರ್ವೋಚ್ಚ ನ್ಯಾಯಾಲಯದ ಆದೇಶದ ಹಿನ್ನಲೆಯಲ್ಲಿ ರಸ್ತೆ ಹಾಗೂ ಸಾರ್ವಜನಿಕ ಸ್ಥಳಗಳ ಆಸುಪಾಸಿನಲ್ಲಿ ನಡೆಯುತ್ತಿರುವ ವ್ಯಾಪಾರದಿಂದ ವಾಹನಗಳು ಮತ್ತು ಪಾದಚಾರಿಗಳ ಸುಗಮ ಸಂಚಾರಕ್ಕೆ ತೊಂದರೆಯಾಗುತ್ತಿದೆ. ಆದ್ದರಿಂದ ರಸ್ತೆ ಹಾಗೂ ಸಾರ್ವಜನಿಕ ಸ್ಥಳಗಳನ್ನು ಅತಿಕ್ರಮಿಸಿಕೊಂಡು ವ್ಯಾಪಾರ ನಡೆಸುತ್ತಿರುವವರು ಕೂಡಲೇ ಸ್ವಯಂಪ್ರೇರಿತರಾಗಿ ತೆರವುಗೊಳಿಸಬೇಕು. ನಿಗದಿತ ಅವಧಿಯಲ್ಲಿ ತೆರವು ಮಾಡದಿದ್ದರೆ ತಾಲ್ಲೂಕು ಆಡಳಿತ ಹಾಗೂ ಪಟ್ಟಣ ಪಂಚಾಯಿತಿ ವತಿಯಿಂದ ತೆರವು ಕಾರ್ಯಾಚರಣೆ ನಡೆಸಲಾಗುವುದು ಎಂದು ಎಚ್ಚರಿಕೆ ನೀಡಿದರು.

ಅಧಿಕಾರಿಗಳ ಸೂಚನೆಗೆ ಬೀದಿ ಬದಿ ವ್ಯಾಪಾರಿಗಳು ಯಾವುದೇ ಆಕ್ಷೇಪ ವ್ಯಕ್ತಪಡಿಸದೆ ಒಪ್ಪಿಗೆ ಸೂಚಿಸಿ ಸಭೆಯಿಂದ ತೆರಳಿದರು.

**ಹಳೇ ಬಸ್ ನಿಲ್ದಾಣದ ಪಾರ್ಕಿಂಗ್ ಸ್ಥಳ ತೆರವಿಗೆ ಸೂಚನೆ**

ಅ.ನ.ಕೃ. ವೃತ್ತದಲ್ಲಿರುವ ಹಳೇ ಬಸ್ ನಿಲ್ದಾಣದ ಮುಂಭಾಗದ ಪಾರ್ಕಿಂಗ್ ಸ್ಥಳವನ್ನು ಕೆಲ ಅಂಗಡಿ ಮಾಲೀಕರು ಬಳಸಿಕೊಳ್ಳುತ್ತಿರುವ ಬಗ್ಗೆ ಸಭೆಯಲ್ಲಿ ಚರ್ಚೆ ನಡೆಯಿತು. ಪಾರ್ಕಿಂಗ್‌ಗೆ ಮೀಸಲಾದ ಸ್ಥಳವನ್ನು ಬಿಟ್ಟುಕೊಡದೆ ರಸ್ತೆ ಜಾಗವನ್ನು ಅತಿಕ್ರಮಿಸಿಕೊಂಡು ಅಂಗಡಿಗಳನ್ನು ನಿರ್ಮಿಸಿ, ಅವುಗಳನ್ನು ಬಾಡಿಗೆಗೆ ನೀಡಿರುವ ಕುರಿತು ಅಧಿಕಾರಿಗಳ ಗಮನಕ್ಕೆ ತರಲಾಯಿತು.

ಈ ಹಿನ್ನೆಲೆಯಲ್ಲಿ ಹಳೇ ಬಸ್ ನಿಲ್ದಾಣದ ಮುಂಭಾಗದ ರಸ್ತೆ ಹಾಗೂ ಪಾರ್ಕಿಂಗ್ ಸ್ಥಳವನ್ನು ಅತಿಕ್ರಮಿಸಿಕೊಂಡಿರುವ ಅಂಗಡಿಗಳನ್ನು ತೆರವುಗೊಳಿಸುವಂತೆ ತಹಶೀಲ್ದಾರ್ ಸೌಮ್ಯ ಅವರು ಕೆಎಸ್‌ಆರ್‌ಟಿಸಿ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಬೀದಿ ಬದಿ ವ್ಯಾಪಾರಿಗಳಿಗೆ ಪರ್ಯಾಯವಾಗಿ ಶಿಕ್ಷಕರ ಭವನದ ಮುಂಭಾಗ, ಹಳೇ ಮಾರುಕಟ್ಟೆ ಹಾಗೂ ಕ್ರೀಡಾಂಗಣ ರಸ್ತೆಯಲ್ಲಿನ ಸ್ಥಳಗಳನ್ನು ಗುರುತಿಸಲಾಗಿದೆ. ಈ ಸ್ಥಳಗಳಲ್ಲಿ ವ್ಯಾಪಾರಕ್ಕೆ ಅವಕಾಶ ಕಲ್ಪಿಸುವ ಸಂದರ್ಭದಲ್ಲಿ ಮೊದಲಿಗೆ ಸ್ಥಳೀಯರಿಗೆ ಆದ್ಯತೆ ನೀಡಲಾಗುವುದು ಎಂದು ತಿಳಿಸಿದರು.

ಪಟ್ಟಣದಲ್ಲಿ ಸುಗಮ ಸಂಚಾರ, ಸ್ವಚ್ಛತೆ ಹಾಗೂ ಸಾರ್ವಜನಿಕರಿಗೆ ಅನುಕೂಲಕರ ವಾತಾವರಣ ನಿರ್ಮಾಣ ಮಾಡುವ ನಿಟ್ಟಿನಲ್ಲಿ ಪಟ್ಟಣ ಪಂಚಾಯಿತಿ ಕೈಗೊಳ್ಳುತ್ತಿರುವ ಕ್ರಮಗಳಿಗೆ ಬೀದಿ ಬದಿ ವ್ಯಾಪಾರಿಗಳು ಹಾಗೂ ಸಾರ್ವಜನಿಕರು ಸಹಕಾರ ನೀಡಬೇಕು ಎಂದು ಅಧಿಕಾರಿಗಳು ಮನವಿ ಮಾಡಿದರು.

ಸಭೆಯಲ್ಲಿ ಸಹಾಯಕ ಆರೋಗ್ಯ ನಿರೀಕ್ಷಕ ಚೇತನ್ ಕುಮಾರ್, ಕಂದಾಯ ಅಧಿಕಾರಿ ಸೋಮಶೇಖರ್ ಸೇರಿದಂತೆ ಅಧಿಕಾರಿಗಳು ಹಾಗೂ ಬೀದಿ ಬದಿ ವ್ಯಾಪಾರಿಗಳು ಉಪಸ್ಥಿತರಿದ್ದರು.

### 122 ಮಳಿಗೆಗಳ ಹರಾಜಿಗೆ ಸಿದ್ಧತೆ

ಪಟ್ಟಣ ಪಂಚಾಯಿತಿ ಒಡೆತನದಲ್ಲಿರುವ 122 ಮಳಿಗೆಗಳನ್ನು ಹರಾಜು ಮಾಡುವ ಸಂಬಂಧ ಈಗಾಗಲೇ ಸರ್ಕಾರದ ಅನುಮತಿಗಾಗಿ ಪ್ರಸ್ತಾವನೆ ಸಲ್ಲಿಸಲಾಗಿದೆ. ಸರ್ಕಾರದಿಂದ ಅನುಮತಿ ದೊರೆತ ಬಳಿಕ ಇನ್ನೆರಡು–ಮೂರು ತಿಂಗಳೊಳಗೆ ಮಳಿಗೆಗಳ ಹರಾಜು ಪ್ರಕ್ರಿಯೆ ನಡೆಸಲಾಗುವುದು.

– ನಾಗೇಂದ್ರ ಕುಮಾರ್, ಮುಖ್ಯಾಧಿಕಾರಿ, ಪಟ್ಟಣ ಪಂಚಾಯಿತಿ.

# ಎಸ್‌ಐಆರ್: ಮತದಾರರ ಮನೆಗೆ ತೆರಳಿ ವಿಚಾರಣೆ

## ಅನಾರೋಗ್ಯದಿಂದ ಹಾಜರಾಗದವರ ದಾಖಲೆ ಪರಿಶೀಲನೆ

• ಪ್ರಜೋದಯ ವರದಿ

**ಸಕಲೇಶಪುರ:** ಮತದಾರರ ಪಟ್ಟಿಯ ಪರಿಷ್ಕರಣೆ ಹಿನ್ನೆಲೆಯಲ್ಲಿ ಮತದಾರರ ವಿಶೇಷ ತೀವ್ರ ಪರಿಷ್ಕರಣೆ ಪ್ರಕ್ರಿಯೆಯಡಿ ಅನೋಮಾಲೀಸ್ ಹಾಗೂ ನೋ ಮ್ಯಾಪಿಂಗ್ ಪ್ರಕರಣಗಳಿಗೆ ಸಂಬಂಧಿಸಿದಂತೆ ನೋಟೀಸ್ ವಿಚಾರಣಾ ಕೇಂದ್ರಕ್ಕೆ ಹಾಜರಾಗಲು ಸಾಧ್ಯವಾಗದ ಮತದಾರರ ಮನೆಗಳಿಗೆ ಚುನಾವಣಾ ನೋಂದಣಿ ಅಧಿಕಾರಿ ಹಾಗೂ ಉಪವಿಭಾಗಾಧಿಕಾರಿ ಹುಲ್ಲುಮನಿ ತಿಮ್ಮಣ್ಣ ಅವರು ಬುಧವಾರ ತೆರಳಿ ಸ್ಥಳದಲ್ಲೇ ವಿಚಾರಣೆ ನಡೆಸಿ ಅಗತ್ಯ ಆದೇಶ ಹೊರಡಿಸಿದರು.



ಮತದಾರರ ಪಟ್ಟಿಗೆ ಸಂಬಂಧಿಸಿದಂತೆ ವಿವಿಧ ಕಾರಣಗಳಿಂದ ಕೆಲ ಮತದಾರರಿಗೆ ನೋಟೀಸ್ ಜಾರಿಯಾಗಿದ್ದು, ನಿಗದಿತ ವಿಚಾರಣಾ ಕೇಂದ್ರಕ್ಕೆ ಹಾಜರಾಗಿ ಅಗತ್ಯ ದಾಖಲೆಗಳನ್ನು ಸಲ್ಲಿಸಬೇಕಾಗಿತ್ತು. ಆದರೆ ಅನಾರೋಗ್ಯ, ವಯೋಸಹಜ ಸಮಸ್ಯೆ ಸೇರಿದಂತೆ ವಿವಿಧ ಕಾರಣಗಳಿಂದ ಕೆಲವು ಮತದಾರರಿಗೆ ವಿಚಾರಣಾ ಕೇಂದ್ರಕ್ಕೆ ಖುದ್ದಾಗಿ ಹಾಜರಾಗಲು ಸಾಧ್ಯವಾಗಿರಲಿಲ್ಲ.

ಇಂತಹ ಮತದಾರರಿಗೆ ಯಾವುದೇ ತೊಂದರೆಯಾಗದಂತೆ ಕ್ರಮ ಕೈಗೊಂಡ ಉಪವಿಭಾಗಾಧಿಕಾರಿ ಹುಲ್ಲುಮನಿ ತಿಮ್ಮಣ್ಣ ಅವರು, ಅಧಿಕಾರಿಗಳು ಹಾಗೂ ಸಿಬ್ಬಂದಿಯೊಂದಿಗೆ ಸಂಬಂಧಪಟ್ಟ ಮತದಾರರ ಮನೆಗಳಿಗೆ ತೆರಳಿ ವಿಚಾರಣೆ ನಡೆಸಿದರು. ಹಾನುಬಾಳು ಗ್ರಾಮದ ಖಲಂದರ್ ಷರೀಫ್ ಸೇರಿದಂತೆ ಅನಾರೋಗ್ಯ ಪೀಡಿತ ಮತದಾರರ ಮನೆಗಳಿಗೆ ಭೇಟಿ ನೀಡಿ ನಮೂನೆ, ಮತದಾರರ ದಾಖಲೆಗಳು, ವಿಳಾಸ ಹಾಗೂ ಇತರೆ ಅಗತ್ಯ ಮಾಹಿತಿಗಳನ್ನು ಪರಿಶೀಲಿಸಿ, ಮತದಾರರಿಂದ ಮಾಹಿತಿ ಪಡೆದು ಸ್ಥಳದಲ್ಲೇ ವಿಚಾರಣೆ ನಡೆಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ಮ್ಯಾಪಿಂಗ್ ಪ್ರಕ್ರಿಯೆಯಲ್ಲಿ ಅನಾರೋಗ್ಯದ ಕಾರಣದಿಂದ ಅಥವಾ ಅಗತ್ಯ ದಾಖಲೆಗಳನ್ನು ಸಲ್ಲಿಸಲು ಸಾಧ್ಯವಾಗದೆ ವಿಚಾರಣೆಯಿಂದ ದೂರ ಉಳಿದಿರುವ ಮತದಾರರ ಮನೆಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಲಾಗುತ್ತಿದೆ. ಸಂಬಂಧಪಟ್ಟವರು ನೈಜ ಹಾಗೂ ಅರ್ಹ ಮತದಾರರಾಗಿದ್ದರೆ ಅವರ ಮತದಾನದ ಹಕ್ಕು ಉಳಿಯುವಂತೆ ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಅವರು ತಿಳಿಸಿದರು.

ಮತದಾರರು ಅನಾರೋಗ್ಯ ಅಥವಾ ವಯೋಸಹಜ ಸಮಸ್ಯೆಯಂತಹ ಕಾರಣಗಳಿಂದ ವಿಚಾರಣಾ ಕೇಂದ್ರಕ್ಕೆ ಹಾಜರಾಗಲು ಸಾಧ್ಯವಾಗದ ಸಂದರ್ಭದಲ್ಲಿ ಅವರ ಮನೆಗಳಿಗೆ ತೆರಳಿ ದಾಖಲೆಗಳನ್ನು ಪರಿಶೀಲಿಸುವ ಮೂಲಕ ಅರ್ಹ ಮತದಾರರ ಹೆಸರು ಮತದಾರರ ಪಟ್ಟಿಯಲ್ಲಿ ಉಳಿಯುವಂತೆ ಕ್ರಮ ಕೈಗೊಳ್ಳಲಾಗುತ್ತಿದೆ. ಪ್ರಕ್ರಿಯೆಯಲ್ಲಿ ಯಾವುದೇ ಅರ್ಹ ಮತದಾರರು ಅವಕಾಶ ವಂಚಿತರಾಗದಂತೆ ಅಧಿಕಾರಿಗಳು ಕ್ರಮ ವಹಿಸುತ್ತಿದ್ದಾರೆ ಎಂದು ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ಸಂಬಂಧಪಟ್ಟ ಬಿಎಲ್‌ಒ (ಮತಗಟ್ಟೆ ಮಟ್ಟದ ಅಧಿಕಾರಿ) ಹಾಗೂ ಬಿಎಲ್‌ಒ ಮೇಲ್ವಿಚಾರಕರು ಉಪಸ್ಥಿತರಿದ್ದು, ವಿಚಾರಣಾ ಪ್ರಕ್ರಿಯೆಗೆ ಅಗತ್ಯ ಸಹಕಾರ ನೀಡಿದರು.

# ಸೆಪ್ಟೆಂಬರ್ ತಿಂಗಳ ಪಡಿತರ ವಿತರಣೆ

• ಪ್ರಜೋದಯ ವರದಿ



**ಬೇಲೂರು:** ಸೆಪ್ಟೆಂಬರ್ ತಿಂಗಳ ಪಡಿತರ ವಿತರಣೆ ಕುರಿತು ತಹಶೀಲ್ದಾರ್ ಅವರು ಮಾಹಿತಿ ಬಿಡುಗಡೆ ಮಾಡಿದ್ದು, ಅಂತ್ಯೋದಯ ಹಾಗೂ ಬಿಪಿಎಲ್ ಪಡಿತರ ಚೀಟಿದಾರರಿಗೆ ಸದಸ್ಯರ ಸಂಖ್ಯೆಗೆ ಅನುಗುಣವಾಗಿ ಅಕ್ಕಿ ವಿತರಿಸಲಾಗುವುದು ಎಂದು ಮಾಹಿತಿ ನೀಡಿದ್ದಾರೆ.

ಅಂತ್ಯೋದಯ ಪಡಿತರ ಚೀಟಿಯಲ್ಲಿ 1ರಿಂದ 3 ಸದಸ್ಯರಿರುವ ಕಾರ್ಡ್‌ಗಳಿಗೆ ಈ ತಿಂಗಳು ಅಕ್ಕಿ ಹಂಚಿಕೆ ಇರುವುದಿಲ್ಲ. 4 ಸದಸ್ಯರಿರುವ ಕಾರ್ಡ್‌ಗೆ 10 ಕೆ.ಜಿ., 5 ಸದಸ್ಯರಿಗೆ 30 ಕೆ.ಜಿ., 6 ಸದಸ್ಯರಿಗೆ 50 ಕೆ.ಜಿ., 7 ಸದಸ್ಯರಿಗೆ 70 ಕೆ.ಜಿ., 8 ಸದಸ್ಯರಿಗೆ 90 ಕೆ.ಜಿ., 9 ಸದಸ್ಯರಿಗೆ 110 ಕೆ.ಜಿ., 10 ಸದಸ್ಯರಿಗೆ 130 ಕೆ.ಜಿ., 11 ಸದಸ್ಯರಿಗೆ 150 ಕೆ.ಜಿ. ಹಾಗೂ 12 ಸದಸ್ಯರಿರುವ ಕಾರ್ಡ್‌ಗೆ 170 ಕೆ.ಜಿ. ಅಕ್ಕಿ ವಿತರಿಸಲಾಗುತ್ತದೆ. ಈ ಅಕ್ಕಿಯನ್ನು ಉಚಿತವಾಗಿ ನೀಡಲಾಗುವುದು ಎಂದು ಅವರು ತಿಳಿಸಿದ್ದಾರೆ.

ಬಿಪಿಎಲ್ ಪಡಿತರ ಚೀಟಿಗಳಲ್ಲಿ ಕೇಂದ್ರ ವ್ಯಾಪ್ತಿಯ ಕಾರ್ಡ್‌ನಲ್ಲಿರುವ ಪ್ರತಿ ಸದಸ್ಯರಿಗೆ 10 ಕೆ.ಜಿ. ಅಕ್ಕಿ, ರಾಜ್ಯ ವ್ಯಾಪ್ತಿಯ ಪಡಿತರ ಚೀಟಿಯಲ್ಲಿರುವ ಪ್ರತಿ ಸದಸ್ಯರಿಗೆ 10 ಕೆ.ಜಿ. ಅಕ್ಕಿ ವಿತರಿಸಲಾಗುವುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇದೇ ವೇಳೆ, ಇದುವರೆಗೂ ಇ-ಕೆವೈಸಿ ಮಾಡಿಸದಿರುವ ಹಾಗೂ ಐದು ವರ್ಷಗಳ ಹಿಂದೆ ಇ-ಕೆವೈಸಿ ಮಾಡಿಸಿರುವ ಪಡಿತರ ಚೀಟಿದಾರರು ತಮ್ಮ ವ್ಯಾಪ್ತಿಯ ಪಡಿತರ ನ್ಯಾಯಬೆಲೆ ಅಂಗಡಿಗೆ ತೆರಳಿ ಇ-ಕೆವೈಸಿ ಮಾಡಿಸಿಕೊಳ್ಳುವಂತೆ ಮತದಾರರಲ್ಲಿ ಮನವಿ ಮಾಡಿದ್ದಾರೆ.

ಪಡಿತರ ಚೀಟಿದಾರರು ಈ ಅವಕಾಶವನ್ನು ಸದುಪಯೋಗಪಡಿಸಿಕೊಂಡು ಇ- ಕೆವೈಸಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಿಕೊಳ್ಳುವಂತೆ ತಹಶೀಲ್ದಾರ್ ಶ್ರೀಧರ್ ಕಂಕನವಾಡಿ ಅವರು ಮನವಿ ಮಾಡಿದ್ದಾರೆ.

# ಯುವಜನತೆ ಸಹಕಾರ ಸಂಘಗಳ ಸದುಪಯೋಗ ಪಡೆಯಿರಿ

## ಸಹಕಾರ ತತ್ವ ಯುವಕರಿಗೆ ಆದರ್ಶ: ಜಿ.ಎಚ್ ಸಿದ್ದೇಶ

• ಪ್ರಜೋದಯ ವರದಿ

**ಹಾಸನ:** ಸಹಕಾರ ತತ್ವಗಳು ಯುವಕರಿಗೆ ಆದರ್ಶಪ್ರಾಯವಾಗಿದೆ ಎಂದು ಹಾಸನ ಜಿಲ್ಲಾ ಸಹಕಾರ ಒಕ್ಕೂಟದ ಅಧ್ಯಕ್ಷ ಜಿ.ಎಚ್.ಸಿದ್ದೇಶ್ ಹೇಳಿದರು.

ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ., ಬೆಂಗಳೂರು, ಹಾಸನ ಜಿಲ್ಲಾ ಸಹಕಾರ ಒಕ್ಕೂಟ, ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿ. ಸಹಕಾರ ಹಾಲು ಒಕ್ಕೂಟ ಸರ್ಕಾರೀ ಕಲಾ, ವಾಣಿಜ್ಯ ಮತ್ತು ಸ್ನಾತಕೋತ್ತರ ಕಾಲೇಜು, ಹಾಸನ ಮತ್ತು ಸಹಕಾರ ಇಲಾಖೆ ಸಂಯುಕ್ತಾಶ್ರಯದಲ್ಲಿ ಹಾಸನ ಜಿಲ್ಲಾ ಸಹಕಾರ ಒಕ್ಕೂಟದ ಸಹಕಾರ ಭವನದಲ್ಲಿ ''ಸಹಕಾರ'' ಕುರಿತಂತೆ ಜಿಲ್ಲಾ ಮಟ್ಟದ ಪ್ರೌಢ ಶಾಲಾ ವಿದ್ಯಾರ್ಥಿಗಳಿಗೆ ಪ್ರಬಂಧ ಮತ್ತು ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳಿಗೆ ಏರ್ಪಡಿಸಿದ್ದ ಚರ್ಚಾ ಸ್ಪರ್ಧೆ ಉದ್ಘಾಟಿಸಿ ಅವರು ಮಾತನಾಡಿದರು.



ಜಿಲ್ಲೆಯಲ್ಲಿ ವಿವಿಧ ರೀತಿಯ ಸಹಕಾರ ಸಂಘಗಳಿದ್ದು ಯವಜನರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಅದರ ಸದುಪಯೋಗ ಪಡೆಯಬೇಕು ಎಂದ ಅವರು, ಸಹಕಾರ ಸಂಘದ ಮೂಲ ತತ್ವವಾದ ಒಬ್ಬರಿಗಾಗಿ ಎಲ್ಲರೂ ಎಲ್ಲರಿಗಾಗಿ ಒಬ್ಬರು ಎಂಬಂತೆ ಮನುಷ್ಯ ತನಗಾಗಿ ಬದುಕುವುದು ಸಹಜ ಇರುವಂತಹ ಸಮಯದಲ್ಲಿ ಇತರರಿಗಾಗಿ ಸ್ವಲ್ಪ ಸಮಯವನ್ನು ಮೀಸಲಿರಿಸುವುದು ಅವರ ಕಷ್ಟ ಕಾರ್ಪಣ್ಯಗಳಲ್ಲಿ ಸಹಕರಿಸುವುದು ಮುಖ್ಯವಾಗಿರುತ್ತದೆ. ಈ ದಿಸೆಯಲ್ಲಿ ಯುವಜನರು ಗಮನಹರಿಸಿ ಮುಂದುವರೆಯಬೇಕು ಎಂದು ಕಿವಿಮಾತು ಹೇಳಿದರು.

ಸಹಕಾರ ಒಕ್ಕೂಟದ ನಿರ್ದೇಶಕ ವಿ.ಎನ್.ರಾಜಣ್ಣ ಅವರು ಮಾತನಾಡಿ, ಇಂತಹ ಸಹಕಾರ ಕುರಿತ ಸ್ಪರ್ಧೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮಕ್ಕಳು ಪಾಲ್ಗೊಂಡು ಪ್ರಸ್ತುತ ಕಾಲಘಟ್ಟದಲ್ಲಿ ಉತ್ತಮ ಸಹಕಾರಿಗಳಾಗಿ ಸಹಕಾರ ಕ್ಷೇತ್ರದಲ್ಲಿ ಪಾಲ್ಗೊಳ್ಳಲು ಕರೆ ನೀಡಿದರು.

ನಿರ್ದೇಶಕ ಎಸ್.ಎನ್. ಪ್ರಕಾಶ್ ಮಾತನಾಡಿ ಪ್ರಸ್ತುತ ವಿವಿಧ ರೀತಿಯ ಸಹಕಾರ ಸಂಘಗಳು ಕಾರ್ಯನಿರ್ವಹಿಸುತ್ತಿದ್ದು, ರೈತರು, ಸಹಕಾರಿಗಳು ಅರ್ಥಿಕ ಅಭಿವೃದ್ಧಿ ಹೊಂದಲು ಸಹಕಾರ ಸಂಘಗಳು ತುಂಬ ಉಪಯುಕ್ತವಾಗಿದೆ. ಜಿಲ್ಲೆಯಲ್ಲಿರುವ ವಿವಿಧ ರೀತಿಯ ಸಹಕಾರ ಸಂಘಗಳಿಂದ ಆಗುತ್ತಿರುವ ಅನೂಕೂಲಗಳ ಕುರಿತು ವಿದ್ಯಾರ್ಥಿಗಳಿಗೆ ತಿಳಿಸಿದರು.

ಜಿಲ್ಲಾ ಮಟ್ಟದ ಪ್ರಬಂಧ ಸ್ಪರ್ಧೆಯಲ್ಲಿ ಹಾಸನದ ವಿಜಯ ಶಾಲೆಯ ಪರಿಣಿತ ಅವರಿಗೆ ಪ್ರಥಮ, ಅರಕಲಗೂಡು ಬಸವಾಪಟ್ಟಣದ ಕರ್ನಾಟಕ ಪಬ್ಲಿಕ್ ಶಾಲೆಯ ಕು ಸಂಗೀತಾ ದ್ವಿತೀಯ, ಅರಕಲಗೂಡಿನ ಕೊಣನೂರುನಲ್ಲಿರು ಬಿಎಸ್‌ಎಸ್ ಸರ್ಕಾರಿ ಪ್ರೌಢಶಾಲೆಯ ನೂರೈನಾ ರೈನಾ ತೃತೀಯ ಬಹುಮಾನ ಪಡೆದರು.

ಕಾರ್ಯಕ್ರಮದಲ್ಲಿ ಒಕ್ಕೂಟದ ನಿರ್ದೇಶಕರಾದ ಸೋಮೇಗೌಡ, ವಿ.ಎನ್.ರಾಜಣ್ಣ, ನಾಗರಾಜು, ಪುಟ್ಟಸ್ವಾಮಿಗೌಡ ಸೇರಿ ಇನ್ನಿತರರು ಹಾಜರಿದ್ದರು.

# ಅರಕಲಗೂಡು ಕಾಲೇಜಿಗೆ ಸಮಗ್ರ ಪ್ರಶಸ್ತಿ



**ಅರಕಲಗೂಡು:** ಪಟ್ಟಣದ ಬಾಲಕಿಯರ ಪದವಿ ಪೂರ್ವ ಕಾಲೇಜಿನ ಪ್ರೌಢಶಾಲಾ ವಿಭಾಗದ ವಿದ್ಯಾರ್ಥಿನಿಯರು 17 ವರ್ಷ ವಯೋಮಿತಿಯ ಕಸಬಾ ಹೋಬಳಿ ಮಟ್ಟದ ಕ್ರೀಡಾಕೂಟದಲ್ಲಿ ಸರ್ವಾಂಗೀಣ ಪ್ರದರ್ಶನ ನೀಡಿ ಬಾಲಕಿಯರ ವಿಭಾಗದ ಸಮಗ್ರ ಪ್ರಶಸ್ತಿಯನ್ನು ತಮ್ಮ ಮುಡಿಗೇರಿಸಿಕೊಂಡಿದ್ದಾರೆ.

ಕ್ರೀಡಾಪಟು ರೂಪ ಅತ್ಯುತ್ತಮ ವೈಯಕ್ತಿಕ ಪ್ರದರ್ಶನದೊಂದಿಗೆ ಬಾಲಕಿಯರ ವೀರಾಗ್ರಣಿ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಕ್ರೀಡಾಕೂಟದ ಅಥ್ಲೆಟಿಕ್ಸ್ ಹಾಗೂ ಕ್ರೀಡಾ ಸ್ಪರ್ಧೆಗಳಲ್ಲಿ ಪಾರಮ್ಯ ಮೆರೆದ ಕಾಲೇಜಿನ ಬಾಲಕಿಯರು, 3000 ಮೀಟರ್ ಓಟದಲ್ಲಿ ಪ್ರಥಮ ಹಾಗೂ ದ್ವಿತೀಯ ಸ್ಥಾನ ಗಳಿಸಿದರೆ, 4400 ಮೀಟರ್ ರಿಲೇ, ಗುಂಡು ಎಸೆತ, ಉದ್ದ ಜಿಗಿತ, ತ್ರಿವಿಧ ಜಿಗಿತ ಹಾಗೂ 800 ಮೀಟರ್ ಓಟದ ಸ್ಪರ್ಧೆಗಳಲ್ಲಿ ಪ್ರಥಮ ಸ್ಥಾನ ಪಡೆದುಕೊಂಡರು. ಉಳಿದಂತೆ 3000 ಮೀಟರ್ ನಡಿಗೆ, ಜಾವೆಲಿನ್ ಎಸೆತ, 400 ಮೀಟರ್ ಓಟ, ವಾಲಿಬಾಲ್ ಮತ್ತು ಬಾಲ್ ಬ್ಯಾಡ್ಮಿಂಟನ್ ಸ್ಪರ್ಧೆಗಳಲ್ಲಿ ದ್ವಿತೀಯ ಸ್ಥಾನಕ್ಕೆ ತೃಪ್ತಿಪಟ್ಟರು. ತಟ್ಟೆ ಎಸೆತ, ಎತ್ತರ ಜಿಗಿತ ಹಾಗೂ ಹ್ಯಾಮರ್ ಎಸೆತ ಸ್ಪರ್ಧೆಗಳಲ್ಲಿ ತೃತೀಯ ಸ್ಥಾನ ಗಳಿಸಿದರು.

ವೈಯಕ್ತಿಕ ವಿಭಾಗದಲ್ಲಿ ಅಪ್ರತಿಮ ಸಾಮರ್ಥ್ಯ ತೋರಿದ ವಿದ್ಯಾರ್ಥಿನಿ ರೂಪ 3000 ಮೀಟರ್ ಓಟ, 800 ಮೀಟರ್ ಓಟ ಹಾಗೂ 4400 ಮೀಟರ್ ರಿಲೇ ಸ್ಪರ್ಧೆಗಳಲ್ಲಿ ಪ್ರಥಮ ಸ್ಥಾನ ಗಳಿಸಿದ್ದಲ್ಲದೆ, 3000 ಮೀಟರ್ ನಡಿಗೆಯಲ್ಲಿ ದ್ವಿತೀಯ ಸ್ಥಾನ ಪಡೆದು ಬಾಲಕಿಯರ ವೀರಾಗ್ರಣಿ ಗೌರವಕ್ಕೆ ಪಾತ್ರರಾದರು.

# ರೈತರಿಗೆ ಶೂನ್ಯ ಬಡ್ಡಿ ದರದಲ್ಲಿ 340 ಕೋಟಿ ರೂ. ಸಾಲ ವಿತರಣೆ

## ಕೃಷಿ ಪತ್ತಿನ ಸಹಕಾರ ಸಂಘಗಳು ರೈತರ ಜೀವನಾಡಿ: ಸಿ.ಎನ್.ಪುಟ್ಟಸ್ವಾಮಿಗೌಡ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ರೈತರ ಅಭಿವೃದ್ಧಿಗಾಗಿ ಕೃಷಿಪತ್ತಿನ ಸಹಕಾರ ಸಂಘಗಳಡಿ ತಾಲ್ಲೂಕಿನ 53 ಸಾವಿರ ರೈತರಿಗೆ ಶೂನ್ಯ ಬಡ್ಡಿದರದಲ್ಲಿ 340 ಕೋಟಿ ರೂ. ಸಾಲವನ್ನು ವಿತರಿಸಲಾಗಿದೆ ಎಂದು ರಾಜ್ಯ ಮಾರಾಟ ಮಹಾ ಮಂಡಳದ ನಿರ್ದೇಶಕ ಸಿ. ಎನ್. ಪುಟ್ಟಸ್ವಾಮೀಗೌಡ ಅವರು ಹೇಳಿದರು.



ಪಟ್ಟಣದ ಕಸಬಾ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ ಬುಧವಾರ ನಡೆದ ನಡೆದ 2025–26ನೇ ಸಾಲಿನ ಸರ್ವಸದಸ್ಯರ ವಾರ್ಷಿಕ ಮಹಾಸಭೆ ಉದ್ಘಾಟಿಸಿ ಮಾತನಾಡಿದ ಅವರು, ತಾಲ್ಲೂಕಿನ 41 ಕೃಷಿಪತ್ತಿನ ಸಹಕಾರ ಸಂಘಗಳಿಂದ ರೈತರಿಗೆ ನೇರವಾಗಿ 340 ಕೋಟಿ ಬೆಳೆಸಾಲ ವಿತರಿಸಲಾಗಿದೆ, ಇದರೊಂದಿಗೆ ಮಧ್ಯಮಾವಧಿ ಸಾಲವಾಗಿ 10 ಕೋಟಿ ರೂ, ಸ್ತ್ರಿಶಕ್ತಿ ಸಂಘಗಳಿಗೆ 50 ಕೋಟಿ ರೂ. ಸಾಲ ಸೇರಿ 2026 ಮಾರ್ಚ್ ಅಂತ್ಯಕ್ಕೆ 400 ಕೋಟಿ ಸಾಲವನ್ನು ನೀಡಲಾಗಿದೆ. ದೊಡ್ಡ ಪ್ರಮಾಣದಲ್ಲಿ ಸಾಲ ವಿತರಣೆಗೆ ಕಾರಣ 25ವರ್ಷಗಳಿಂದ ಜಿಲ್ಲಾ ಸಹಕಾರ ಬ್ಯಾಂಕ್‌ನ ನಿರ್ದೇಶಕರಾಗಿರುವ ಶಾಸಕ ಬಾಲಕೃಷ್ಣರ ಆಸಕ್ತಿ ಕಾರಣವಾಗಿದ್ದಾರೆ ಎಂದರು.

ಕಸಬಾ ಸೊಸೈಟಿಯಡಿ 2656 ಷೇರುದಾರರ ಪೈಕಿ 1213 ಸದಸ್ಯರಿಗೆ 8ಕೋಟಿ 16 ಲಕ್ಷ ರೂ.ಗಳನ್ನು ಶೂನ್ಯ ಬಡ್ಡಿದರದಲ್ಲಿ ಸಾಲ ನೀಡಲಾಗಿದೆ. 62 ಮಂದಿಗೆ ಹೈನುಗಾರಿಕೆಗಾಗಿ 6 ಲಕ್ಷದ 20 ಸಾವಿರ ರೂ. ಸಾಲ, ಮಧ್ಯಮಾವಧಿ ಸಾಲವಾಗಿ 75 ಜನಕ್ಕೆ 7 ಕೋಟಿ 82 ಲಕ್ಷ ರೂ.ಗಳ ಸಾಲ ಸೇರಿ ಒಟ್ಟಾರೆಯಾಗಿ 1350 ಮಂದಿಗೆ 16 ಕೋಟಿ ರೂ.ಗಳಷ್ಟು ಸಾಲ ನೀಡಲಾಗಿದೆ ಎಂದ ಅವರು, ಕೆಲ ಸದಸ್ಯರು ಸಾಲ ನೀಡುವಲ್ಲಿ ತಾರತಮ್ಯ ಎಸಗಿದ್ದಾರೆ. ಹೆಚ್ಚುವರಿ ಸಾಲ ನೀಡುವ ವೇಳೆ ತಮ್ಮನ್ನು ಪರಿಗಣಿಸಿಲ್ಲ ಎಂಬುದಾಗಿ ಆರೋಪಿಸಿದ್ದಾರೆ. ಹೆಚ್ಚುವರಿ ಸಾಲ ವಿತರಣೆಗೆ ಅರ್ಜಿ ಆಹ್ವಾನಿಸಿದ ವೇಳೆ ಅಂತಹವರನ್ನು ಮೊದಲ ಪರಿಗಣಿಸುವ ಮೂಲಕ ತಾರತಮ್ಯ ಹೋಗಲಾಡಿಬೇಕೆಂದರು.

ಸಂಘದ ಅಧ್ಯಕ ಕೆ.ಎನ್.ಶಂಕರ್ ಮಾತನಾಡಿ, ರೈತರು ಪಡೆದ ಸಾಲವನ್ನು ಸೂಕ್ತ ಸಮಯಕ್ಕೆ ಕಟ್ಟಿ, ಸಂಘದ ಅಭಿವೃದ್ದಿಗೆ ಮುಂದಾಗಬೇಕೆಂದು ಮನವಿ ಮಾಡಿದರು. ಟಿಎಪಿಸಿಎಂಎಸ್ ಅಧ್ಯಕ್ಷ ಹೆಚ್. ಆರ್.ವೆಂಕಟೇಶ್‌ಮೂರ್ತಿ ಮಾತನಾಡಿದರು. ಸಭೆಯಲ್ಲಿ 2024–25ನೇ ಲೆಕ್ಕ ಪತ್ರದ ಮಂಡನೆಯನ್ನು ಸೊಸೈಟಿಯ ಸಿಇಓ ಸಿ.ಎನ್. ರಮೇಶ್ ಮಂಡಿಸಿದರು.

ಉಪಾಧ್ಯಕ್ಷ ಕುರವಂಕ ಮಂಜೇಗೌಡ, ನಿರ್ದೇಶಕರುಗಳಾದ ವೈ.ಎನ್.ಜಯಣ್ಣ, ಕುರವಂಕ ರಾಮಕೃಷ್ಣ, ಭಾಗ್ಯಮ್ಮ, ಲತಾ ಶಂಭುಲಿಂಗೇಗೌಡ, ಜಿ.ಆರ್.ಶ್ರೀನಿವಾಸ್, ರವಿ ಮಳ್ಳೇನಹಳ್ಳಿ, ನಂಜುಂಡಯ್ಯ, ಮುದ್ದನಾಯಕ, ಮತ್ತು ಸಂಘದ ಸಿಇಓ ಸಿ.ಎನ್.ರಮೇಶ್, ಲೆಕ್ಕಣಿಗ ಎಂ.ಪಿ.ಲೋಕೇಶ್, ಗುಮಾಸ್ತರಾದ ಎಂ.ಕೆ.ವಿನುತಾ, ಸಿ.ಎಸ್.ಹೇಮಾ, ರಾಘವೇಂದ್ರ ಹಾಗೂ ಸಹಾಯಕರಾದ ಡಿ.ಡಿ.ಗಿರೀಶ್, ಕೆ.ಸಿ.ವಿಕಾಸ್ ಉಪಸ್ಥಿತರಿದ್ದರು.

# ಇಂದು ವ್ಯತ್ಯಯ

• ಪ್ರಜೋದಯ ವರದಿ



**ಹಾಸನ:** ಬೇಲೂರು ತಾಲ್ಲೂಕಿನಲ್ಲಿರುವ ದ್ವಿ-ವಿದ್ಯುತ್ ಮಾರ್ಗಗಳ ಗೋಪುರಗಳ ಮೇಲೆ ಹಾಲಿ ಇರುವ 66ಕೆ.ವಿ ಸಕಲೇಶಪುರ-ಅರೇಹಳ್ಳಿ ವಿದ್ಯುತ್ ಮಾರ್ಗದ ಗೋಪುರ ನಿರ್ಮಾಣ ಕಾಮಗಾರಿ ಹಾಗೂ ವಾಹಕ ಎಳೆಯುವ ಕಾಮಗಾರಿಗೆ ಸಂಬಂಧಿಸಿದಂತೆ, ಸದರಿ 66 ಕೆ.ವಿ ಸಕಲೇಶಪುರ -ಅರೇಹಳ್ಳಿ ವಿದ್ಯುತ್ ಮಾರ್ಗದ ಲೈನ್ ಕ್ಲಿಯರ್ ತೆಗೆದುಕೊಳ್ಳುವುದರಿಂದ 66/11 ಕೆ.ವಿ ಅರೇಹಳ್ಳಿ ಮತ್ತು ಹಾನಬಾಳು ವಿದ್ಯುತ್ ವಿತರಣಾ ಕೇಂದ್ರದಿಂದ ವಿದ್ಯುತ್ ಸರಬರಾಜಾಗುವ 11 ಕೆ.ವಿ ಪೂರಕಗಳ ಗ್ರಾಹಕರಿಗೆ ಸೆ.10 ರಂದು ಬೆಳಿಗ್ಗೆ 8 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ಸಾರ್ವಜನಿಕರು ಸಹಕರಿಸುವಂತೆ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಯೋಜನೆಗಳು ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರ್ (ವಿ) ಕೋರಿದ್ದಾರೆ.

# ಆಲೂರು, ಸಕಲೇಶಪುರ ಬರಪಟ್ಟಿಗೆ: ಆಗ್ರಹ

## ಅಧಿವೇಶನದಲ್ಲಿ ಹೋರಾಟ: ಶಾಸಕ ಸಿಮೆಂಟ್ ಮಂಜು

• ಪ್ರಜೋದಯ ವರದಿ

**ಆಲೂರು:** ಆಲೂರು, ಸಕಲೇಶಪುರ ತಾಲ್ಲೂಕುಗಳನ್ನು ಕಡ್ಡಾಯವಾಗಿ ಬರದ ಪಟ್ಟಿಗೆ ಸೇರಿಸದಿದ್ದರೆ ಮುಂಬರುವ ವಿದಾನಸಭೆ ಅಧಿವೇಶನದಲ್ಲಿ ಬೃಹತ್ ಹೋರಾಟ ನಡೆಸಲಾಗುವುದು ಎಂದು ಶಾಸಕ ಸಿಮೆಂಟ್ ಮಂಜು ಅವರು ರಾಜ್ಯ ಸರ್ಕಾರವನ್ನು ಆಗ್ರಹಿಸಿದರು.



ಪಟ್ಟಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಸರ್ಕಾರ ಎರಡು ಬಾರಿ ಬರ ಪಟ್ಟಿ ಬಿಡುಗಡೆ ಮಾಡಿದರೂ ನಮ್ಮ ಕ್ಷೇತ್ರ ಕೈ ಬಿಡಲಾಗಿದೆ. ಈಗಾಗಲೆ ಜಿಲ್ಲಾ ಉಸ್ತುವಾರಿ ಮತ್ತು ಕಂದಾಯ ಸಚಿವರನ್ನು ಖುದ್ದಾಗಿ ಭೇಟಿ ಮಾಡಿ ಚರ್ಚಿಸಿ ಮನವಿ ಮಾಡಿದ್ದೇನೆ. ಈಗಲಾದರೂ ಬರ ಪಟ್ಟಿಗೆ ಸೇರಿಸದೆ ವಂಚಿತರನ್ನಾಗಿ ಮಾಡಿದರೆ, ನಾಡಿದ್ದು ನಡೆಯುವ ಅಧಿವೇಶನದಲ್ಲಿ ದೊಡ್ಡ ಮಟ್ಟದ ಪ್ರತಿಭಟನೆ ಮಾಡಲಾಗುವುದು. ಸರ್ಕಾರ ಸ್ಪಂದಿಸುತ್ತದೆ ಎಂಬ ವಿಶ್ವಾಸವಿದೆ ಎಂದು ಹೇಳಿದರು.

ಜಿಲ್ಲಾ ಉಸ್ತುವಾರಿ ಸಚಿವರಾದ ಶಿವಲಿಂಗೇ ಗೌಡ ಅವರನ್ನು ಆಲೂರು ತಾಲ್ಲೂಕು, ಕಟ್ಟಾಯ ಹೋಬಳಿಗೆ ಕರೆತಂದು ಒಟ್ಟಾಗಿ ಬರ ಅಧ್ಯಯನವನ್ನು ಖುದ್ದಾಗಿ ಮಾಡಿದ್ದೇವೆ. ದುರಂತವೆಂದರೆ ಹಾಸನದಿಂದ ಕೇವಲ 7 ಕಿ.ಮೀ. ದೂರವಿರುವ ಆಲೂರು ತಾಲ್ಲೂಕನ್ನು ಬರ ಪಟ್ಟಿಯಿಂದ ಕೈ ಬಿಟ್ಟಿರುವುದು ದುರಂತ. ಸಕಲೇಶಪುರ ತಾಲ್ಲೂಕಿನಲ್ಲಿ ಕಳೆದ ವರ್ಷಕ್ಕೆ ಹೋಲಿಸಿದರೆ ಶೇ. 50 ರಷ್ಟು ಮಳೆಯಾಗಿಲ್ಲ. ರೈತರು ಸಂಪೂರ್ಣ ಕಷ್ಟಕ್ಕೆ ಸಿಲುಕಿದ್ದಾರೆ. ರಾಜಕೀಯ ಪಕ್ಷಗಳು ರೈತರು, ಬಡವರು, ನೊಂದವರ ವಿಚಾರದಲ್ಲಿ ರಾಜಕೀಯ ಮಾಡಬಾರದು.

ಕಾಡಾನೆಗಳ ಹಾವಳಿ ತಡೆಯುವ ಸಂದರ್ಭದಲ್ಲಿ ಇಟಿಎಫ್ ಸಿಬ್ಬಂದಿಗಳಿಗೆ ಅಗತ್ಯ ಉಪಯುಕ್ತ ರಕ್ಷಣಾ ಸಲಕರಣೆಗಳಾದ ಡ್ರೋನ್ ಕ್ಯಾಮರ, ಸುರಕ್ಷಿತ ಬೂಟುಗಳು ಮತ್ತು ಅಗತ್ಯ ಸಲಕರಣೆಗಳನ್ನು ಸರ್ಕಾರ ಒದಗಿಸಬೇಕು. ಎಲ್ಲರಂತೆ ಇಟಿಎಫ್ ಸಿಬ್ಬಂದಿಗಳ ಜೀವ ರಕ್ಷಣೆ ಸಹ ಅತಿ ಮುಖ್ಯವಾಗಿದೆ. ಈ ಕುರಿತು ಈಗಾಗಲೇ ಅರಣ್ಯ ಸಚಿವರಿಗೆ ಪತ್ರ ಬರೆದು ಮನವಿ ಮಾಡಿದ್ದೇನೆ.

ವಾಟೆಹೊಳೆ ಜಲಾಶಯದಿಂದ ನಾಲೆಯಲ್ಲಿ ನೀರು ಬಿಡಲು ಕೂಡಲೆ ಕ್ರಮ ಕೈಗೊಳ್ಳುವಂತೆ ಸಚಿವರಲ್ಲಿ ದೂರವಾಣಿ ಮೂಲಕ ಮನವಿ ಮಾಡಿದ್ದೇನೆ. ತಾಲ್ಲೂಕಿನ ಸುಮಾರು 18 ಸಾವಿರ ಎಕರೆ ಪ್ರದೇಶದಲ್ಲಿ ಬೆಳೆದಿರುವ ಅಲ್ಪಸ್ವಲ್ಪ ಬೆಳೆ ಉಳಿಸಬೇಕಾಗಿದೆ. ಎರಡು ದಿನಗಳಲ್ಲಿ ನೀರು ಹರಿಸುವುದಾಗಿ ಭರವಸೆ ನೀಡಿದ್ದಾರೆ. ನೀರು ಬಿಡದಿದ್ದರೆ ರೈತರ ಜೊತೆ ನಾವು ಜೊತೆಗೂಡಿ ಜಲಾಶಯದಿಂದ ನೀರು ಬಿಡಲು ಅಗತ್ಯ ಕ್ರಮ ಕೈಗೊಳ್ಳುತ್ತೇವೆ ಎಂದರು.



# ಪ್ರತಿ ಬ್ಯಾರೆಲ್‌ಗೆ 100 ಡಾಲರ್ ಗಡಿ ದಾಟಿದ ಕಚ್ಚಾ ತೈಲ ಬೆಲೆ

ಅಮೆರಿಕ ಮತ್ತು ಇರಾನ್ ನಡುವಿನ ಸಂಘರ್ಷದಿಂದ ಮತ್ತೆ ಮಧ್ಯಪ್ರಾಚ್ಯದಲ್ಲಿ ಉದ್ವಿಗ್ನತೆ ಹೆಚ್ಚುತ್ತಿದೆ. ಪರಿಣಾಮ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ ಶತಕ ಬಾರಿಸಿದೆ.

ತೈಲ ಬೆಲೆಗಳು ಬುಧವಾರ ಪ್ರತಿ ಬ್ಯಾರೆಲ್‌ಗೆ ಶೇ. 1 ಕ್ಕಿಂತ ಹೆಚ್ಚು ಏರಿಕೆಯಾಗುವ ಮೂಲಕ 100 ಡಾಲರ್ ಗಡಿ ದಾಟಿದೆ. ಬ್ರೆಂಟ್ ಕಚ್ಚಾ ತೈಲದ ಫ್ಯೂಚರ್ ಬೆಲೆ ಇಂಟರ್ಕಾಂಟಿ ನೆಂಟಲ್ ಎಕ್ಸ್ಚೇಂಜ್‌ನಲ್ಲಿ ಬುಧವಾರ ಬ್ಯಾರೆಲ್‌ಗೆ ಭರ್ತಿ 100 ಡಾಲರ್ ತಲುಪಿದೆ.

# ಜಿಲ್ಲೆಗೂ ಸಿಎನ್‌ಜಿ ಗ್ಯಾಸ್ ಪೈಪ್‌ಲೈನ್ ಸಂಪರ್ಕ

• ಪ್ರಜೋದಯ ವರದಿ

**ಹಾಸನ:** ಜಿಲ್ಲೆಯಲ್ಲೂ ನೈಸರ್ಗಿಕ ಅನಿಲ ಮೂಲ ಸೌಕರ್ಯವನ್ನು ಬಲಪಡಿಸುವ ಉದ್ದೇಶದಿಂದ ಥಿಂಕ್ ಗ್ಯಾಸ್ ಸಂಸ್ಥೆ ಸಿಎನ್‌ಜಿ ಪೈಪ್‌ಲೈನ್ ಸಂಪರ್ಕವನ್ನು ವಿಸ್ತರಿಸುತ್ತಿದೆ ಎಂದು ಸಂಸ್ಥೆಯ ಪ್ರಾದೇಶಿಕ ಸಹಾಯಕ ಮುಖ್ಯಸ್ಥ ಬಸವರಾಜು ಅವರು ತಿಳಿಸಿದರು.




ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹಾಸನ, ಚಿಕ್ಕಮಗಳೂರು, ಕೊಡಗು ಈ ಮೂರು ಜಿಲ್ಲೆಗಳ ವ್ಯಾಪ್ತಿಯಲ್ಲಿ 23 ಸಿಎನ್‌ಜಿ ಕೇಂದ್ರಗಳು ಕಾರ್ಯನಿರ್ವಹಿಸುತ್ತಿದ್ದು, ಮುಂದಿನ ಆರು ತಿಂಗಳಲ್ಲಿ ಇನ್ನೂ 6 ಕೇಂದ್ರಗಳನ್ನು ಆರಂಭಿಸಲು ಯೋಜಿಸಲಾಗಿದೆ. ಕುಣಿಗಲ್-ಶಾಂತಿಗ್ರಾಮ ಕಾರಿಡಾರ್ ಉದ್ದಕ್ಕೂ 106 ಕಿಮೀ ಉಕ್ಕಿನ ಪೈಪ್‌ಲೈನ್ ಹಾಕಲಾಗಿದ್ದು, ಶಾಂತಿಗ್ರಾಮದವರೆಗೂ ಬಂದಿದೆ. ಶೀಘ್ರವೇ ಹಾಸನ ನಗರಕ್ಕೆ ಬಂದ ನಂತರ ಆರಂಭದಲ್ಲಿ ಅರಕಲಗೂಡು ಮತ್ತು ಹಾಸನ ಕೆಐಎಡಿಬಿ ಮತ್ತು ಕುಶಾಲನಗರದಲ್ಲಿ ವಿಸ್ತರಣೆ ಮಾಡಲು ಯೋಜಿಸಲಾಗಿದೆ ಎಂದರು.

ದೇಶದಲ್ಲಿ ಒಟ್ಟು 49 ಜಿಲ್ಲೆಗಳಲ್ಲಿ ಥಿಂಕ್‌ಗ್ಯಾಸ್ ಇದ್ದು, ಕರ್ನಾಟಕದಲ್ಲಿ 15 ಜಿಲ್ಲೆಗಳಲ್ಲಿ ಸಂಪರ್ಕ ಹೊಂದಿದೆ. ಈ ಭಾಗದಲ್ಲಿ ಮನೆ ಬಳಗೆ ಹಾಗು ಕೈಗಾರಿಕೆಗಳಿಗೆ ಸಂಪರ್ಕ ಕಲ್ಪಿಸಲು ಬೇಕಾದ ಮೂಲಸೌಕರ್ಯ ಅಭಿವೃದ್ಧಿ ಪಡಿಸಲಾಗುತ್ತಿದೆ.

ನೈಸರ್ಗಿಕ ಅನಿಲ ಹೆಚ್ಚು ಸುರಕ್ಷಿತ, ಅಡುಗೆ ಮನೆ ಅಥವಾ ಬೇರೆ ಕಡೆಯಲ್ಲಿ ಸ್ಟೋರೇಜ್ ಇಡುವ ಪ್ರಶ್ನೆಯೇ. ಮನೆ ಸಂಪರ್ಕ ಪಡೆದವರಿಗೆ ಶೇ.15 ರಷ್ಟು, ಹೋಟೆಲ್‌ಗಳಿಗೆ ಶೇ.30 ರಿಯಾಯಿತಿ ಸಿಗಲಿದೆ ಎಂದು ಹೇಳಿದರು.

ನೈಸರ್ಗಿಕ ಅನಿಲದಲ್ಲಿ ಸಿಲಿಂಡರ್ ಇರುವುದಿಲ್ಲ. ಪೈಪ್‌ಲೈನ್ ಮೂಲಕ ವ್ಯವಸ್ಥೆ ಮಾಡಲಾಗುವುದು. ಪೂರೈಕೆಯಲ್ಲಿ ವ್ಯತ್ಯೆಯವಾದರೆ ಪರ್ಯಾಯ ಬ್ಯಾಕಪ್ ವ್ಯವಸ್ಥೆ ಇರಲಿದೆ. ಗ್ರಾಹಕರು, ಉದ್ಯಮಿಗಳು ಯಾವುದೇ ಆತಂಕ ಪಡುವಂತಿಲ್ಲ. ಸಿಎನ್‌ಜಿ ಗಾಳಿಗಿಂತ ಹಗುರ, ಹೆಚ್ಚು ವಾಸನೆ ಇದ್ದರೂ, ಅಷ್ಟೇನು ಅಪಾಯ ಕಾರಿಯಲ್ಲ. ಮೇಲ್ವಿಚಾರಣೆಗಾಗಿ ತಂಡ ಇರಲಿದೆ, ರೆಸ್ಪಾನ್ಸ್ ಟೀಂ ಜೊತೆಗೆ ಪ್ರಥಮ ಮಿತ್ರ ತಂಡವೂ ಸನ್ನದ್ಧವಾಗಿರಲಿದೆ ಎಂದರು.

ಹಾಸನ ಮೇಲ್ವಿಚಾರಕರಾದ ಪ್ರವೀಣ್, ವಿವಿಧ ಘಟಕಗಳ ಮಂಜುನಾಥ್, ಕಾರ್ತಿಕ್, ರವಿಕುಮಾರ್ ಅವರು ಹಾಜರಿದ್ದರು.

## ಬೇಲೂರು: ಪುರಸಭೆ ಮುಂಭಾಗ ಕೆಆರ್‌ಎಸ್ ಪಕ್ಷದಿಂದ ಪ್ರತಿಭಟನೆ

# ನೀರುಗಂಟಿಗಳ ವೇತನ, ಪಿಎಫ್ ಪಾವತಿಗೆ ಆಗ್ರಹ

• ಪ್ರಜೋದಯ ವರದಿ

**ಬೇಲೂರು:** ಪುರಸಭೆಯ ನೀರು ಸರಬರಾಜು ನೌಕರರಿಗೆ ಬಾಕಿ ಇರುವ ವೇತನವನ್ನು ಕೂಡಲೇ ಪಾವತಿಸುವುದರ ಜೊತೆಗೆ ಹಲವು ವರ್ಷಗಳಿಂದ ಪಾವತಿಯಾಗಿಲ್ಲ ಎನ್ನಲಾದ ಭವಿಷ್ಯ ನಿಧಿ (ಪಿಎಫ್) ಹಣವನ್ನು ನೌಕರರ ಖಾತೆಗಳಿಗೆ ಜಮೆ ಮಾಡಬೇಕು ಎಂದು ಆಗ್ರಹಿಸಿ ಪ್ರತಿಭಟನೆ ನಡೆಸಲಾಯಿತು.



ಪುರಸಭೆ ಕಚೇರಿ ಮುಂಭಾಗ ಕೆಆರ್‌ಎಸ್ ಪಕ್ಷದ ತಾಲ್ಲೂಕು ಅಧ್ಯಕ್ಷ ಆದೇಶ್ ಅವರು ಮಾತನಾಡಿ, ಪಟ್ಟಣದ ಜನರಿಗೆ ಪ್ರತಿನಿತ್ಯ ನೀರು ಸರಬರಾಜು ಮಾಡುವ ನೀರುಗಂಟಿಗಳು ಕರ್ತವ್ಯ ನಿರ್ವಹಿಸುತ್ತಿದ್ದರೂ ಹಲವು ತಿಂಗಳಿನಿಂದ ವೇತನ ಪಾವತಿಯಾಗಿಲ್ಲ ಎಂದು ಆರೋಪಿಸಿದರಲ್ಲದೆ, ನೌಕರರಿಗೆ ವೇತನ ನೀಡದೆ ಪುರಸಭೆಯ ಹಣದಲ್ಲಿ ಪ್ರವಾಸ ಕೈಗೊಳ್ಳುವುದು ಎಷ್ಟರ ಮಟ್ಟಿಗೆ ಸಮಂಜಸ ಎಂದು ಪ್ರಶ್ನಿಸಿದರು.

ವೇತನವನ್ನೇ ನಂಬಿಕೊಂಡು ಜೀವನ ನಡೆಸುತ್ತಿರುವ ನೌಕರರಿಗೆ ವೇತನ ವಿಳಂಬದಿಂದ ಕುಟುಂಬ ನಿರ್ವಹಣೆ, ಮಕ್ಕಳ ಶಿಕ್ಷಣ ಹಾಗೂ ದಿನನಿತ್ಯದ ಅಗತ್ಯಗಳನ್ನು ಪೂರೈಸಲು ತೊಂದರೆಯಾಗಿದೆ. ಆದ್ದರಿಂದ ಬಾಕಿ ಇರುವ ವೇತನವನ್ನು ತಕ್ಷಣ ಪಾವತಿಸಬೇಕು ಎಂದು ಒತ್ತಾಯಿಸಿದರು.

ವಾಟರ್‌ಮ್ಯಾನ್‌ಗಳ ಪಿಎಫ್ ಹಣವನ್ನು ಹಲವು ವರ್ಷಗಳಿಂದ ಪಾವತಿಸಿಲ್ಲ ಎಂಬ ಆರೋಪಗಳಿದ್ದು, ಈ ಕುರಿತು ಸಂಬಂಧಪಟ್ಟ ಅಧಿಕಾರಿಗಳು ಸ್ಪಷ್ಟ ಮಾಹಿತಿ ನೀಡಬೇಕು. ನೌಕರರಿಗೆ ನಿಯಮಾನುಸಾರ ಪಿಎಫ್ ಹಾಗೂ ಇಎಸ್‌ಐ ಸೌಲಭ್ಯಗಳನ್ನು ಒದಗಿಸಬೇಕು ಎಂದು ಆಗ್ರಹಿಸಿದರು.

ನೀರು ಸರಬರಾಜು ನೌಕರರ ಸಮಸ್ಯೆ ಬಗೆಹರಿಯುವವರೆಗೆ ಅವರ ಹೋರಾಟಕ್ಕೆ ಕೆಆರ್‌ಎಸ್ ಪಕ್ಷ ಬೆಂಬಲ ನೀಡಲಿದೆ. ಪುರಸಭೆಯ ಮುಖ್ಯಾಧಿಕಾರಿ ಹಾಗೂ ಅಧ್ಯಕ್ಷರು ಕೂಡಲೇ ಕ್ರಮ ಕೈಗೊಂಡು ನೌಕರರ ಸಮಸ್ಯೆಗಳನ್ನು ಪರಿಹರಿಸಬೇಕು. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ಪಕ್ಷದ ವತಿಯಿಂದ ಪ್ರತಿಭಟನೆ ನಡೆಸಲಾಗುವುದು ಎಂದು ಆದೇಶ್ ಎಚ್ಚರಿಸಿದರು.

ನೀರು ಸರಬರಾಜು ನೌಕರರ ಸಂಘದ ಸದಸ್ಯ ಮಂಜುನಾಥ್ ಮಾತನಾಡಿ, ಕಳೆದ ಒಂದು ವರ್ಷದಿಂದ ಕೆಲಸ ಮಾಡುತ್ತಿದ್ದರೂ ಸರಿಯಾದ ಸಮಯಕ್ಕೆ ವೇತನ ದೊರೆಯುತ್ತಿಲ್ಲ, ಪಿಎಫ್ ಹಣ ಪಾವತಿಸದೆ ನೌಕರರಿಗೆ ಅನ್ಯಾಯ ಮಾಡಲಾಗುತ್ತಿದೆ ಎಂದು ಅವರು ಆರೋಪಿಸಿದರು.

ಸುಮಾರು ಎರಡು ತಿಂಗಳ ಹಿಂದೆ ವೇತನ ಹಾಗೂ ಪಿಎಫ್ ಪಾವತಿಗೆ ಆಗ್ರಹಿಸಿ ನೌಕರರು ಹೋರಾಟ ನಡೆಸಿದ್ದರು. ಆಗ ನಿಗದಿತ ದಿನಾಂಕದೊಳಗೆ ವೇತನ ಪಾವತಿಸುವುದಾಗಿ ಪುರಸಭೆ ಅಧಿಕಾರಿಗಳು ಲಿಖಿತ ಭರವಸೆ ನೀಡಿದ್ದರು. ಆದರೆ ಇದುವರೆಗೂ ಸಮಸ್ಯೆ ಬಗೆಹರಿದಿಲ್ಲ ಎಂದು ಹೇಳಿದರು.

''ನಾವು ದುಡಿಯುತ್ತಿದ್ದೇವೆ. ನಮಗೆ ಯಾವುದೇ ವಿಶೇಷ ಸೌಲಭ್ಯ ಬೇಡ. ನಮ್ಮ ಶ್ರಮಕ್ಕೆ ತಕ್ಕ ವೇತನವನ್ನು ಸಮಯಕ್ಕೆ ಸರಿಯಾಗಿ ನೀಡಿ, ಪಿಎಫ್ ಹಾಗೂ ಇಎಸ್‌ಐ ಸೌಲಭ್ಯಗಳನ್ನು ಒದಗಿಸಬೇಕು. ನಮ್ಮ ಕುಟುಂಬಗಳನ್ನು ನೆಮ್ಮದಿಯಿಂದ ನಡೆಸಲು ಅವಕಾಶ ಮಾಡಿಕೊಡಬೇಕು,'' ಎಂದು ಮನವಿ ಮಾಡಿದರು.

ಪುರಸಭೆಯ ವ್ಯಾಪ್ತಿಯಲ್ಲಿ ಗುತ್ತಿಗೆ ಹಾಗೂ ನೀರು ಸರಬರಾಜು ವ್ಯವಸ್ಥೆಗೆ ಸಂಬಂಧಿಸಿದಂತೆ ಹಲವು ವರ್ಷಗಳಿಂದ ಒಂದೇ ಗುತ್ತಿಗೆದಾರರಿಗೆ ಅವಕಾಶ ನೀಡಲಾಗುತ್ತಿದೆ ಎಂಬ ಆರೋಪಗಳ ಬಗ್ಗೆಯೂ ತನಿಖೆ ನಡೆಸಬೇಕು. ಈ ಕುರಿತು ಕ್ಷೇತ್ರದ ಶಾಸಕರು ಗಮನಹರಿಸಿ, ನೌಕರರ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಕಲ್ಪಿಸಬೇಕು ಎಂದು ಅವರು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಕೆಆರ್‌ಎಸ್ ಪಕ್ಷದ ಪದಾಧಿಕಾರಿಗಳು ಹಾಗೂ ನೀರು ಸರಬರಾಜು ನೌಕರರು ಉಪಸ್ಥಿತರಿದ್ದರು.

## ಸೆ.12ಕ್ಕೆ ಪ್ರಜಾಸೇವೆ

ಆಲೂರು: ಪಾಳ್ಯ ಹೋಬಳಿ ಮಟ್ಟದ ಪ್ರಜಾಸೇವೆ ಆಂದೋಲನ ಕಾರ್ಯಕ್ರಮ ಪಾಳ್ಯ ಅಂಬೇಡ್ಕರ್ ಭವನದಲ್ಲಿ ಸೆ. 12 ರಂದು ಬೆಳಗ್ಗೆ 11 ಕ್ಕೆ ನಡೆಯಲಿದೆ. ತಾಲ್ಲೂಕಿನ ಎಲ್ಲ ಇಲಾಖೆ ಅಧಿಕಾರಿಗಳು ಭಾಗವಹಿಸಲಿದ್ದಾರೆ ಎಂದು ತಹಸೀಲ್ದಾರ್ ಮಲ್ಲಿಕಾರ್ಜುನ ತಿಳಿಸಿದ್ದಾರೆ.

**DOCUMENT LOST**

**I,YASMEEN W/O ASHWAK** aged about 46 years,Residing at near Durgamma Temple,Vallabai Road,HassanDistrict, Karnataka-573201.I do Swear that My Son Mohammed Safan **"PASS CERTIFICATE CUM STATE OF MARKS CARD"** (NO.TY40049042) accidentally lost the original document Therefore,For my son future education the duplicate document is required. Hence i am swaearing this affidavit.This information is true and accurate. Vide affidavit sated swaron before notary public A.Manjegowda at Hassan

# ಸಮಾಜದ ಪ್ರತಿಯೊಬ್ಬರಿಗೂ ಕಾನೂನು ನೆರವು ಸಿಗಲಿ

• ಪ್ರಜೋದಯ ವರದಿ

**ಹಾಸನ:** ಆರ್ಥಿಕ ಹಾಗು ಸಾಮಾಜಿಕವಾಗಿ ದುರ್ಬಲ ವರ್ಗಗಳ ಜನರಿಗೆ ಕಾನೂನು ಸೇವೆ ಮತ್ತು ನ್ಯಾಯದ ಸೌಲಭ್ಯವನ್ನು ಸುಲಭವಾಗಿ ತಲುಪಿಸುವ ನಿಟ್ಟಿನಲ್ಲಿ ಅರೆಕಾಲಿಕ ಕಾನೂನು ಸ್ವಯಂ ಸೇವಕರು ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸಬೇಕೆಂದು ಜಿಲ್ಲಾ ಪ್ರಧಾನ ಮತ್ತು ಸತ್ರ ನ್ಯಾಯಾಧೀಶರಾದ ಹೇಮಾವತಿ ಅವರು ತಿಳಿಸಿದರು.

ಜಿಲ್ಲಾ ನ್ಯಾಯಾಲಯ ಸಭಾಂಗಣದಲ್ಲಿ ರಾಜ್ಯ ಮತ್ತು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ವಕೀಲರ ಸಂಘದಿಂದ ನಡೆದ ಅರೆಕಾಲಿಕ ಕಾನೂನು ಸ್ವಯಂ ಸೇವಕರಿಗೆ ಎರಡು ದಿನಗಳ ಪುನಃಶ್ಚೇತನ ತರಬೇತಿ ಶಿಬಿರ ಉದ್ಘಾಟಿಸಿ ಮಾತನಾಡಿದ ಅವರು, ಪ್ರತಿಯೊಬ್ಬರಿಗೂ ದೊರೆಯಬೇಕಾದ ಹಕ್ಕುಗಳ ಮಾಹಿತಿ ನೀಡಬೇಕು. ಅರೆಕಾಲಿಕ ಕಾನೂನು ಸ್ವಯಂ ಸೇವಕರು ಈ ತರಬೇತಿಯಲ್ಲಿ ಆಸಕ್ತಿಯಿಂದ ಪಾಲ್ಗೊಂಡು ಸಮಗ್ರ ಮಾಹಿತಿ ಪಡೆದುಕೊಳ್ಳಬೇಕು. ತರಬೇತಿಯಲ್ಲಿ ಕಲಿತ ವಿಷಯಗಳನ್ನು ಸಮಾಜದ ಜನರ ಹಿತಕ್ಕಾಗಿ ಬಳಸಿಕೊಳ್ಳುವ ಮೂಲಕ ತಮ್ಮ ಜವಾಬ್ದಾರಿಯನ್ನು ಪರಿಣಾಮಕಾರಿಯಾಗಿ ನಿರ್ವಹಿಸಬೇಕೆಂದರು.



ಅಧ್ಯಕ್ಷತೆ ವಹಿಸಿದ್ದ ವಕೀಲರ ಸಂಘದ ಜಿಲ್ಲಾಧ್ಯಕ್ಷ ಕಾರ್ಲೆ ಮೊಗಣ್ಣಗೌಡ ಅವರು ಮಾತನಾಡಿ, ಕಾನೂನಿನ ಅರಿವು ಪ್ರತಿಯೊಬ್ಬರಿಗೂ ಹಾಗು ನ್ಯಾಯದ ಅವಕಾಶ ಎಲ್ಲರಿಗೂ ಸಿಗಬೇಕೆಂಬ ಆಶಯದೊಂದಿಗೆ ಕಾನೂನು ಸೇವಾ ವ್ಯವಸ್ಥೆ ಕಾರ್ಯನಿರ್ವಹಿಸುತ್ತಿದೆ. ಜನರ ನಡುವೆ ಕಾರ್ಯನಿರ್ವಹಿಸುವ ಸಂದರ್ಭದಲ್ಲಿ ಸಾಮಾನ್ಯ ಜನರ ಸಮಸ್ಯೆಗಳನ್ನು ಆಲಿಸಿ ಅವರಿಗೆ ಯಾವ ರೀತಿಯ ಕಾನೂನು ನೆರವು ಅಗತ್ಯವಿದೆ ಎಂಬುದನ್ನು ಗುರುತಿಸುವಲ್ಲಿ ಕಾನೂನು ಸೇವಾ ಸ್ವಯಂ ಸೇವಕರ ಪಾತ್ರ ಮಹತ್ವದ್ದಾಗಿದೆ. ನ್ಯಾಯದ ಅಗತ್ಯವಿರುವ ವ್ಯಕ್ತಿಗಳನ್ನು ಗುರುತಿಸಿ ಸೂಕ್ತ ಕಾನೂನು ನೆರವು ದೊರೆಯುವಂತೆ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದೊಂದಿಗೆ ಸಂಪರ್ಕ ಕಲ್ಪಿಸುವ ಜವಾಬ್ದಾರಿಯನ್ನು ಸ್ವಯಂ ಸೇವಕರು ಸಮರ್ಪಕವಾಗಿ ನಿರ್ವಹಿಸಬೇಕೆಂದು ಹೇಳಿದರು.

ಎರಡು ದಿನಗಳ ತರಬೇತಿಯಲ್ಲಿ ಪಡೆಯುವ ಕಾನೂನು ಜ್ಞಾನವನ್ನು ಕೇವಲ ವೈಯಕ್ತಿಕ ಪ್ರಯೋಜನಕ್ಕೆ ಸೀಮಿತಗೊಳಿಸದೆ, ಸಮಾಜದ ಒಳಿತಿಗಾಗಿ ಬಳಸಬೇಕು. ವಿಶೇಷವಾಗಿ ದುರ್ಬಲ ವರ್ಗದ ಜನರಿಗೆ ನ್ಯಾಯ ದೊರಕಿಸುವ ನಿಟ್ಟಿನಲ್ಲಿ ಸ್ವಯಂ ಸೇವಕರು ಸೇತುವೆಯಾಗಿ ಕಾರ್ಯ ನಿರ್ವಹಿಸಬೇಕೆಂದರು.

ಜಿಲ್ಲಾ ಸರ್ಕಾರಿ ವಕೀಲ ಡಿ.ಟಿ. ಪ್ರಸನ್ನ ಅವರು ಮಾತನಾಡಿ, ಅರೆಕಾಲಿಕ ಕಾನೂನು ಸ್ವಯಂ ಸೇವಕರು ಸಾರ್ವಜನಿಕರು ಮತ್ತು ನ್ಯಾಯಾಂಗ ವ್ಯವಸ್ಥೆಯ ನಡುವಿನ ಪ್ರಮುಖ ಕೊಂಡಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆಂದರು.

ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಹೆಚ್.ಎನ್. ಕುಮಾರ್, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಜಿ.ಕೆ.ದಾಕ್ಷಾಯಿಣಿ, ತರಬೇತುದಾರರಾದ ಕೆ.ವಂದನಾ, ಶಿರೀಷ ಬಿ.ರೆಡ್ಡಿ, ಡಿ.ಸಿ.ಮಂಜೇಶ್, ಜೀವನ್ ಮತ್ತಿತರರಿದ್ದರು.

# ಎಸ್‌ಸಿಎಸ್‌ಪಿ, ಟಿಎಸ್‌ಪಿ ಸವಲತ್ತು ಅರ್ಹರಿಗೆ ತಲುಪಿಸಿ

## ಪ್ರಗತಿ ಪರಿಶೀಲನಾ ಸಭೆಯಲ್ಲಿ ಡಾ.ಎಲ್.ಮೂರ್ತಿ ಅಧಿಕಾರಿಗಳಿಗೆ ಸೂಚನೆ

• ಪ್ರಜೋದಯ ವರದಿ

**ಹಾಸನ:** ಪ್ರತಿಯೊಂದು ಇಲಾಖೆಗೆ ಎಸ್‌ಸಿಎಸ್‌ಪಿ, ಟಿಎಸ್‌ಪಿ ಯೋಜನೆಯಡಿ ಒದಗಿಸಿರುವ ಅನುದಾನವನ್ನು ಸಮರ್ಪಕವಾಗಿ ವೆಚ್ಚ ಮಾಡುವ ಮೂಲಕ ಅರ್ಹರಿಗೆ ಸವಲತ್ತುಗಳನ್ನು ದೊರಕಿಸುವಂತೆ ಕರ್ನಾಟಕ ರಾಜ್ಯ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತಬುಡಕಟ್ಟುಗಳ ಆಯೋಗದ ಅಧ್ಯಕ್ಷ ಡಾ. ಎಲ್.ಮೂರ್ತಿ ಅವರು ಅಧಿಕಾರಿಗಳಿಗೆ ಸೂಚಿಸಿದರು.



ಜಿಲ್ಲಾ ಪಂಚಾಯಿತಿ ಹೊಯ್ಸಳ ಸಭಾಂಗಣದಲ್ಲಿ ಬುಧವಾರ ನಡೆದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ಸಮಾಜ ಕಲ್ಯಾಣ ಇಲಾಖೆಯಿಂದ ಎಸ್‌ಸಿಎಸ್‌ಪಿ, ಟಿಎಸ್‌ಪಿ ಅನುದಾನದಲ್ಲಿ ಮಾಡಿರುವ ಕೆಲಸಗಳಿಗೆ ನಾಮಫಲಕ ಅಳವಡಿಸುವಂತೆ ಸೂಚನೆ ನೀಡಿದರು.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿ ನಿಲಯಗಳಲ್ಲಿ ವಿದ್ಯಾಭ್ಯಾಸ ಮಾಡುವ ವಿದ್ಯಾರ್ಥಿಗಳಿಗೆ ವಿಶೇಷ ತರಗತಿ ನಡೆಸಲು ಬರುವವರಿಗೆ ಒಂದು ಸಾವಿರ ರೂ. ನೀಡುತ್ತಾರೆ. ಬಿ.ಸಿ.ಎಂ. ಹಾಸ್ಟೆಲ್‌ಗಳಲ್ಲಿ ತರಬೇತಿ ನೀಡಲು ಬರುವವರಿಗೆ ಮೂರು ಸಾವಿರ ರೂ. ನೀಡುತ್ತಾರೆ. ಈ ರೀತಿ ತಾರತಮ್ಯ ಮಾಡುವಂತಿಲ್ಲ. ಹಾಸ್ಟೆಲ್‌ಗಳಲ್ಲಿ ಕಡ್ಡಾಯವಾಗಿ ಮೂಲಭೂತ ಸೌಕರ್ಯಗಳನ್ನು ಒದಗಿಸಬೇಕೆಂದ ಅವರು, ನೀಟ್, ಜೆಇಇ, ಸಿಇಟಿ, ಮೇಟಿರಿಯಲ್ ಚಾಚೂ ತಪ್ಪದೆ ನೀಡಿದರೆ ವಿದ್ಯಾರ್ಥಿ ಗಳಿಗೆ ಉತ್ತೇಜನ ನೀಡಬೇಕು. ಆಸಕ್ತಿ ಇರುವ ವಿದ್ಯಾರ್ಥಿಗಳನ್ನು ಗುರುತಿಸಿ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಅಗತ್ಯ ಪುಸ್ತಕಗಳನ್ನು ಒದಗಿಸಿ ಪ್ರೋತ್ಸಾಹ ನೀಡುವಂತೆ ನಿರ್ದೇಶನ ನೀಡಿದರು.

ಹಾಸ್ಟೆಲ್‌ಗಳಲ್ಲಿ ನಿಗದಿತ ಸಂಖ್ಯೆಗಿಂತ ಹೆಚ್ಚು ವಿದ್ಯಾರ್ಥಿಗಳಿದ್ದು, ಮೂಲಭೂತ ಸೌಕರ್ಯದ ಕೊರತೆಯಾಗುತ್ತದೆ, ಸರಿಯಾಗಿ ನಿರ್ವಹಣೆ ಆಗುವುದಿಲ್ಲ, ಈ ನಿಟ್ಟಿನಲ್ಲಿ ಹಾಸ್ಟೆಲ್ ನಿರ್ಮಾಣಕ್ಕಾಗಿ ಜಿಲ್ಲಾಡಳಿತ ದಿಂದ ಜಾಗ ಒದಗಿಸಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಬೇಕು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಆಸಕ್ತಿ ಇರುವ ವಿದ್ಯಾರ್ಥಿಗಳು ವಿಜ್ಞಾನ ಮತ್ತು ವಾಣಿಜ್ಯ ವಿಷಯಗಳನ್ನು ಆಯ್ಕೆ ಮಾಡಿಕೊಳ್ಳುವಂತೆ ಮಾರ್ಗದರ್ಶನ ನೀಡಿ ಪ್ರೋತ್ಸಾಹ ನೀಡುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ವೈದ್ಯಕೀಯ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ಅನುದಾನವನ್ನು ಸಂಪೂರ್ಣವಾಗಿ ವೆಚ್ಚ ಮಾಡಬೇಕು. ಜಿಲ್ಲೆಯು ಕಲೆ ಮತ್ತು ಸಾಂಸ್ಕೃತಿಕವಾಗಿ ಅತ್ಯಂತ ಸಮೃದ್ಧವಾಗಿದೆ. ಈ ನಿಟ್ಟಿನಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಕಲಾವಿ ದರಿಗೆ ಉತ್ತೇಜನ ನೀಡಬೇಕು. ಖಾತೆ, ಪೌತಿ ಖಾತೆ, ಜಂಟಿ ಸರ್ವೆ ಅರ್ಜಿಗಳು ಬಂದಿವೆ. ವಿಳಂಬ ಮಾಡದೆ ಕಾನೂನು ತೊಡಕಿದ್ದರೆ ಸಂಬಂಧಿಸಿದ ಅಧಿಕಾರಿಗಳು ಗಮನಹರಿಸಿ ಲೋಪದೋಷಗಳಿಗೆ ಅವಕಾಶ ನೀಡದೆ 2 ತಿಂಗಳಲ್ಲಿ ಬಗೆಹರಿಸಲು ನಿರ್ದೇಶನ ನೀಡಿದರು.

ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅವರು ಮಾತನಾಡಿ, ಆಯೋಗದ ಅಧ್ಯಕ್ಷರು ನೀಡಿರುವ ಸೂಚನೆಯನ್ನು ಪಾಲಿಸುವುದರ ಮೂಲಕ ಸಮಾಜದಲ್ಲಿ ಹಿಂದುಳಿದ ಕಟ್ಟಕಡೆಯ ವ್ಯಕ್ತಿಗೂ ನ್ಯಾಯ ಒದಗಿಸುವ ನಿಟ್ಟಿನಲ್ಲಿ ಕರ್ತವ್ಯ ನಿರ್ವಹಿಸುವುದಾಗಿ ತಿಳಿಸಿದರು. ಆಯೋಗದ ಸದಸ್ಯರಾದ ಎಂ. ಕುಂಬಯ್ಯ, ಸುನೀಲ್ ಎಂ ಉಕ್ಕಲಿ, ಎನ್.ದಿವಾಕರ್, ಗೀತಾ ಥಾಂವಶಿ, ಕಾರ್ಯದರ್ಶಿ ಡಾ.ಹೆಚ್.ಎಸ್. ಶಿವರಾಮು, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಶ್ರೀನಿಧಿ ಉಪಸ್ಥಿತರಿದ್ದರು.

**ಅಕ್ರಮ-ಸಕ್ರಮ ಅರ್ಜಿ ವಿಲೇವಾರಿ ಮಾಡಿ**

ಜನರು ಫಾರಂ–50, 53, 50, 57 ನಲ್ಲಿ ಅರ್ಜಿ ಸಲ್ಲಿಸಿದ್ದು, ಅರ್ಜಿಗಳ ವಿಲೇವಾರಿ ವಿಳಂಬವಾಗಿದೆ. ತಹಶೀಲ್ದಾರ್‌ಗಳು, ಉಪ ವಿಭಾಗಾಧಿಕಾರಿಗಳು ಬಾಕಿ ಉಳಿದಿರುವ ಅರ್ಜಿಗಳನ್ನು ಕಳುಹಿಸಬೇಕು. ಜಮೀನು ಜನರ ಅಸ್ತಿತ್ವದಲ್ಲಿದ್ದು, ಅವರಿಗೆ ಹಕ್ಕು ಪತ್ರ ನೀಡಿಲ್ಲ, ಅದರ ಬಗ್ಗೆ ಅಧಿಕಾರಿಗಳು ಗಮನಹರಿಸಬೇಕು. ತಾಲ್ಲೂಕು ದಂಡಾಧಿಕಾರಿಗಳು ಪರಿಣಾಮಕಾರಿಯಾಗಿ ಕರ್ತವ್ಯ ನಿರ್ವಹಿಸುವ ಮೂಲಕ ನೊಂದವರಿಗೆ ನ್ಯಾಯ ದೊರಕಿಸಿ ಕೊಡಿ ಎಂದು ತಿಳಿಸಿದರು.

# 15 ಲಕ್ಷ ರೂ. ವೆಚ್ಚದ ಕಾಮಗಾರಿಗೆ ಶಾಸಕ ಚಾಲನೆ

• ಪ್ರಜೋದಯ ವರದಿ

**ಹಾಸನ:** ತಾಲ್ಲೂಕಿನ ಹನುಮಂತಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಪಿರುಮೇನಹಳ್ಳಿ ಗ್ರಾಮದಲ್ಲಿ 15 ಲಕ್ಷ ರೂ. ವೆಚ್ಚದ ರಸ್ತೆ ಮತ್ತು ಚರಂಡಿ ನಿರ್ಮಾಣ ಕಾಮಗಾರಿಗೆ ಶಾಸಕ ಹೆಚ್.ಪಿ.ಸ್ವರೂಪ್ ಅವರು ಬುಧವಾರ ಭೂಮಿ ಪೂಜೆ ನೆರವೇರಿಸಿದರು.

ಈ ವೇಳೆ ಮಾತನಾಡಿದ ಅವರು, ಕಳೆದ ಹಲವು ದಿನಗಳಿಂದ ರಸ್ತೆ, ಚರಂಡಿ ಸಮಸ್ಯೆ ಬಗ್ಗೆ ಗ್ರಾಮಸ್ಥರು ದೂರು ನೀಡಿದ ಹಿನ್ನಲೆ ಗ್ರಾಮಕ್ಕೆ ಅನುಕೂಲ ಕಲ್ಪಿಸುವ ಸಲುವಾಗಿ ಕಾಮಗಾರಿಗೆ ಚಾಲನೆ ನೀಡಲಾಗಿದೆ. ಗುಣಮಟ್ಟದ ಕಾಮಗಾರಿಯೊಂದಿಗೆ ಆದಷ್ಟು ಬೇಗ ಕೆಲಸ ಮುಗಿಸಿ ಸಾರ್ವಜನಿಕರಿಗೆ ಅನುಕೂಲ ಕಲ್ಪಿಸಬೇಕೆಂದು ಅಧಿಕಾರಿಗಳು



ಹಾಗು ಗುತ್ತಿಗೆದಾರರಿಗೆ ಸೂಚನೆ ನೀಡಲಾಯಿತು.

ಹೆಚ್‌ಡಿಸಿಸಿ ಬ್ಯಾಂಕ್ ನಿರ್ದೇಶಕ ಬಿದರಕೆರೆ ಜಯರಾಮ್, ಪಕ್ಷದ ಮುಖಂಡರು, ಗ್ರಾಮಸ್ಥರು, ಕಾರ್ಯಕರ್ತರು ಉಪಸ್ಥಿತರಿದ್ದರು.

# ಡಿ.4 ರಿಂದ ಉದ್ಯಮಿ ಭಾರತ ಸಮಾವೇಶ

• ಪ್ರಜೋದಯ ವರದಿ

**ಹಾಸನ:** ಉದ್ಯಮಿ ಭಾರತ ವತಿಯಿಂದ ಡಿ.4 ರಿಂದ 6ರ ವರೆಗೆ ಬೆಂಗಳೂರಿನ ಅಂತರಾಷ್ಟ್ರೀಯ ವಸ್ತು ಪ್ರದರ್ಶನ ಕೇಂದ್ರದಲ್ಲಿ ಉದ್ಯಮಿ ಭಾರತ ಸಮಾವೇಶ ಮತ್ತು ಪ್ರದರ್ಶನದ 4ನೇ ಆವೃತ್ತಿ ನಡೆಯಲಿದೆ ಎಂದು ಭಾರತ ವೇದಿಕೆ ಅಧ್ಯಕ್ಷ ನಂದೀಶ್ ಅವರು ತಿಳಿಸಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಉದ್ಯಮಿ ಭಾರತ ಕೇವಲ ಕಾರ್ಯಕ್ರಮವಾಗಿರದೆ ಕಳೆದ ನಾಲ್ಕು ವರ್ಷಗಳಿಂದ ರೂಪುಗೊಂಡಿರುವ ಉದ್ಯಮಶೀಲತಾ ಆಂದೋಲನವಾಗಿದೆ. ಉದ್ಯಮಿಗಳು, ಸ್ಟಾರ್ಟ್ ಅಪ್‌ಗಳು, ಹೂಡಿಕೆದಾರರು ಹಾಗೂ ಉದ್ಯಮ ಆಸಕ್ತರನ್ನು ಒಂದೇ ವೇದಿಕೆಗೆ ತರುವ ಉದ್ದೇಶದಿಂದ ಸಮಾವೇಶ ಹಮ್ಮಿಕೊಳ್ಳಲಾಗಿದೆ ಎಂದು ಹೇಳಿದರು.

ಉದ್ಯಮಿ ಭಾರತದ ಮೊದಲ ಪೈಲಟ್ ಯೋಜನೆಯನ್ನು ಹಾಸನ-ಚನ್ನರಾಯಪಟ್ಟಣ ವಿಧಾನಸಭಾ ಕ್ಷೇತ್ರದಲ್ಲಿ ಜಾರಿಗೊಳಿಸಲಾಗುತ್ತಿದೆ. ಮೊದಲ ಹಂತದಲ್ಲಿ ಚನ್ನರಾಯಪಟ್ಟಣ ವಿಧಾನಸಭಾ ಕ್ಷೇತ್ರ ಒಳಗೊಳ್ಳಲಿದೆ. ಯೋಜನೆಯ ಫಲಿತಾಂಶದ ಆಧಾರದ ಮೇಲೆ ಮುಂದಿನ ದಿನಗಳಲ್ಲಿ ಇತರೆ ಕ್ಷೇತ್ರಗಳಿಗೂ ವಿಸ್ತರಿಸಲಾಗುವುದು. ಸಮಾವೇಶದ ಮೂಲಕ ಭಾರತೀಯ ಉದ್ಯಮಗಳನ್ನು ಜಾಗತಿಕ ಮಟ್ಟಕ್ಕೆ ಕೊಂಡೊಯ್ಯುವುದು, ಅಂತರಾಷ್ಟ್ರೀಯ ಹೂಡಿಕೆ ಹಾಗು ವ್ಯವಹಾರ ಸಹಭಾಗಿತ್ವಕ್ಕೆ ವೇದಿಕೆ ಕಲ್ಪಿಸುವುದು, ಸ್ಟಾರ್ಟ್‌ಅಪ್‌ಗಳು ಮತ್ತು ಎಂಎಸ್‌ಎಂಇಗಳಿಗೆ ಜಾಗತಿಕ ಮಾರುಕಟ್ಟೆ ಪ್ರವೇಶಕ್ಕೆ ಅವಕಾಶ ಕಲ್ಪಿಸುವುದು ಪ್ರಮುಖ ಉದ್ದೇಶಗಳಾಗಿವೆ ಎಂದರು.

ಉದ್ಯಮಿ ಕುಟುಂಬ ಆ್ಯಪ್ ಮೂಲಕ ದೇಶಾದ್ಯಂತ ಉದ್ಯಮಿಗಳನ್ನು ಸಂಪರ್ಕಿಸಲಾಗು ತ್ತಿದ್ದು, ಎಐ ಆಧಾರಿತ ಗ್ರಾಹಕ ಸಂಪರ್ಕ, ಸ್ಥಳೀಯ ಮಾರುಕಟ್ಟೆ ಮಾಹಿತಿ ಹಾಗು 24 ಗಂಟೆಗಳ ಬೆಂಬಲ ಒದಗಿಸುವ ಉದ್ದೇಶ ಹೊಂದಲಾಗಿದೆ. ಮಹಿಳಾ ಉದ್ಯಮಿಗಳಿಗೆ ಉತ್ತೇಜನ ನೀಡುವ ಉದ್ಯಮಿ ಗ್ರೀನ್ಸ್ ಹಾಗು ಯುವ ಜನರಿಗೆ ಶಿಕ್ಷಣ, ಸಬಲೀಕರಣ ಮತ್ತು ಉದ್ಯಮಶೀಲತೆಯ ಅನುಭವ ಒದಗಿಸುವ ಇ-3 ಯೋಜನೆಗಳಿಗೂ ಒತ್ತು ನೀಡಲಾಗುತ್ತಿದೆ ಎಂದು ತಿಳಿಸಿದರು.

ಪದಾಧಿಕಾರಿಗಳಾದ ಸುದರ್ಶನ್, ಹರೀಶ್, ಕುಮಾರ್ ಗೌಡ, ನಾರಾಯಣ್‌ಗೌಡ, ರತಿ ಇದ್ದರು.

## ಮಾಧ್ಯಮ ದಿನಾಚರಣೆಯಲ್ಲಿ ಕಾರ್ಜುವಳ್ಳಿ ಸದಾಶಿವ ಶಿವಾಚಾರ್ಯಶ್ರೀ ಅಭಿಮತ

# ಸಮಾಜ ತಿದ್ದುವಲ್ಲಿ ಪತ್ರಕರ್ತರ ಜವಾಬ್ದಾರಿ ಅಧಿಕ

• ಪ್ರಜೋದಯ ವರದಿ

**ಆಲೂರು:** ಸಮಾಜದಲ್ಲಿ ನಡೆಯುವ ಪ್ರತಿಯೊಂದು ಬೆಳವಣಿಗೆಯನ್ನು ಸೂಕ್ಷ್ಮವಾಗಿ ಗಮನಿಸುವ ಪತ್ರಕರ್ತರು ಜನರ ಸಮಸ್ಯೆಗಳಿಗೆ ಧ್ವನಿಯಾಗುತ್ತಿದ್ದಾರೆ. ಕಪ್ಪು ಮಸಿಯ ಒಂದು ಹನಿಯಲ್ಲಿಯೇ ಸಮಾಜವನ್ನು ತಿದ್ದುವ, ತಪ್ಪುಗಳನ್ನು ಎತ್ತಿ ತೋರಿಸುವ ಹಾಗು ಉತ್ತಮ ಸಮಾಜ ನಿರ್ಮಾಣಕ್ಕೆ ದಾರಿದೀಪವಾಗುವ ಶಕ್ತಿ ಅಡಗಿದೆ ಎಂದು ಕಾರ್ಜುವಳ್ಳಿ ಮಠದ ಶ್ರೀ ಸದಾಶಿವ ಶಿವಾಚಾರ್ಯ ಸ್ವಾಮೀಜಿ ಅವರು ಹೇಳಿದರು.

ಪಟ್ಟಣದ ಒಕ್ಕಲಿಗರ ಸಮುದಾಯ ಭವನದಲ್ಲಿ ತಾಲ್ಲೂಕು ಕಾರ್ಯನಿರತ ಪತ್ರಕರ್ತರ ಸಂಘದ ವತಿಯಿಂದ ಆಯೋಜಿಸಿದ್ದ ಮಾಧ್ಯಮ ದಿನಾಚರಣೆಯ ಸಾನಿಧ್ಯ ವಹಿಸಿ ಮಾತನಾಡಿದ ಅವರು, ಆಡಳಿತ ವ್ಯವಸ್ಥೆಯ ಲೋಪದೋಷಗಳನ್ನು ಬೆಳಕಿಗೆ ತಂದು ಸಂಬಂಧ ಪಟ್ಟವರ ಗಮನ ಸೆಳೆಯುವುದರ ಜೊತೆಗೆ, ಸಮಾಜದಲ್ಲಿನ ಅಂಕು-ಡೊಂಕುಗಳನ್ನು ತಿದ್ದುವ ಕಾರ್ಯವನ್ನೂ ಪತ್ರಿಕಾರಂಗ ಮಾಡುತ್ತಿದೆ. ಹೀಗಾಗಿ ಪತ್ರಕರ್ತರ ಜವಾಬ್ದಾರಿ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ ಎಂದರು.

ಶಾಸಕ ಸಿಮೆಂಟ್ ಮಂಜು ಅವರು ಮಾತನಾಡಿ, ಪ್ರಜಾಪ್ರಭುತ್ವದ



ನಾಲ್ಕನೇ ಅಂಗವಾ ಗಿರುವ ಪತ್ರಿಕಾರಂಗವು ಸಮಾಜದ ಆಗು-ಹೋಗುಗಳನ್ನು ಜನರಿಗೆ ತಿಳಿಸುವ ಮಹತ್ವದ ಜವಾಬ್ದಾರಿ ನಿರ್ವಹಿಸುತ್ತಿದೆ. ಜನಪ್ರತಿನಿಧಿಗಳ ಸರಿ-ತಪ್ಪುಗಳನ್ನು ಪತ್ರಕರ್ತರು ನಿಷ್ಪಕ್ಷಪಾತ ವಾಗಿ ಎತ್ತಿ ತೋರಿಸಿದಾಗ ಆಡಳಿತ ವ್ಯವಸ್ಥೆ ಮತ್ತಷ್ಟು ಸುಧಾರಿಸಲು ಸಾಧ್ಯವಾಗುತ್ತದೆ. ಕ್ಷೇತ್ರದ ಸಮಸ್ಯೆಗಳು, ಜನರ ಸಂಕಷ್ಟಗಳು ಹಾಗು ವಾಸ್ತವ ಸ್ಥಿತಿಗತಿಗಳನ್ನು ಸರ್ಕಾರ ಮತ್ತು ಜನಪ್ರತಿನಿಧಿ ಗಳ ಗಮನಕ್ಕೆ ತರುವಲ್ಲಿ ಪತ್ರಕರ್ತರ ಪಾತ್ರ ಮಹತ್ವದ್ದಾಗಿದೆ. ವಸ್ತುನಿಷ್ಠವಾಗಿ ಕಾರ್ಯ ನಿರ್ವಹಿಸುವ ಮೂಲಕ ಸಮಾಜದ ಅಭಿವೃದ್ಧಿಗೆ ಪತ್ರಕರ್ತರು ಮತ್ತಷ್ಟು ಕೊಡುಗೆ ನೀಡಬೇಕೆಂದು ಹೇಳಿದರು.

ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅವರು ಮಾತನಾಡಿ, ಪತ್ರಕರ್ತರು ಸಮಾಜದ ಜ್ಞಾನಿಗಳಾಗಿದ್ದು, ಸಾಮಾಜಿಕ ಅಂಕು-ಡೊಂಕುಗಳನ್ನು ತಿದ್ದುವ ಜೊತೆಗೆ ನವ ಸಮಾಜ ನಿರ್ಮಾಣದಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದಾರೆ. ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘವು ಪ್ರತಿವರ್ಷ ವಿಭಿನ್ನ ಹಾಗು ವಿಶಿಷ್ಟ ಕಾರ್ಯಕ್ರಮಗಳನ್ನು ಆಯೋಜಿಸುವ ಮೂಲಕ ರಾಜ್ಯ ಮಟ್ಟದಲ್ಲಿ ತನ್ನದೇ ಆದ ಛಾಪು ಮೂಡಿಸಿದೆ. ಪತ್ರಕರ್ತರ ವೃತ್ತಿಪರ ಕೌಶಲ್ಯ ವೃದ್ಧಿ ಹಾಗು ಸಾಮಾಜಿಕ ಜವಾಬ್ದಾರಿ ಹೆಚ್ಚಿಸುವ ನಿಟ್ಟಿನಲ್ಲಿ ಮುಂದಿನ ದಿನಗಳಲ್ಲಿಯೂ ವಿನೂತನ ಕಾರ್ಯಕ್ರಮ ಆಯೋಜಿಸಲಿ ಎಂದು ಆಶಿಸಿದರು.

ಮಾಜಿ ಶಾಸಕ ಹೆಚ್.ಎಂ.ವಿಶ್ವನಾಥ್ ಅವರು ಮಾತನಾಡಿ, ಸ್ವಾತಂತ್ರ್ಯ ಪೂರ್ವದಲ್ಲಿಯೂ ಪತ್ರಿಕೆಗಳು ಮತ್ತು ಪತ್ರಕರ್ತರು ಮಹತ್ವದ ಪಾತ್ರ ವಹಿಸಿದ್ದರು. ಹರಿತವಾದ ಲೇಖನಿಗಳ ಮೂಲಕ ಅಂದಿನ ಸಾಮಾಜಿಕ ಸಮಸ್ಯೆಗಳನ್ನು ಜನರ ಮುಂದಿಟ್ಟು, ಅವುಗಳಿಗೆ ಪರಿಹಾರ ದೊರಕಿಸುವಲ್ಲಿ ಪತ್ರಕರ್ತರು ಪ್ರಮುಖ ಪಾತ್ರವಹಿಸಿದ್ದರು ಎಂದರು.

ಮಾಜಿ ಸಚಿವ ಹೆಚ್.ಕೆ.ಕುಮಾರ ಸ್ವಾಮಿ ಅವರು ಮಾತನಾಡಿ, ಕಾರ್ಯಾಂಗ, ಶಾಸಕಾಂಗ ಮತ್ತು ನ್ಯಾಯಾಂಗಗಳ ಜೊತೆಗೆ ಪತ್ರಿಕಾರಂಗವೂ ಪ್ರಜಾಪ್ರಭುತ್ವದ ನಾಲ್ಕನೇ ಅಂಗವಾಗಿ ಕಾರ್ಯನಿರ್ವಹಿಸುತ್ತಿದೆ. ಸಮಾಜದಲ್ಲಿನ ಲೋಪದೋಷಗಳನ್ನು ಎತ್ತಿ ತೋರಿಸುವ ಹಾಗೂ ಜನರ ಧ್ವನಿಯಾಗುವ ಮಹತ್ವದ ಕೆಲಸವನ್ನು ಪತ್ರಕರ್ತರು ಮಾಡುತ್ತಿದ್ದಾರೆ ಎಂದರು.

**ಸಾಧಕರಿಗೆ ಸನ್ಮಾನ:** ಮಾಧ್ಯಮ ದಿನಾಚರಣೆ ಅಂಗವಾಗಿ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿದ ಹಿರಿಯ ಪತ್ರಕರ್ತ ಗುಲಾಂ ಸತ್ತಾರ್, ಕನ್ನಡ ಸಾಹಿತ್ಯ ಪರಿಷತ್ ಮಾಜಿ ಜಿಲ್ಲಾಧ್ಯಕ್ಷ ಉದಯ ರವಿ, ಪತ್ರಕರ್ತ ವಿಶ್ವನಾಥ್, ಹಿರಿಯಪತ್ರಕರ್ತ ಎಂ.ಡಿ. ಚಂದ್ರಶೇಖರ್,ನಿವೃತ್ತ ಶಿಕ್ಷಕ ಸಿದ್ದಯ್ಯ, ಚೆಸ್ಕಾಂನ ರವಿಕುಮಾರ್, ಪೌರ ಕಾರ್ಮಿಕ ಕಿರಣ್ ಹಾಗೂ ಎಸ್‌ಎಸ್ ಎಲ್‌ಸಿಯಲ್ಲಿ ಹೆಚ್ಚು ಅಂಕ ಗಳಿಸಿದ ಎನ್.ಎಂ.ಎನ್.ವರ್ಷಿಣಿ ಕುಟುಂಬದವರನ್ನು ಸನ್ಮಾನಿಸಲಾಯಿತು.

ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಜೆ.ಆರ್.ಕೆಂಚೇಗೌಡ, ರಾಜ್ಯ ಕಾರ್ಯ ನಿರತ ಪತ್ರಕರ್ತರ ಸಂಘದ ಉಪಾಧ್ಯಕ್ಷ ಹೆಚ್.ಬಿ. ಮದನಗೌಡ, ತಾಲ್ಲೂಕು ಕಾರ್ಯ ನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಆದಿಲ್, ರಾಷ್ಟ್ರೀಯ ಮಂಡಳಿ ಸದಸ್ಯ ರವಿ ನಾಕಲಗೂಡು ಮತ್ತಿತರರು ಉಪಸ್ಥಿತರಿದ್ದರು.

**ಪತ್ರಕರ್ತರ ಭವನಕ್ಕೆ 5 ಲಕ್ಷ ನೆರವು**

ಬಿಜೆಪಿ ಜಿಲ್ಲಾಧ್ಯಕ್ಷ ಸಿದ್ದೇಶ್ ನಾಗೇಂದ್ರ ಅವರು ಮಾತನಾಡಿ, ಪತ್ರಕರ್ತರ ಭವನ ನಿರ್ಮಾಣಕ್ಕೆ ವೈಯಕ್ತಿಕವಾಗಿ 5 ಲಕ್ಷ ರೂ. ನೆರವು ನೀಡುವುದಾಗಿ ಘೋಷಿಸಿದರು. ಪತ್ರ ಕರ್ತರಿಗೆ ಸುಸಜ್ಜಿತ ಭವನದ ಅಗತ್ಯವಿದ್ದು, ಸಂಘದ ಈ ಪ್ರಯತ್ನಕ್ಕೆ ಎಲ್ಲರೂ ಕೈಜೋಡಿಸಬೇಕು ಎಂದು ಮನವಿ ಮಾಡಿದರು.

# ಯುವ ಜನತೆಗೆ ವಿಕಸಿತ ಭಾರತ್ ರಸಪ್ರಶ್ನೆ ಸ್ಪರ್ಧೆ

• ಪ್ರಜೋದಯ ವರದಿ

**ಹಾಸನ:** ಯುವ ವ್ಯವಹಾರಗಳು ಮತ್ತು ಕ್ರೀಡಾ ಸಚಿವಾಲಯದ ಮೈ ಭಾರತ್ ಕೇಂದ್ರ ವತಿಯಿಂದ ಯುವ ಜನತೆಗಾಗಿ ಆನ್‌ಲೈನ್ ವಿಕಸಿತ ಭಾರತ್ ರಸಪ್ರಶ್ನೆ ಸ್ಪರ್ಧೆ ಏರ್ಪಡಿಸಲಾಗಿದೆ ಎಂದು ಯುವ ಅಧಿಕಾರಿ ಇ.ಎಸ್.ಜಿತ್ಯಾ ಅವರು ತಿಳಿಸಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಿಕಸಿತ ಭಾರತ ಯಂಗ್ ಲೀಡರ್ಸ್ ಡೈಲಾಗ್ (ವಿಬಿಐಎಲ್‌ಡಿ-2027) ಅಂಗವಾಗಿ 15 ರಿಂದ 29 ವರ್ಷದ ಯುವ ಸಮುದಾಯ ವನ್ನು ಪ್ರೇರೇಪಿಸುವ ನಿಟ್ಟಿನಲ್ಲಿ ಸ್ಪರ್ಧೆ ಹಮ್ಮಿಕೊಳ್ಳಲಾಗಿದೆ. ಯುವ ಜನರು ಮೈ ಭಾರತ್ ಪೋರ್ಟಲ್ ಮೂಲಕ ಬಹುಭಾಷ ಆನ್‌ಲೈನ್ ರಸಪ್ರಶ್ನೆ ಸ್ಪರ್ಧೆಯಲ್ಲಿ ಭಾಗವಹಿಸಬಹುದಾಗಿದೆ. ಸ್ಪರ್ಧೆಯು ಆ.17 ರಿಂದ ಸೆ.30ರ ವರೆಗೆ ಪೋರ್ಟಲ್‌ನಲ್ಲಿ ಲಭ್ಯವಿರಲಿದೆ ಎಂದು ಹೇಳಿದರು.

ರಸಪ್ರಶ್ನೆ ಸ್ಪರ್ಧೆಯಲ್ಲಿ ಅತ್ಯುನ್ನತ ಶೇ.10 ರಷ್ಟು ಅಂಕ ಪಡೆದು ತೇರ್ಗಡೆಯಾಗುವ ಸ್ಪರ್ಧಿಗಳು ಮುಂದಿನ ಹಂತದ ಪ್ರಬಂಧ ಸ್ಪರ್ಧೆಗೆ ಅರ್ಹತೆ ಪಡೆಯಲಿದ್ದಾರೆ. ನಂತರ ಜಿಲ್ಲಾ ಹಾಗು ರಾಜ್ಯಮಟ್ಟದ ಪ್ರಸ್ತುತಿಗಳಲ್ಲಿ ಆಯ್ಕೆಯಾದ ಯುವ ಮುಖಂಡರಿಗೆ ನವದೆಹಲಿಯಲ್ಲಿ ನಡೆಯುವ ರಾಷ್ಟ್ರೀಯ ಸಂವಾದದಲ್ಲಿ ಪ್ರಧಾನ ಮಂತ್ರಿಗಳ ಸಮ್ಮುಖದಲ್ಲಿ ತಮ್ಮ ವಿಚಾರ ಮಂಡಿಸುವ ಮಹತ್ವದ ಅವಕಾಶ ದೊರೆಯಲಿದೆ ಎಂದರು.

ಜಿಲ್ಲೆಯ ಕಾಲೇಜು ವಿದ್ಯಾರ್ಥಿಗಳು ಹಾಗು ಯುವ ಜನರು ಮೈ ಭಾರತ್ ಅಧಿಕೃತ ಪೋರ್ಟಲ್‌ನಲ್ಲಿ ನೋಂದಾಯಿಸಿಕೊಂಡು ಹೆಚ್ಚಿನ ಸಂಖ್ಯೆಯಲ್ಲಿ ಸ್ಪರ್ಧೆಯಲ್ಲಿ ಭಾಗವಹಿಸುವಂತೆ ಕೋರಿದ ಅವರು, ಈ ಸ್ಪರ್ಧೆ ದೇಶಾದ್ಯಂತ ನಡೆಯಲಿದೆ. ಮೊದಲು ರಸಪ್ರಶ್ನೆ ನಂತರ ಪ್ರಬಂಧ ಸ್ಪರ್ಧೆ, ಕಡೆಯಲ್ಲಿ ಸಂವಾದ ನಡೆಯಲಿದೆ ಎಂದರು.

# ಕೆರೆ-ಕಟ್ಟೆಗೆ ನೀರು ಹರಿಸುವಂತೆ ರೈತರ ಪ್ರತಿಭಟನೆ

» ಮೊದಲನೇ ಪುಟದಿಂದ

ಅಂತರ್ಜಲ ಮಟ್ಟ ಗಣನೀಯ ಪ್ರಮಾಣದಲ್ಲಿ ಕುಸಿದಿರುವುದರಿಂದ ಕೊಳವೆ ಬಾವಿಗಳು ಬತ್ತಿ ಹೋಗಿವೆ. ಕೃಷಿ ಚಟುವಟಿಕೆಗೆ ಭಾರೀ ಹಿನ್ನಡೆಯಾಗಿದೆ. ಪರಿಸ್ಥಿತಿ ಹೀಗೆ ಮುಂದುವರಿದರೆ ಕುಡಿಯಲು ನೀರು ಸಿಗುವುದಿಲ್ಲವೆಂದು ಪ್ರತಿಭಟನಾಕಾರರು ಹೇಳಿದರು.

ಕಾವೇರಿ ನಿಗಮದ ಕಾರ್ಯಪಾಲಕ ಇಂಜಿನೀಯರ್ ದೀಪು ಅವರು ಮಾತನಾಡಿ, ಸೆ. 1 ರಿಂದ ನೀರು ಹರಿಸಲಾಗುತ್ತಿದೆ. 56 ಕ್ಯೂಸೆಕ್ ನೀರ ಬರುತ್ತಿದ್ದು, ಈಗ ಸುಂಡಹಳ್ಳಿ ಮತ್ತು ಹೊಸಕೊಪ್ಪಲು ಕೆರೆಗಳಿಗೆ ತಲುಪಿದೆ. ಕಾಲುವೆ ಒಡೆದು ನೀರು ತುಂಬಿಸಿಕೊಳ್ಳುತ್ತಿರುವ ರೈತರನ್ನು ಮನವೊಲಿಸುವ ಪ್ರಯತ್ನ ಮಾಡಲಾಗಿದೆ. ಈ ಯೋಜನೆಯಲ್ಲಿ ಒಂದು ಕೆರೆ ತುಂಬಿ ಕೋಡಿ ಮೂಲಕ ಮುಂದಿನ ಕೆರೆಗೆ ನೀರು ಹರಿಯಬೇಕು ಎಂದರು.

ಮುಂದಿನ ಎರಡು ದಿನಗಳ ನಂತರ ಮತಿಘಟ್ಟ ಕೆರೆಗೆ ನೀರು ಹರಿಸುವ ಪ್ರಯತ್ನ ಮಾಡಲಾಗುವುದು. ಅದಕ್ಕೆ ಎಲ್ಲಾ ಗ್ರಾಮಗಳ ರೈತರು ಸಹಕಾರ ನೀಡಬೇಕು. ಎಲ್ಲಾ ಕೆರೆಗಳಿಗೆ ಶೇ. 25 ರಷ್ಟು ನೀರು ಹರಿಸುವ ಪ್ರಯತ್ನ ಮಾಡಲಾಗುವುದು ಎಂದರು. ಅದಕ್ಕೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದ ರೈತರು ಗಲಾಟೆ ಶುರು ಮಾಡಿದರು. ಪರಿಸ್ಥಿತಿ ಶಾಂತಗೊಳಿಸಲು ಅಧಿಕಾರಿಗಳು ಹರಸಾಹಸಪಟ್ಟರು.

ರೈತರಾದ ನಾಗರಾಜು, ಬಿ.ಎಂ.ಮಂಜುನಾಥ್, ರೈತ ಸಂಘದ ರಘು, ಅಣ್ಣಪ್ಪಸ್ವಾಮಿ, ದಿಲೀಪ್, ನಂಜೇಗೌಡ, ರಂಗಸ್ವಾಮಿ, ನಾಗೇಶ್, ನಿಂಗೇಗೌಡ, ನಾಗರಾಜು, ನಿಂಗೇಗೌಡ, ಮತಿಘಟ್ಟ ರಂಗಸ್ವಾಮಿ ಮತ್ತಿತರರಿದ್ದರು.

# ಅಕ್ರಮ ಸಂಬಂಧಕ್ಕೆ ಅಡ್ಡಿ : ಪತಿ ಹತ್ಯೆಗೆ ಸುಫಾರಿ

» ಮೊದಲನೇ ಪುಟದಿಂದ

ಯಾರಿಗೂ ತಿಳಿದಿರಲಿಲ್ಲ. ಮೋಹನ್ ಪ್ರತಿದಿನ ರಾತ್ರಿ ಶುಂಠಿಗೆ ನೀರು ಹಾಯಿಸಲು ತೆರಳುತ್ತಿದ್ದ. ಶುಂಠಿಗೆ ಒಳ್ಳೆಯ ಬೆಲೆ ಇರುವುದರಿಂದ ಮಾರಾಟ ಮಾಡಲು ಮೋಹನ್ ನಿರ್ಧರಿಸಿದ್ದ. ಈ ವಿಷಯ ತಿಳಿದಿದ್ದ ಮೋಹನ್ ಪತ್ನಿ ಜಯಲಕ್ಷ್ಮಿ ಶುಂಠಿ ಮಾರಾಟ ಮಾಡಿದ ದುಡ್ಡು ಪತಿ ಕೈಗೆ ಸಿಗಲಿದೆ ಎಂದು ಪ್ರಿಯಕರನ ಜೊತೆ ಸೇರಿ ಕೊಲೆಗೆ ಸಂಚು ರೂಪಿಸಿ, ತಾಳಿ ಕಟ್ಟಿದ ಪತಿಯನ್ನು ಮುಗಿಸಲು ಒಂದು ಲಕ್ಷ ರೂಪಾಯಿ ಜಗದೀಶ್ ಹಾಗೂ ಪುಟ್ಟರಾಜುಗೆ ಸುಪಾರಿ ಕೊಟ್ಟಿದ್ದರು. ಪತಿ ಕೊಲೆ ನಂತರ ಶುಂಠಿ ಮಾರಿ ಹಣ ತೆಗೆದುಕೊಂಡು ಹೋಗಲು ಜಯಲಕ್ಷ್ಮಿ ಹಾಗು ಧನಂಜಯಮೂರ್ತಿ ನಿರ್ಧರಿಸಿದ್ದರು.

ಕಳೆದ ಬುಧವಾರ (ಸೆ.2) ರಾತ್ರಿ ಮೋಹನ್ ಕೊಲೆ ಮಾಡಲು ಹಂತಕರು ಸಂಚು ರೂಪಿಸಿದ್ದರು. ಆದರೆ, ಮೋಹನ್ ಜೊತೆ ಆತನ ಜಮೀನಿನ ಅಕ್ಕಪಕ್ಕದಲ್ಲಿ ಶುಂಠಿ ಬೆಳೆದಿದ್ದ ರವಿ ಹಾಗು ಮಂಜು ಎಂಬುವವರು ಇದ್ದ ಕಾರಣ ಸಾಧ್ಯವಾಗಿರಲಿಲ್ಲ. ಅಂದು ಕೊಲೆ ಮಾಡಲು ಯತ್ನಿಸಿ ವಿಫಲರಾಗಿದ್ದ ಧನಂಜಯಮೂರ್ತಿ, ಜಗದೀಶ್, ಪುಟ್ಟರಾಜು ಅವರಿಗೆ ಶುಕ್ರವಾರ ರಾತ್ರಿ ಪತಿ ಕೊಲೆಗೆ ಜಯಲಕ್ಷ್ಮಿ ಯೋಜನೆ ಹಾಕಿಕೊಟ್ಟಿದ್ದಳು. ರಾತ್ರಿ ಶುಂಠಿ ಬೆಳೆಗೆ ನೀರು ಹಾಯಿಸಲು ಪತಿ ಮೋಹನ್ ತೆರಳುತ್ತಿದ್ದಂತೆ ಪ್ರಿಯಕರ ಧನಂಜಯಮೂರ್ತಿಗೆ ಫೋನ್ ಮಾಡಿ ವಿಷಯ ತಿಳಿಸಿದ್ದಾಳೆ. ಜಮೀನಿನ ಬಂದು ಶುಂಠಿಗೆ ನೀರು ಹಾಯಿಸಲು ವಿದ್ಯುತ್‌ಗಾಗಿ ಕಾಯುತ್ತಿದ್ದ ಮೋಹನ್ ಇರುವ ಸ್ಥಳಕ್ಕೆ ಬಂದ ಜಗದೀಶ್, ಮೋಹನ್ ಜೊತೆ ಮಾತನಾಡುತ್ತ ಕುಳಿತ್ತಿದ್ದ ವೇಳೆ ಹಿಂದಿನಿಂದ ಬಂದು ರಾಡ್‌ನಿಂದ ತಲೆಗೆ ಹೊಡೆದು ಹಲ್ಲೆ ನಡೆಸಿ ಕೊಲೆ ಮಾಡಿದ್ದಾರೆ.

**ಹಂತಕರಿಗೆ ಫೋನ್ ಪೇನಲ್ಲಿ ಹಣ**

ಕೊಲೆ ಮಾಡಿದ ಬಳಿಕ ಧನಂಜಯಮೂರ್ತಿ, ಜಯಲಕ್ಷ್ಮಿಗೆ ಕರೆ ಮಾಡಿ ಮೋಹನ್ ಮೃತಪಟ್ಟಿರುವ ವಿಷಯ ತಿಳಿಸಿದ್ದ. ನಂತರ ಮುಂಗಡವಾಗಿ ಹತ್ತು ಸಾವಿರ ರೂ ಹಣವನ್ನು ಹಂತಕರಿಗೆ ಫೋನ್ ಪೇ ಮಾಡಿದ್ದರು. ಬಳಿಕ ತನಗೇನು ಗೊತ್ತಿಲ್ಲದಂತೆ ಜಯಲಕ್ಷ್ಮಿ ಭಯಂಕರ ನಟನೆ ಮಾಡಿದ್ದಳು. ಗಂಡಸಿ ಠಾಣೆ ಪೊಲೀಸರು ತನಿಖೆ ನಡೆಸಿದ ವೇಳೆ ಕೊಲೆ ರಹಸ್ಯ ಬಯಲಾಗಿದೆ.

# ಎಸ್ಸಿ-ಎಸ್ಟಿ ಮೇಲೆ ದೌರ್ಜನ್ಯ: ಪರಿಹಾರ ವಿಳಂಬವಾದರೆ ಕ್ರಮ

» ಮೊದಲನೇ ಪುಟದಿಂದ

ಕೈಗೊಳ್ಳಬೇಕೆಂದು ಅಧಿಕಾರಿಗಳಿಗೆ ಸೂಚಿಸಲಾಗುವುದೆಂದರು.

ದಲಿತ ಸಮುದಾಯದ ಜನರಿಗೆ ಸರ್ಕಾರದ ಸೌಲಭ್ಯಗಳು ಸಮರ್ಪಕವಾಗಿ ತಲುಪುವುದರ ಜೊತೆಗೆ, ಅವರ ಜಮೀನು, ಹಕ್ಕು ಮತ್ತು ರಕ್ಷಣೆಗೆ ಸಂಬಂಧಿಸಿದ ದೂರುಗಳಿಗೆ ನ್ಯಾಯ ದೊರಕಿಸುವುದು ಆಯೋಗದ ಪ್ರಮುಖ ಉದ್ದೇಶವಾಗಿದೆ. ಈ ನಿಟ್ಟಿನಲ್ಲಿ ಜಿಲ್ಲಾಮಟ್ಟದಲ್ಲಿ ಬಾಕಿ ಇರುವ ಪ್ರಕರಣಗಳ ಕುರಿತು ಅಧಿಕಾರಿಗಳಿಂದ ಮಾಹಿತಿ ಪಡೆದು ಶೀಘ್ರ ಪರಿಹಾರಕ್ಕೆ ಕ್ರಮ ಕೈಗೊಳ್ಳಲಾಗುವುದೆಂದು ಹೇಳಿದರು.

**ಹಾಸ್ಟೆಲ್‌ಗಳಿಗೆ ಮೂಲ ಸೌಕರ್ಯಕ್ಕೆ ಕ್ರಮ**

ವಸತಿ ನಿಲಯಗಳಲ್ಲಿ ಮೂಲಸೌಕರ್ಯಗಳಿಲ್ಲದೆ ಮಕ್ಕಳ ಶೈಕ್ಷಣಿಕ ಪ್ರಗತಿ ಕುಂಠಿತವಾಗಲು ಪ್ರಮುಖ ಕಾರಣವಾಗಿದೆ. ಈ ನಿಟ್ಟಿನಲ್ಲಿ ಸಮಾಜ ಕಲ್ಯಾಣ ಇಲಾಖೆ ಮುಖ್ಯಕಾರ್ಯದರ್ಶಿ, ಸಚಿವರೊಂದಿಗೆ ಚರ್ಚಿಸಿ ಸೌಲಭ್ಯ ಕಲ್ಪಿಸಲು ಕ್ರಮ ಕೈಗೊಳ್ಳಲಾ ಗುವುದು. ವಸತಿ ನಿಲಯಗಳಿನ ವಿದ್ಯಾರ್ಥಿಗಳ ಭದ್ರತೆಯ ದೃಷ್ಟಿಯಿಂದ ಜಿಲ್ಲಾ ಮಟ್ಟದ ಅಧಿಕಾರಿಗಳ ನೇತೃತ್ವದಲ್ಲಿ ಸಮಿತಿಯೊಂದನ್ನು ರಚಿಸಿ, ಪ್ರತಿ ಮೂರು ತಿಂಗಳಿಗೊಮ್ಮೆ ತಪಾಸಣೆ ನಡೆಸಿ ಆಯೋಗಕ್ಕೆ ವರದಿ ತರಿಸಿಕೊಂಡು ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಿದರು.

ಅಪರ ಜಿಲ್ಲಾಧಿಕಾರಿ ಕೃಷ್ಣಮೂರ್ತಿ, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶುಭಂಶುಕ್ಲಾ, ಎಎಸ್ಪಿ ಶ್ರೀನಿಧಿ ಹಾಗು ಆಯೋಗದ ಸದಸ್ಯರು ಹಾಜರಿದ್ದರು.

# ಪ್ರಚಲಿತ ವಿದ್ಯಾಮಾನಗಳು ಶೈಕ್ಷಣಿಕ ಸಾಧನೆಗೆ ಸಹಕಾರಿ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ವಿದ್ಯಾರ್ಥಿಗಳು ಮೊಬೈಲ್ ಬಳಕೆಗೆ ಹೆಚ್ಚು ಸಮಯ ನೀಡದೆ, ಪ್ರತಿನಿತ್ಯ ದಿನಪತ್ರಿಕೆ ಓದುವ ಹವ್ಯಾಸ ಬೆಳೆಸಿಕೊಳ್ಳಬೇಕು. ಅದರಿಂದ ಪ್ರಚಲಿತ ವಿದ್ಯಮಾನಗಳ ಕುರಿತು ಜ್ಞಾನ ಹೆಚ್ಚುವುದರ ಜೊತೆಗೆ ಶೈಕ್ಷಣಿಕ ಸಾಧನೆಗೂ ಸಹಕಾರಿಯಾಗಲಿದೆ ಎಂದು ಶಾಸಕ ಸಿ.ಎನ್. ಬಾಲಕೃಷ್ಣ ಅವರು ಸಲಹೆ ನೀಡಿದರು.

ಪಟ್ಟಣದ ಶಾಲಿನಿ ಅಂತರಾಷ್ಟ್ರೀಯ ಶಾಲೆಯಲ್ಲಿ ಕರ್ನಾಟಕ ರಾಜ್ಯ ಮಕ್ಕಳ ಸಾಹಿತ್ಯ ಪರಿಷತ್ ವತಿಯಿಂದ ಆಯೋಜಿಸಿದ್ದ 13ನೇ ವರ್ಷದ ಮಕ್ಕಳ ಚಾವಡಿ ಮನೆ-ಮನ ಕಾರ್ಯಕ್ರಮ ಮತ್ತು ದೇಶಿಕಲೆ, ದೇಶಿ ಆಟ, ಸಾಂಸ್ಕೃತಿಕ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ವಿದ್ಯಾರ್ಥಿಗಳು ಓದುವ ಹವ್ಯಾಸವನ್ನು ಬೆಳೆಸಿಕೊಳ್ಳುವುದು ಅವರ ಶೈಕ್ಷಣಿಕ ಮತ್ತು ವೈಯಕ್ತಿಕ ಬೆಳವಣಿಗೆಗೆ ಅವಶ್ಯಕವಾಗಿದೆ. ಪತ್ರಿಕೆಯಲ್ಲಿ ಪ್ರಕಟವಾಗುವ ವಾಚಕರ ವಾಣಿ, ಸಂಪಾದಕೀಯ, ಅಂಕಣಗಳು, ಕ್ರೀಡಾ ಸುದ್ದಿಗಳು ಪತ್ರಿಕೆಯ ಯಾವ ಭಾಗದಲ್ಲಿ ಪ್ರಕಟವಾಗುತ್ತವೆ. ಅವುಗಳ ಪ್ರಾಮುಖ್ಯತೆ ಏನು ಎಂಬುದನ್ನು ತಿಳಿದುಕೊಳ್ಳಬೇಕು ಎಂದರು.

ಇಂದಿನ ಒತ್ತಡದ ಬದುಕಿನಲ್ಲಿ



ಪುಸ್ತಕ, ಪತ್ರಿಕೆ ಓದುವ ಅಭಿರುಚಿ ಕಳೆದುಕೊಳ್ಳುತ್ತಿದ್ದೇವೆ. ಪುಸ್ತಕಗಳು ನಮ್ಮ ಜ್ಞಾನ ವೃದ್ಧಿಸುವ ಸ್ನೇಹಿತರಾಗಿವೆ. ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೆ ಪುಸ್ತಕಗಳು ಸಹಕಾರಿ ಓದುವ ಅಭಿರುಚಿಯನ್ನು ಎಲ್ಲರೂ ಬೆಳೆಸಿಕೊಳ್ಳಬೇಕು.ವಿದ್ಯಾರ್ಥಿಗಳು ಅತಿಯಾದ ಮೊಬೈಲ್ ಬಳಕೆಯಿಂದ ಅನುಕೂಲಗಳಿಗಿಂತ ಅನಾನುಕೂಲಗಳೇ ಹೆಚ್ಚು. ತಂತ್ರಜ್ಞಾನ ನಮಗೆ ಜಗತ್ತನ್ನೇ ಕೈಬೆರಳ ತುದಿಗೆ ತಂದುಕೊಟ್ಟಿದ್ದರೂ, ಅದರ ಅತಿಯಾದ ಮತ್ತು ತಪ್ಪು ಬಳಕೆ ನಮ್ಮ ಜೀವನದ ಮೇಲೆ ಗಂಭೀರವಾದ ನಕಾರಾತ್ಮಕ ಪರಿಣಾಮಗಳನ್ನು ಬೀರುತ್ತಿದೆ ಎಂದು ಕಳವಳ ವ್ಯಕ್ತಪಡಿಸಿದರು.

ಮಕ್ಕಳ ಭವಿಷ್ಯವನ್ನು ರೂಪಿಸುವಲ್ಲಿ ಮಕ್ಕಳ ಸಾಹಿತ್ಯ ಪರಿಷತ್‌ನ ಪಾತ್ರ ಮಹತ್ವದ್ದಾಗಿದೆ. ಬಾಲ್ಯದಲ್ಲಿ ಮಕ್ಕಳ ಮನಸ್ಸು ಮೃದುವಾದ ಮಣ್ಣಿನಂತಿರುತ್ತದೆ. ಆ ಸಮಯದಲ್ಲಿ ಅವರಿಗೆ ಎಂತಹ ಸಂಸ್ಕಾರ ಮತ್ತು ಜ್ಞಾನವನ್ನು ನೀಡುತ್ತೇವೆಯೋ, ಅದೇ ಅವರ ಭವಿಷ್ಯದ ವ್ಯಕ್ತಿತ್ವಕ್ಕೆ ಬುನಾದಿಯಾಗುತ್ತದೆ. ಈ ನಿಟ್ಟಿನಲ್ಲಿ ಮಕ್ಕಳ ಸಾಹಿತ್ಯ ಪರಿಷತ್ ನಿರಂತರವಾಗಿ ಶ್ರಮಿಸುತ್ತಿದೆ. ಮಕ್ಕಳಿಗಾಗಿ ಕವಿಗೋಷ್ಠಿ, ನಾಟಕೋತ್ಸವ ಮತ್ತು ಸಾಹಿತ್ಯ ಸಮ್ಮೇಳನಗಳನ್ನು ಆಯೋಜಿಸುತ್ತದೆ. ಇದು ಮಕ್ಕಳಲ್ಲಿ ಅಡಗಿರುವ ಸುಪ್ತ ಪ್ರತಿಭೆಗಳನ್ನು ಹೊರತರಲು ಮತ್ತು ಅವರಲ್ಲಿ ಆತ್ಮವಿಶ್ವಾಸ ಹೆಚ್ಚಿಸಲು ಸಹಕಾರಿಯಾಗಿದೆ. ನಾಡಿನ ಹಬ್ಬಗಳು, ಸಂಪ್ರದಾಯಗಳು, ಗ್ರಾಮೀಣ ಕಲೆ, ಕ್ರೀಡೆ ಮತ್ತು ಇತಿಹಾಸವನ್ನು ಸರಳ ಭಾಷೆಯಲ್ಲಿ ಮಕ್ಕಳಿಗೆ ತಲುಪಿಸುವ ಮೂಲಕ ಅವರು ತಮ್ಮ ಬೇರುಗಳನ್ನು ಮರೆಯದಂತೆ ಜವಾಬ್ದಾರಿಯುತ ನಾಗರಿಕರನ್ನಾಗಿ ರೂಪಿಸುತ್ತಿದೆಂದು ಶ್ಲಾಘಿಸಿದರು.

ಕ್ಷೇತ್ರ ಶಿಕ್ಷಣಾಧಿಕಾರಿ ಹೆಚ್.ಹೆಚ್. ಸತೀಶ್ ಅವರು ಮಾತನಾಡಿ, ಮಕ್ಕಳಿಗೆ ಗ್ರಾಮೀಣ ಕಲೆಗಳ ವಿಶೇಷತೆಗಳನ್ನು ಪರಿಚಯ ಮಾಡಿಕೊಡಬೇಕು. ನಮ್ಮ ನೆಲದ ಗಟ್ಟಿತನ ಉಳಿಸಲು ಮೂಲ ಜನಪದವನ್ನು ಬೆಳೆಸಬೇಕು. ಗ್ರಾಮೀಣ ಕಲೆಗಳನ್ನು ಮಕ್ಕಳಿಗೆ ಪರಿಚಯಿಸಬೇಕೆಂದರು.

ಕಾರ್ಯಕ್ರಮದ ಅಂಗವಾಗಿ ವಿದ್ಯಾರ್ಥಿಗಳಿಗೆ ಸಾಂಸ್ಕೃತಿ ಕಾರ್ಯಕ್ರಮ ಮತ್ತು ದೇಸಿ ಕ್ರೀಡೆಗಳನ್ನು ಆಯೋಜಿಸಲಾಗಿತ್ತು.

ಮಕ್ಕಳ ಸಾಹಿತ್ಯ ಪರಿಷತ್ ರಾಜ್ಯಾಧ್ಯಕ್ಷ ಸಿ.ಎನ್.ಅಶೋಕ್, ಗೌರವಾಧ್ಯಕ್ಷ ಮಹದೇವ್, ಕಾರ್ಯದರ್ಶಿ ಸಿದ್ದೇಶ್, ವಿದ್ಯಾರ್ಥಿ ಪ್ರತಿನಿಧಿಗಳಾದ ಪೂರ್ಣಾ, ಉನ್ನತಿ ಹೆಗ್ಗಡೆ, ಲತಾ ಪುಟ್ಟೇಗೌಡ, ದೀಪ್ತಿ, ಸಿ.ಪಿ.ಕುಮಾರ್, ಅಜ್ಜು ಗಂಗಾಧರ್ ಸೇರಿ ಶಿಕ್ಷಕ ವೃಂದ ಹಾಗೂ ವಿದ್ಯಾರ್ಥಿಗಳು ಇದ್ದರು.

## ಎಸ್‌ಪಿ ವರ್ಗಾವಣೆಗೆ ಎಎಪಿ ರಾಜ್ಯ ಉಪಾಧ್ಯಕ್ಷ ಅಗಿಲೆ ಯೋಗೀಶ್ ಆಗ್ರಹ

# ಜಿಲ್ಲೆಯಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡುವಲ್ಲಿ ವಿಫಲ

• ಪ್ರಜೋದಯ ವರದಿ

**ಹಾಸನ:** ಜಿಲ್ಲೆಯಲ್ಲಿ ಕೊಲೆ, ಸುಲಿಗೆ, ಗಾಂಜಾ-ಡ್ರಗ್ಸ್ ಸೇವನೆ ಮತ್ತು ಮಾರಾಟ ಸೇರಿ ಅಕ್ರಮ ಚಟುವಟಿಕೆಗಳು ಹೆಚ್ಚುತ್ತಿದ್ದರೂ ಕಠಿಣ ಕ್ರಮ ಕೈಗೊಳ್ಳುವಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ಜನ ಪ್ರತಿನಿಧಿಗಳು ವಿಫಲವಾಗಿದ್ದಾರೆಂದು ಎಎಪಿ ರಾಜ್ಯ ಉಪಾಧ್ಯಕ್ಷ ಅಗಿಲೆ ಯೋಗೀಶ್ ಅವರು ಆರೋಪಿಸಿದರು.




ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಗರದಲ್ಲಿ ಹಾಡಹಗಲೇ ಮಧ್ಯೆ ರಸ್ತೆಯಲ್ಲಿ ವ್ಯಕ್ತಿಯೊಬ್ಬನನ್ನು ಬರ್ಬರವಾಗಿ ಹತ್ಯೆ ಮಾಡಲಾಗಿದೆ. ಕೈಗಾರಿಕಾ ಪ್ರದೇಶದಲ್ಲಿ ಇಬ್ಬರು ಕಾರ್ಮಿಕರ ಮೇಲೆ ಮಾರಕಾಸ್ತ್ರಗಳಿಂದ ದಾಳಿ ಮಾಡಿ ದರೋಡೆ ನಡೆಸಿದ್ದಾರೆ. ರಸ್ತೆಯಲ್ಲಿ ಮಚ್ಚು, ಲಾಂಗ್ ಹಿಡಿದು ಪುಂಡರು ಅಟ್ಟಹಾಸ ಮೆರೆಯುತ್ತಿರುವ ಘಟನೆಗಳು ನಡೆಯುತ್ತಿವೆ. ಕಳ್ಳತನ, ದರೋಡೆ ಹಾಗು ಕೊಲೆ ಪ್ರಕರಣಗಳು ವರದಿಯಾಗುತ್ತಿದ್ದರೂ ಪೊಲೀಸ್ ಇಲಾಖೆ ಪರಿಣಾಮಕಾರಿ ಕ್ರಮ ಕೈಗೊಳ್ಳುತ್ತಿಲ್ಲ ಎಂದು ದೂರಿದರು.

ಜಿಲ್ಲೆಯಲ್ಲಿ ಕಾನೂನು ಬಾಹಿರ ಚಟುವಟಿಕೆಗಳಿಗೆ ಕಡಿವಾಣ ಹಾಕುವಲ್ಲಿ, ಕಾನೂನು ಸುವ್ಯವಸ್ಥೆ ಕಾಪಾಡುವಲ್ಲಿ ವಿಫಲರಾಗಿರುವ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯನ್ನು ಕೂಡಲೇ ವರ್ಗಾವಣೆ ಮಾಡಬೇಕು. ಜಿಲ್ಲೆಯ ಕಾನೂನು ಸುವ್ಯವಸ್ಥೆ ವಿಚಾರದಲ್ಲಿ ಉಸ್ತುವಾರಿ ಸಚಿವರು ಹಾಗು ಸಂಸದರು ಕೂಡ ತಮ್ಮ ಜವಾಬ್ದಾರಿ ನಿರ್ವಹಿಸುವಲ್ಲಿ ವಿಫಲರಾಗಿದ್ದಾರೆ. ಗುಪ್ತಚರ ಇಲಾಖೆ ಏನು ಮಾಡುತ್ತಿದೆಂದು ಪ್ರಶ್ನಿಸಿದ ಅವರು, ಜಿಲ್ಲೆಯಲ್ಲಿ ಹೆಚ್ಚುತ್ತಿರುವ ಅಪರಾಧ ಚಟುವಟಿಕೆ ಬಗ್ಗೆ ತಕ್ಷಣ ಗಮನಹರಿಸಿ ಅಗತ್ಯ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು.

ಪಕ್ಷದ ಮುಖಂಡರಾದ ಮಧು, ಮಂಜುನಾಥ್, ವಿಕಾಸ್, ಗೌರಮ್ಮ, ಖಾದರ್ ಇದ್ದರು.

**ನಾಳೆ ಬಾಯಿ ಬಡಿದುಕೊಳ್ಳುವ ಚಳವಳಿ**

ಜಿಲ್ಲೆಯಲ್ಲಿ ಹೆಚ್ಚುತ್ತಿರುವ ಅಪರಾಧ ಪ್ರಕರಣಗಳು ಹಾಗು ಹದಗೆಡುತ್ತಿರುವ ಕಾನೂನು ಸುವ್ಯವಸ್ಥೆ ಖಂಡಿಸಿ, ವಿವಿಧ ಅಪರಾಧ ಪ್ರಕರಣ ತಡೆಗೆ ವಿಫವಾಗಿರುವ ಪೊಲೀಸರ ವೈಫಲ್ಯದ ವಿರುದ್ಧ ಪಕ್ಷದ ವತಿಯಿಂದ ಸೆ.11 ರಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಚೇರಿ ಎದುರು ಬಾಯಿ ಬಡಿದುಕೊಳ್ಳುವ ಮೂಲಕ ವಿನೂತನವಾಗಿ ಪ್ರತಿಭಟನೆ ನಡೆಸಲಾಗುವುದೆಂದು ಅಗಿಲೆ ಯೋಗೀಶ್ ತಿಳಿಸಿದರು.

# 1.20 ಲ. ರೂ. ಬೆಲೆಯ ಕೊಬ್ಬರಿ ಕಳವು

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಹಳೇ ಮನೆಯಲ್ಲಿಟ್ಟಿದ್ದ ಸುಮಾರು 1.20 ಲ. ರೂ. ಮೌಲ್ಯದ 9 ಕೊಬ್ಬರಿ ಚೀಲ ಕಳವು ಮಾಡಿರುವ ಘಟನೆ ತಾಲ್ಲೂಕಿನ ಕಗ್ಗೆರೆ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ಶಿವೇಗೌಡ ಅವರು ಕೊಬ್ಬರಿ ತುಂಬಿದ ಚೀಲಗಳನ್ನು ತಮ್ಮ ಹಳೇ ಮನೆಯಲ್ಲಿಟ್ಟು ಬೀಗ ಹಾಕಿ ದ್ದರು. ಬೆಳಿಗ್ಗೆ ಎದ್ದು ನೋಡಿದಾಗ ನಾಪತ್ತೆಯಾಗಿವೆ. ಹಿಂಬಾಗದ ಬಾಗಿಲು ಚಿಲಕ ತೆಗೆದು ಒಳಗೆ ಪ್ರವೇಶಿಸಿರುವ ಕಳ್ಳರು ಕಳ್ಳತನ ಮಾಡಿದ್ದಾರೆ. ನುಗ್ಗೇಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಚಿನ್ನದ ಸರ ಕಳವು

• ಪ್ರಜೋದಯ ವರದಿ

**ಹೊಳೆನರಸೀಪುರ:** ಚಲಿಸುತ್ತಿದ್ದ ಬಸ್‌ನಲ್ಲಿ ಮಹಿಳೆಯ ಗಮನಕ್ಕೆ ಬಾರದಂತೆ ವ್ಯಾನಿಟಿ ಬ್ಯಾಗ್‌ನಲ್ಲಿದ್ದ 1.19 ಲ. ರೂ. ಮೌಲ್ಯದ ಚಿನ್ನಾಭರಣ ಕಳವು ಮಾಡಿರುವ ಘಟನೆ ನಡೆದಿದೆ. ಹಳೇಕೋಟೆ ಹೋಬಳಿ ಕೆ.ಕೆ. ಹೊಸೂರು ಗ್ರಾಮದ ಚನ್ನಿಗಯ್ಯ ಹಾಗು ಹೆಂಡತಿ ಮೀನಾಕ್ಷಿ ಪೇಟೆಬೀದಿಯ ಕುಮಾರ್ ಜುಯಲರ್ಸ್‌ನಲ್ಲಿ ಚಿನ್ನದ ಸರ ಖರೀದಿಸಿ ಹೊರಟಿದ್ದರು. ಬಸ್ ಹತ್ತಿದ ಕೆಲವೇ ಹೊತ್ತಿನಲ್ಲಿ ವ್ಯಾನಿಟಿ ಬ್ಯಾಗ್ ನೋಡಿದಾಗ ಪರ್ಸ್ ಮತ್ತು ಚಿನ್ನದ ಸರ ನಾಪತ್ತೆಯಾಗಿರುವುದು ತಿಳಿದಿದೆ. ಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019

CMYK CMYK CMYK CMYK